ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 20 ಮಂಗಳವಾರ 2025

₹4

ಸಂಪುಟ: 46 | ಸಂಚಿಕೆ: 34 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಮಿತ್ರ ಮಂಗಳವಾರ 20 ಮೇ 2025

ಬರೀ ಮಾತಿಗಷ್ಟೇ ಮಹನೀಯರ ಹೆಸರು ಹೇಳುವುದು ಹೆಚ್ಚಾಗಿದೆ

ಪ್ರಗತಿಪರ ಚಿಂತಕ ಡಾ.ಆರ್.ಮೋಹನ್‌ರಾಜ್ ವಿಷಾದ



ಮೈಸೂರಿನ ವಿಜಯನಗರ 3ನೇ ಹಂತದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯದಲ್ಲಿ ಸೋಮವಾರ ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು.

ಮೈಸೂರು, ಮೇ 19(ಎಂಟಿವೈ)– ಕೇವಲ ಬಾಯಿ ಮಾತಿಗೆ ಬುದ್ಧ, ಬಸವ, ಅಂಬೇಡ್ಕರ್ ಹೆಸರನ್ನು ಹೇಳುವುದನ್ನು ಬಿಟ್ಟು, ಇವರ ತತ್ವ ಸಿದ್ಧಾಂತವನ್ನು ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ನಾಗರಿಕರಾಗಿ ಹೊರಹೊಮ್ಮಬೇಕು ಎಂದು ಪ್ರಗತಿಪರ ಚಿಂತಕ ಡಾ.ಆರ್.ಮೋಹನ್ ರಾಜ್ ಸಲಹೆ ನೀಡಿದ್ದಾರೆ.

ಮೈಸೂರಿನ ವಿಜಯನಗರ 3ನೇ ಹಂತದ ಸಿದ್ದಲಿಂಗೇಶ್ವರನಗರದ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಜ್ಞಾನೋತ್ಸವ–2025 ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಕೆಲವರು ಬಾಯಿ ಮಾತಿಗಷ್ಟೇ ಬುದ್ಧ, ಬಸವ, ಅಂಬೇಡ್ಕರ್ ಹೆಸರನ್ನು ಹೇಳುತ್ತಿರುವುದು ಹೆಚ್ಚಾಗಿದೆ. ಅವರ ತತ್ವ ಸಿದ್ಧಾಂತಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಾರೆ. ಅದನ್ನು ನಿಲ್ಲಿಸಿ, ಇಂತಹ ಮಹನೀಯರ ತತ್ವ, ಸಂದೇಶವನ್ನು ಜೀವನ ಅಳವಡಿಸಿಕೊಳ್ಳಬೇಕು. ಉತ್ತಮ ನಾಗರಿಕರಾಗಿ ಮಾದರಿಯಾಗಬೇಕು ಎಂದರು.

ಮುಖ್ಯ ಅತಿಥಿಗಳಾಗಿದ್ದ ಚಂದ್ರಮ್ಮ ಮಾತನಾಡಿ, ಜ್ಞಾನಕ್ಕೆ ಮಾದರಿ ಅಂಬೇಡ್ಕರ್. ನಾವೆಲ್ಲಾ ಅಂಬೇಡ್ಕರ್ ಅನುಯಾಯಿಗಳು. ವಿದ್ಯಾರ್ಥಿಗಳು ನಿಮ್ಮ ಬಡತನವನ್ನು ಹೋಗಲಾಡಿಸಬೇಕಾದರೆ ಸರ್ಕಾರದ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಪೋಷಕರು ಪಟ್ಟ ಕಷ್ಟವನ್ನು ನೆನೆಸಿಕೊಂಡು ಕಠಿಣ ಪರಿಶ್ರಮ ಪಡಬೇಕು. ದುಶ್ಚಟಗಳಿಂದ ದೂರವಿದ್ದು, ಸಾಧನೆ ಮಾಡುವ ಗುರಿ ಇಟ್ಟುಕೊಂಡು ಚೆನ್ನಾಗಿ ಓದಬೇಕು ಎಂದರು.

ನಿಲಯಪಾಲಕರಾದ ಕೆ.ಎ.ಎಸ್. ಪ್ರದೀಪ್ ಮಾತನಾಡಿ, ವಿದ್ಯಾರ್ಥಿಗಳು ಅಂಬೇಡ್ಕರ್‌ರಂತೆ ಜ್ಞಾನಿಗಳಾಗಬೇಕೆಂಬ ಉದ್ದೇಶದಿಂದ ಈ ಕಾರ್ಯಕ್ರಮಕ್ಕೆ ಜ್ಞಾನೋತ್ಸವ ಎಂದು ಹೆಸರಿಡಲಾಗಿದೆ. ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಒದಗಿಸಿರುವ ಅವಕಾಶವೇ ಸುಖಕರ ಜೀವನಕ್ಕೆ ಕಾರಣ. ಪೋಷಕರಿಗೆ ನ್ಯಾಯ ಒದಗಿಸಬೇಕಾದರೆ ಮೊಬೈಲ್‌ನಿಂದ ದೂರವಿದ್ದು ಚೆನ್ನಾಗಿ ಓದಬೇಕು. ವಿದ್ಯೆ ಜೊತೆಗೆ ಸಂವಿಧಾನವನ್ನು ಓದಿಕೊಂಡು ಜೀವನ ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ನಿಲಯಪಾಲಕರಾದ ಕೆ.ಮಹೇಶ್, ಚಿಕ್ಕೀರಯ್ಯ, ಮಹೇಶ್, ವಸಂತಕುಮಾರಿ, ಕುಮಾರಿ, ಪ್ರಸಾದ್, ಪವಿತ್ರ, ಕಾರ್ತಿಕ್, ಕಮಲಾಕ್ಷಿ, ಮಹೇಶ್, ಜಾನಪದ ಗಾಯಕ ಅಮ್ಮ ರಾಮಚಂದ್ರ ಹಾಜರಿದ್ದರು. ಓಂರಮೇಶ್ ನಿರೂಪಿಸಿದರು.

ಹೆಚ್.ಡಿ.ದೇವೇಗೌಡರ ಹುಟ್ಟುಹಬ್ಬ ಆಚರಣೆ...



ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದ ವತಿಯಿಂದ ಶ್ರೀರಾಂಪುರದ ಶ್ರೀ ಬಸವೇಶ್ವರ ನವಚೇತನ ವಿಶೇಷ ಶಾಲೆ ಮಕ್ಕಳಿಗೆ ಹಣ್ಣು ಹಂಪಲು, ಉಪಾಹಾರ ನೀಡುವ ಮೂಲಕ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಹುಟ್ಟುಹಬ್ಬ ಆಚರಿಸಲಾಯಿತು. ಈ ವೇಳೆ ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ, ಕುಮಾರ್ ಬೀಡನಹಳ್ಳಿ, ಚಂದ್ರಶೇಖರ್, ನಾಗರಾಜು, ಅಜಯ್, ಧರ್ಮಪಾಲ್‌ಗೌಡ, ಶಾಲೆಯ ಸಂಸ್ಥಾಪಕ ಮರೀಗೌಡರು ಉಪಸ್ಥಿತರಿದ್ದರು.

ಮೇ 23ರಿಂದ ಕುಪ್ಪಣ್ಣ ಪಾರ್ಕ್‌ನಲ್ಲಿ ಮಾವು, ಹಲಸು ಮೇಳ

ಮೈಸೂರು,ಮೇ 19(ಎಂಟಿವೈ)– ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ತೋಟಗಾರಿಕಾ ಇಲಾಖೆ ಮೇ 23ರಿಂದ 25ರವರೆಗೆ ಮೂರು ದಿನಗಳ ಮಾವು ಮತ್ತು ಹಲಸು ಮೇಳ ಆಯೋಜಿಸಿದ್ದು, ಸುಮಾರು 45 ಮಳಿಗೆಗಳಲ್ಲಿ ವಿವಿಧ ಬಗೆಯ ಮಾವುಗಳ ಮಾರಾಟಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಮೈಸೂರಿನ ಮಾರುಕಟ್ಟೆಗೆ ಈಗಾಗಲೇ ವಿವಿಧೆಡೆಯಿಂದ ಮಾವಿನ ಹಣ್ಣುಗಳು ಲಗ್ಗೆ ಇಟ್ಟಿದ್ದು, ಗ್ರಾಹಕರ ನಾಲಿಗೆಯ ರುಚಿ ತಣಿಸುತ್ತಿವೆ. ಹಣ್ಣುಗಳ ರಾಜ ಎಂದು ಕರೆಯಲ್ಪಡುವ ಮಾವಿನ ಬೆಳೆ ಈ ಬಾರಿ ಉತ್ತಮವಾಗಿದ್ದು, ಕಳೆದ ಸಾಲಿಗಿಂತ ಈ ಬಾರಿ ಮಾವಿನಹಣ್ಣು ಹೆಚ್ಚಿನ ಪ್ರಮಾಣದಲ್ಲಿ ಮಾರುಕಟ್ಟೆಗೆ ಆಗಮಿಸುತ್ತಿದೆ. ಪ್ರತಿ ವರ್ಷದಂತೆ ಈ ಬಾರಿಯೂ ತೋಟಗಾರಿಕಾ ಇಲಾಖೆಯು ಮೂರು ದಿನಗಳ ಮಾವು ಮೇಳ ಮತ್ತು ಹಲಸು ಮೇಳ ನಡೆಸುವುದಕ್ಕೆ ಸಿದ್ಧತೆ ಮಾಡಿಕೊಂಡಿದ್ದು, ಅದಕ್ಕಾಗಿ ಮಾವು ಬೆಳೆಗಾರರನ್ನು ಆಹ್ವಾನಿಸಿದೆ.

ಕುಪ್ಪಣ್ಣ ಪಾರ್ಕ್‌ನಲ್ಲೇ ಮೇಳ: ತೋಟಗಾರಿಕಾ ಇಲಾಖೆಗೆ ಸೇರಿರುವ ವಿಶಾಲವಾದ ಸ್ಥಳಾವಕಾಶವಿರುವ ಕುಪ್ಪಣ್ಣ ಪಾರ್ಕ್‌ನಲ್ಲಿಯೇ ಮೇ 23ರಿಂದ 25ರವರೆಗೆ ಮಾವು ಮೇಳ ನಡೆಸಲು ಉದ್ದೇಶಿಸಲಾಗಿದೆ. ಮೇಳದಲ್ಲಿ 45 ಮಳಿಗೆಗಳನ್ನು ತೆರೆದು ವಿವಿಧ ತಳಿಯ, ವಿವಿಧ ರುಚಿಯುಳ್ಳ ಮಾವಿನ ಹಣ್ಣುಗಳನ್ನು ಗ್ರಾಹಕರಿಗೆ ಪೂರೈಸುವ ನಿಟ್ಟಿನಲ್ಲಿ ತೋಟಗಾರಿಕಾ ಇಲಾಖೆ ಕ್ರಮ ಕೈಗೊಂಡಿದೆ.



ಮೈಸೂರು ಹಳೆ ಡಿಸಿ ಕಚೇರಿ ಬಳಿ ತಳ್ಳುಗಾಡಿಯಲ್ಲಿ ಮಾವಿನ ಹಣ್ಣುಗಳನ್ನು ಖರೀದಿಸುತ್ತಿರುವ ಗ್ರಾಹಕರು.

ರೈತರಿಂದ ಗ್ರಾಹಕರ ಕೈಗೆ: ಮಾವು ಮೇಳದಲ್ಲಿ ಪಾಲ್ಗೊಳ್ಳುವಂತೆ ಮಾವು ಬೆಳೆಗಾರರಿಗೆ ಆಹ್ವಾನ ನೀಡಲಾಗಿದೆ. ಮೈಸೂರಲ್ಲಿ ನಡೆಯಲಿರುವ ಮೇಳದಲ್ಲಿ ಪಾಲ್ಗೊಳ್ಳಲು ಮೈಸೂರು, ಮಂಡ್ಯ, ಚಾಮರಾಜನಗರ, ಧಾರವಾಡ, ಕೊಪ್ಪಳ, ಕೋಲಾರ, ರಾಮನಗರ ಸೇರಿದಂತೆ ವಿವಿಧೆಡೆಗಳಿಂದ 45 ಮಂದಿ ಮಾವು ಬೆಳೆಗಾರರು ಹೆಸರು ನೋಂದಾಯಿಸಿಕೊಂಡಿದ್ದಾರೆ. ರೈತರೇ ಮೇಳದಲ್ಲಿ ಪಾಲ್ಗೊಂಡು ತಾವು ಬೆಳೆದ ಮಾವಿನ ಹಣ್ಣುಗಳನ್ನು ಮಾರಾಟ ಮಾಡುವುದರಿಂದ ಮಧ್ಯವರ್ತಿಗಳ ಹಾವಳಿ ತಪ್ಪಿದಂತಾಗುತ್ತದೆ. ಅಲ್ಲದೆ, ಗ್ರಾಹಕರಿಗೂ ಉತ್ತಮ ಗುಣಮಟ್ಟದ ಮಾವಿನಹಣ್ಣು ದೊರೆಯಲಿದೆ.

> ಮಾವು ಮೇಳದ ಯಶಸ್ವಿಗೆ ಈಗಾಗಲೇ ಮಾವು ಬೆಳೆಗಾರರೊಂದಿಗೆ ಸಭೆ ನಡೆಸಲಾಗಿದೆ. ಮೇ 23, 24 ಹಾಗೂ 25ರಂದು ಕುಪ್ಪಣ್ಣ ಪಾರ್ಕ್‌ನಲ್ಲಿ ಮಾವು ಮೇಳ ನಡೆಸಲಾಗುತ್ತದೆ.
> –ಮಂಜುನಾಥ್ ಅಂಗಡಿ, ಉಪನಿರ್ದೇಶಕ, ತೋಟಗಾರಿಕಾ ಇಲಾಖೆ

ಹಾಪ್‌ಕಾಮ್ಸ್ ದರ: ಮಾವು ಮೇಳದಲ್ಲಿ ಪಾಲ್ಗೊಳ್ಳುವ ಮಾವು ಬೆಳೆಗಾರರು ಆಯಾ ದಿನದಲ್ಲಿ ಹಾಪ್‌ಕಾಮ್ಸ್‌ನಲ್ಲಿ ನಿಗದಿಯಾಗುವ ದರದಲ್ಲೇ ಮಾರಾಟ ಮಾಡುವಂತೆ ಚರ್ಚೆ ನಡೆಯುತ್ತಿದೆ.

ರಾಸಾಯನಿಕ ಮುಕ್ತ: ಮಾರಾಟ ಮಾಡಲು ತರುವ ಮಾವಿನಹಣ್ಣುಗಳನ್ನು ನೈಸರ್ಗಿಕ ವಿಧಾನದಲ್ಲೇ ಮಾಗಿಸಿರುವಂತೆ ಸೂಚನೆ ನೀಡಲಾಗಿದೆ. ರಾಸಾಯನಿಕ ಪದಾರ್ಥ ಬಳಸಿ ಹಣ್ಣು ಮಾಡಿದ ಹಣ್ಣುಗಳನ್ನು ಮೇಳದಲ್ಲಿ ಮಾರಾಟ ಮಾಡದಂತೆ ನಿರ್ದೇಶನ ನೀಡಲಾಗಿದೆ. ಇದರಿಂದ ಮಾವು ಮೇಳದಲ್ಲಿ ಮಾರಾಟವಾಗುವ ರಾಸಾಯನಿಕ ಮುಕ್ತವಾಗಿರುತ್ತವೆ.

ಮಾವಿನೊಂದಿಗೆ ಹಲಸಿನ ಘಮಲು: ಮಾವಿನಹಣ್ಣನೊಂದಿಗೆ ಹಲಸಿನ ಹಣ್ಣುಗಳ ಮಾರಾಟಕ್ಕೆ ಉದ್ದೇಶಿಸಲಾಗಿದ್ದು, ವಿವಿಧ ತಳಿಗಳ ಹಲಸಿನ ಹಣ್ಣುಗಳನ್ನು ರೈತರು ಮೇಳದಲ್ಲಿ ತಂದು ಮಾರಾಟ ಮಾಡಲಿದ್ದಾರೆ.

ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರಗೆ ಅಭಿನಂದನೆ...



ಹುಣಸೂರು ನಗರಸಭಾ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಗಣೇಶ್‌ಕುಮಾರಸ್ವಾಮಿ, ಬೆಂಗಳೂರಿನ ಧವಳಗಿರಿ ನಿವಾಸದಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಅಭಿನಂದಿಸಿದರು. ಈ ವೇಳೆ ಮೈಸೂರು ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ನಗರಸಭಾ ಸದಸ್ಯರಾದ ಹರೀಶ್, ವಿವೇಕ್, ಬಿಜೆಪಿಯ ಹುಣಸೂರು ನಗರಾಧ್ಯಕ್ಷ ನಾರಾಯಣ್, ಗ್ರಾಮಾಂತರ ಅಧ್ಯಕ್ಷ ಕಾಂತರಾಜು, ಮುಖಂಡರಾದ ಚೇತನ್, ರವಿಕುಮಾರ್, ಮಹದೇವು ಇನ್ನಿತರರಿದ್ದರು.

ಇನ್ಫೋವೇಶನ್ ಪ್ರಶಸ್ತಿಗೆ ಆಹ್ವಾನ


ಮೈಸೂರು, ಮೇ 19–ಇನ್ಫೋಸಿಸ್ ಫೌಂಡೇಶನ್ ಸಿಎಸ್‌ಆರ್ ಅಂಗವಾಗಿ ತನ್ನ ನಾಲ್ಕನೇ ಆವೃತ್ತಿಯ ಆರೋಹಣ್ ಸೋಶಿಯಲ್ ಇನ್ನೋವೇಶನ್ ಅವಾರ್ಡ್ಸ್ ಘೋಷಣೆ ಮಾಡಿದೆ. ಇನ್ಫೋಸಿಸ್ ಫೌಂಡೇಶನ್ ಈ ಪ್ರಶಸ್ತಿಗಾಗಿ ದೇಶದೆಲ್ಲೆಡೆ ಇರುವ ಪ್ರತಿಭಾನ್ವಿತ ನಾವೀನ್ಯಕಾರರು ಮತ್ತು ಸಾಮಾಜಿಕ ಉದ್ದಿಮೆದಾರರನ್ನು ಆಹ್ವಾನಿಸಿದೆ. ಭಾರತದಾದ್ಯಂತ ಹಿಂದುಳಿದ ಸಮುದಾಯಗಳ ಮೇಲೆ ಪರಿಣಾಮವನ್ನು ಬೀರುವ ಸಾಮರ್ಥ್ಯ ಹೊಂದಿರುವ ವಿಶಿಷ್ಟ ರೀತಿಯ ತಂತ್ರಜ್ಞಾನ ಆಧಾರಿತ ಪರಿಹಾರಗಳನ್ನು ಅಭಿವೃದ್ಧಿಪಡಿಸುವ ವ್ಯಕ್ತಿಗಳು, ತಂಡಗಳು, ಎನ್‌ಜಿಒಗಳು ಮತ್ತು ಸಾಮಾಜಿಕ ಉದ್ಯಮಗಳನ್ನು ಗುರುತಿಸಿ ಬಹುಮಾನ ನೀಡುವ ಉದ್ದೇಶ ಹೊಂದಿದೆ. ಇನ್ಫೋಸಿಸ್ ಫೌಂಡೇಶನ್ ಪ್ರತಿ ವಿಜೇತರಿಗೆ 50 ಲಕ್ಷ ರೂ.ವರೆಗೆ ಬಹುಮಾನ ನೀಡಲಿದ್ದು, ಒಟ್ಟಾರೆ ಪ್ರಶಸ್ತಿಯ ಮೊತ್ತ 2 ಕೋಟಿ ರೂ.ಗಳಾಗಿದೆ ಎಂದು ಇನ್ಫೋಸಿಸ್ ಫೌಂಡೇಶನ್‌ನ ಟ್ರಸ್ಟಿ ಸುಮೀತ್ ವೀರಮಣಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅವಾರ್ಡ್ಸ್‌ಗೆ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಲಿದ್ದು, ಜೂನ್ 15, 2025ರಂದು ಕೊನೆಗೊಳ್ಳಲಿದೆ.

ಡಾ.ಎಸ್.ಕೃಷ್ಣಪ್ಪ ಶ್ರೀ ಯೋಗಿ ನಾರಾಯಣ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ

ಮೈಸೂರು: ನಗರದ ಶ್ರೀ ಯೋಗಿ ನಾರಾಯಣ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷರಾಗಿ ಎರಡನೇ ಬಾರಿಗೆ ಡಾ.ಎಸ್.ಕೃಷ್ಣಪ್ಪ ಮತ್ತು ಉಪಾಧ್ಯಕ್ಷರಾಗಿ ಪಿ.ಪ್ರಕಾಶ್ ಅವಿರೋಧವಾಗಿ ಆಯ್ಕೆಯಾದರು.

2025–30ನೇ ಸಾಲಿನ ಐದು ವರ್ಷಗಳ ಅವಧಿಗೆ ನೂತನ ಆಡಳಿತ ಮಂಡಳಿಯ ಚುನಾವಣೆ ಇತ್ತೀಚೆಗೆ ನಡೆದಿತ್ತು. ಸೊಸೈಟಿಯ ಕಚೇರಿಯಲ್ಲಿ ಸೋಮವಾರ ಸಹಕಾರ ಇಲಾಖೆಯ ಅಶ್ವಿನ್‌ಕುಮಾರ್ ಕೆ.ಬಿ. ಅವರ ನೇತೃತ್ವದಲ್ಲಿ ನಡೆದ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಡಾ.ಎಸ್.ಕೃಷ್ಣಪ್ಪ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಪಿ.ಪ್ರಕಾಶ್ ನಾಮಪತ್ರ ಸಲ್ಲಿಸಿದ್ದರು. ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಇಬ್ಬರೂ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ಶ್ರೀ ಯೋಗಿ ನಾರಾಯಣ ಕೋ–ಆಪರೇಟಿವ್ ಸೊಸೈಟಿ ಸಿಇಓ ಶ್ಯಾಮಲ, ನಿರ್ದೇಶಕರಾದ ಕೆ.ಸುಬ್ಬಯ್ಯ, ಆರ್.ಸುಧಾಕರ್, ಶ್ರೀನಿವಾಸ್‌ಪ್ರಸಾದ್, ತುಳಸಿ ಕುಮಾರ್, ಮುನಿರಾಜು, ರೇಖಾ, ಶೈಲಜ, ಇಂದ್ರೇಶ್ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಶ್ರೀ ಯೋಗಿ ನಾರಾಯಣ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷರಾಗಿ ಎರಡನೇ ಬಾರಿಗೆ ಡಾ.ಎಸ್.ಕೃಷ್ಣಪ್ಪ ಮತ್ತು ಉಪಾಧ್ಯಕ್ಷರಾಗಿ ಪಿ.ಪ್ರಕಾಶ್ ಅವಿರೋಧವಾಗಿ ಆಯ್ಕೆಯಾದರು.

ಫೋನ್–ಇನ್ ಕಾರ್ಯಕ್ರಮ

ಮೈಸೂರು, ಮೇ 19– ಐಟಿಐ ಕೋರ್ಸ್ ಮತ್ತು ಅದರ ಅನುಕೂಲತೆಗಳು ಕುರಿತು ಮೇ 21ರಂದು ಬೆಳಗ್ಗೆ 11.30ರಿಂದ 12.30ರವರೆಗೆ ತರಬೇತಿ ಅಧಿಕಾರಿಗಳು ಮತ್ತು ರಾಜ್ಯ ಪ್ರಶಸ್ತಿ ಪುರಸ್ಕೃತ ಎನ್‌ಎಸ್‌ಎಸ್ ಅಧಿಕಾರಿ ರವಿಶಂಕರ್ ಜೊತೆ ನೇರ ಸಂದರ್ಶನ ಫೋನ್–ಇನ್ ಕಾರ್ಯಕ್ರಮವನ್ನು ಮೈಸೂರಿನ ಜೆಎಸ್‌ಎಸ್ ರೇಡಿಯೋ 91.2ಎಫ್‌ಎಂ ಸಮುದಾಯ ಬಾನುಲಿ ಕೇಂದ್ರವು ಆಯೋಜಿಸಲಾಗಿದೆ. ವಿದ್ಯಾರ್ಥಿಗಳು ಹಾಗೂ ಪೋಷಕರು ಎಸ್‌ಎಸ್‌ಎಲ್‌ಸಿ ನಂತರ ಇರುವ ಐಟಿಐ ಕೋರ್ಸ್‌ಗಳನ್ನು ಮತ್ತು ಅದರ ಅನುಕೂಲತೆಗಳು ಕುರಿತು ಯಾವುದೇ ಪ್ರಶ್ನೆಗಳು ಇದ್ದಲ್ಲಿ ಕರೆಮಾಡಿ ನೇರವಾಗಿ ಮಾತನಾಡಬಹುದು. ಅದಕ್ಕಾಗಿ ದೂರವಾಣಿ ಸಂಖ್ಯೆ: 8296725912, 0821–2546563 ಇದೆ.

ಒಂದೇ ಮಳೆಗೆ ಗ್ರೇಟರ್ ಬೆಂಗಳೂರು ಈಗ 'ವಾಟರ್ ಬೆಂಗಳೂರು'

- ವಿಪಕ್ಷ ನಾಯಕ ಅಶೋಕ್ ವ್ಯಂಗ್ಯ
- ಮಳೆ ಹಾನಿ ಪರಿಹಾರಕ್ಕೆ ಸಾವಿರ ಕೋಟಿ ಬಿಡುಗಡೆಗೆ ಆಗ್ರಹ
- ಸಾಧನಾ ಸಮಾವೇಶದ ಸಂಭ್ರಮದಲ್ಲಿರುವ ಸಿಎಂ, ಡಿಸಿಎಂಗೆ ಇತ್ತ ಗಮನವೇ ಇಲ್ಲ

ಬೆಂಗಳೂರು, ಮೇ 19(ಕೆಎಂಶಿ)– ರಾಜಧಾನಿ ಬೆಂಗಳೂರಿನ ಮಳೆ ಅನಾಹುತ ಪರಿಹಾರ ಕಾರ್ಯಕ್ಕೆ ತಕ್ಷಣ 1 ಸಾವಿರ ಕೋಟಿ ರೂ. ಬಿಡುಗಡೆ ಮಾಡಬೇಕು ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಭಾನುವಾರ ರಾತ್ರಿ ನಗರದಲ್ಲಿ 103ರಿಂದ 130 ಮಿಲಿ ಮೀಟರ್ ಮಳೆಯಾಗಿದ್ದು ಭಾರಿ ಅನಾಹುತ ಸಂಭವಿಸಿದೆ. ತ್ವರಿತಗತಿಯಲ್ಲಿ ಪರಿಹಾರ ಕಾರ್ಯ ಕೈಗೆತ್ತಿಕೊಂಡು ಸಂತ್ರಸ್ತರ ನೆರವಿಗೆ ಧಾವಿಸಬೇಕು ಎಂದಿದ್ದಾರೆ. ಈ ಸಂಬಂಧ ಪ್ರಕಟಣೆ ಬಿಡುಗಡೆ ಮಾಡಿರುವ ಅವರು, ಮುಂಗಾರು ಪೂರ್ವದ ಒಂದೇ ಒಂದು ಮಳೆ ಕಾಂಗ್ರೆಸ್ ಸರ್ಕಾರದ ಬ್ರ್ಯಾಂಡ್ ಬೆಂಗಳೂರಿನ ನಿಜ ಬಣ್ಣ ಬಯಲು ಮಾಡಿದೆ. ಇಂತಹ ಸನ್ನಿವೇಶದಲ್ಲಿ ಸಂತ್ರಸ್ತರ ನೆರವಿಗೆ ಧಾವಿಸಬೇಕಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಸಂಪುಟ ಸಚಿವರು ಸಾಧನಾ ಸಮಾವೇಶದ ಹೆಸರಲ್ಲಿ ಮೆರೆದಾಡುತ್ತಿದ್ದಾರೆ ಎಂದು ಟೀಕಿಸಿದ್ದಾರೆ.

ಭಾನುವಾರ ಮಧ್ಯರಾತ್ರಿಯಿಂದಲೇ ನಗರದ ಹಲವು ಪ್ರದೇಶಗಳಿಂದ ತಮಗೆ ದೂರವಾಣಿ ಮೂಲಕ ದೂರುಗಳು ಬರುತ್ತಿವೆ. ಅನೇಕ ಬಡಾವಣೆಗಳು ಜಲಾವೃತವಾಗಿವೆ. ನೂರಾರು ವಾಹನಗಳು ಪ್ರವಾಹದಲ್ಲಿ ತೇಲಿ ಹೋಗಿವೆ. ಕೆಲವಡೆ ಅನಾಥಾಶ್ರಮಕ್ಕೂ ನೀರು ನುಗ್ಗಿದೆ. ಇಡೀ ರಾತ್ರಿ ಜನರು ಜಾಗರಣೆ ಮಾಡುವಂತಾಗಿದ್ದು, ಊಟದ ವ್ಯವಸ್ಥೆ ಇಲ್ಲವಾಗಿದೆ. ಇಷ್ಟಾದರೂ ಬೃಹತ್ ಬೆಂಗಳೂರು ಮಹಾನಗರಪಾಲಿಕೆ (ಬಿಬಿಎಂಪಿ) ನೆರವಿಗೆ ಮುಂದಾಗಿಲ್ಲ.



> ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಬ್ರ್ಯಾಂಡ್ ಬೆಂಗಳೂರು, ಗ್ರೇಟರ್ ಬೆಂಗಳೂರು ಅಂದರೆ ಇದೇನಾ, ಒಂದೇ ಒಂದು ಭಾರಿ ಮಳೆಗೆ ಬೆಂಗಳೂರು ಕೊಚ್ಚಿ ಹೋಯ್ತು, ಜಾಗತಿಕ ಮಟ್ಟದಲ್ಲಿ ರಾಜಧಾನಿಯ ಮಾನ ಹರಾಜಾಯಿತು. –ಆರ್.ಅಶೋಕ್

ಈ ಹಿಂದೆ ಇಂತಹುದೇ ಪರಿಸ್ಥಿತಿ ನಿರ್ಮಾಣವಾದಾಗ ಸಾಯಿ ಬಡಾವಣೆ, ನಂದಗೋಕುಲ ಬಡಾವಣೆ ಸೇರಿದಂತೆ ಅನೇಕ ಬಡಾವಣೆಗಳಿಗೆ ನಗರ ಉಸ್ತುವಾರಿ ಸಚಿವ ಡಿ.ಕೆ.ಶಿವಕುಮಾರ್ ಮತ್ತು ಪಾಲಿಕೆ ಹಿರಿಯ ಅಧಿಕಾರಿಗಳು ಭೇಟಿ ನೀಡಿ ಶಾಶ್ವತ ಪರಿಹಾರದ ಭರವಸೆ ನೀಡಿದ್ದರು, ಆದರೆ, ಅದು ಮಾತಿನಲ್ಲೇ ಉಳಿದು ಮತ್ತೆ ಈ ಬಡಾವಣೆಗಳು ನೀರಿನಲ್ಲಿ ಮುಳುಗುವಂತಾಗಿವೆ. ಹೆಬ್ಬಾಳ, ಕೋರಮಂಗಲ ಮತ್ತು ವೃಷಭಾವತಿ ವ್ಯಾಲಿಯಲ್ಲಿ ಪ್ರವಾಹ ಬಂದಿದೆ. ಇನ್ನೂ ಮೂರು, ನಾಲ್ಕು ದಿನ ಭಾರಿ ಮಳೆ ಬೀಳಲಿದೆ ಎಂಬುದಾಗಿ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ತಕ್ಷಣ ತುರ್ತು ಪರಿಹಾರ ಕಾರ್ಯಪಡೆ ರಚಿಸಿ, ಸಹಾಯವಾಣಿ ಆರಂಭಿಸಬೇಕು. ನೀರು ನುಗ್ಗಿರುವ ಮನೆಗಳಿಗೆ ಕನಿಷ್ಠ ತಲಾ 1 ಲಕ್ಷ ರೂ. ಪರಿಹಾರ ವಿತರಿಸಬೇಕು. ಸಂತ್ರಸ್ತರಿಗೆ ಊಟ, ತಿಂಡಿ ವ್ಯವಸ್ಥೆ ಮಾಡಿ 2 ತಿಂಗಳಿಗೆ ಆಗುವಷ್ಟು ಪರಿಹಾರ ವಿತರಿಸಬೇಕು. ಹಿಂದಿನ ವರ್ಷದ ಲೋಪಗಳಿಂದ ಪಾಠ ಕಲಿಯದ ರಾಜ್ಯ ಸರ್ಕಾರದ ಬೇಜವಾಬ್ದಾರಿತನದಿಂದ ನಗರದಲ್ಲಿ ಮತ್ತೆ ಮಳೆ ಅನಾಹುತಗಳು ಸಂಭವಿಸುವಂತಾಗಿದೆ. ಮುಂಚಿತವಾಗಿ ಮೋರಿ, ಚರಂಡಿ, ರಾಜಕಾಲುವೆಗಳ ಹೂಳು ತೆಗೆಸುವ ಕೆಲಸ ಮಾಡಬೇಕಿತ್ತು. ನಗರದ ಅನೇಕ ಕಡೆ ವೈಟ್ ಟಾಪಿಂಗ್ ಮತ್ತು ರಸ್ತೆ ದುರಸ್ತಿ ಕಾಮಗಾರಿ ನಡೆಯುತ್ತಿದ್ದು, ಅವಶೇಷಗಳನ್ನು ತೆರವು ಮಾಡಿದ್ದರೆ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ. ಬಿಬಿಎಂಪಿ ಮುನ್ನೆಚ್ಚರಿಕೆ ವಹಿಸದಿರುವುದೇ ಅನಾಹುತಗಳಿಗೆ ಕಾರಣ ಎಂಬುದಾಗಿ ಖುದ್ದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರೇ ಹೇಳಿದ್ದು, ನಗರ ಉಸ್ತುವಾರಿ ಸಚಿವ ಶಿವಕುಮಾರ್ ಆಡಳಿತ ವೈಫಲ್ಯಕ್ಕೆ ಇದಕ್ಕಿಂತ ಸರ್ಟಿಫಿಕೇಟ್ ಬೇಕೇ ಎಂದು ಪ್ರಶ್ನಿಸಿದ್ದಾರೆ.

ಹಾಸನ ಮಿತ್ರ

2 ವರ್ಷದ ಕಾಂಗ್ರೆಸ್ ಆಡಳಿತದಲ್ಲಿ ಶೂನ್ಯ ಅಭಿವೃದ್ಧಿ, ವ್ಯಾಪಕ ಭ್ರಷ್ಟಾಚಾರ



ಹಾಸನ: ರಾಜ್ಯದಲ್ಲಿ ಎರಡು ವರ್ಷದ ಕಾಂಗ್ರೆಸ್ ಆಡಳಿತದಲ್ಲಿ ಆರ್ಥಿಕ ದಿವಾಳಿಯಾಗಿದ್ದು, ಶೂನ್ಯ ಅಭಿವೃದ್ಧಿ, ಕಾನೂನು ಸುವ್ಯವಸ್ಥೆ ಕುಸಿದಿದೆ. ಸಾಮಾಜಿಕ ನ್ಯಾಯದ ಕಗ್ಗೊಲೆ ಮತ್ತು ವ್ಯಾಪಕ ಭ್ರಷ್ಟಾಚಾರದಿಂದ ನರಳುತ್ತಿದೆ ಎಂದು ಆಲೂರು–ಸಕಲೇಶಪುರ ಕ್ಷೇತ್ರದ ಶಾಸಕ ಸಿಮೆಂಟ್ ಮಂಜು ಆಕ್ರೋಶ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎರಡು ವರ್ಷದ ಕಾಂಗ್ರೆಸ್ ಆಡಳಿತ ರಾಜ್ಯವನ್ನು ದುಸ್ಥಿತಿಗೆ ದೂಡಿದೆ. ಇದು ಆಡಳಿತ ನಡೆಸುವ ಸರ್ಕಾರವಲ್ಲ, ಕೇವಲ ವಸೂಲಿ ಸರ್ಕಾರ. ಜನನ–ಮರಣ ಪ್ರಮಾಣ ಪತ್ರದವರೆಗೂ ಪ್ರತಿಯೊಂದರಲ್ಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ. ನೆಮ್ಮದಿಯಿಂದ ಬದುಕಲು ಅಥವಾ ಸಾಯಲು ಸಹ ಬಿಡದ ಕ್ರೂರ ಭ್ರಷ್ಟತೆ ರಾಜ್ಯವನ್ನು ಆವರಿಸಿದೆ ಎಂದರು.

ಪ್ರತಿ ಟೆಂಡರ್‌ನಲ್ಲೂ ಕಮಿಷನ್ ದಂಧೆ ನಡೆಯುತ್ತಿದೆ. ರಾಜ್ಯವನ್ನು ಕಾಂಗ್ರೆಸ್ ಪಕ್ಷದ ಎಟಿಎಂ ಆಗಿ ಪರಿವರ್ತಿಸಿದ್ದಾರೆ. ಕರ್ನಾಟಕದಲ್ಲಿ ಲೂಟಿ ಮಾಡಿದ ಕೋಟ್ಯಂತರ ಹಣವನ್ನು ಪಕ್ಷದ ಹೈಕಮಾಂಡ್‌ಗೆ ಮತ್ತು ಇತರ ರಾಜ್ಯಗಳ ಚುನಾವಣೆಗಳಿಗೆ ಅಕ್ರಮವಾಗಿ ಸಾಗಿಸುತ್ತಿದ್ದಾರೆ ಎಂದು ಆರೋಪಿಸಿದರು.


ಶಾಸಕ ಸಿಮೆಂಟ್ ಮಂಜು ಆಕ್ರೋಶ

ಹಿಂದಿನ ಬಿಜೆಪಿ ಸರ್ಕಾರ ನೀಡುತ್ತಿದ್ದ ಕಿಸಾನ್ ಸಮ್ಮಾನ್ ನಿಧಿಗೆ ರಾಜ್ಯದ ಪಾಲು 4000 ಸ್ಥಗಿತ. ಗೊಬ್ಬರ, ಬೀಜ, ಉಪಕರಣಗಳ ಬೆಲೆ ಏರಿಕೆ. ವಿವಿಧ ಬೆಳೆಗಾರರಿಗೆ ಬೆಂಬಲ ಬೆಲೆ ನೀಡದೆ ರೈತರ ಆರ್ಥಿಕತೆಗೆ ಪೆಟ್ಟು ಬಿದ್ದಿದೆ. ಆಡಳಿತದ ಮೊದಲ 10 ತಿಂಗಳಲ್ಲೇ 692 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರಾಜ್ಯದ ನೀರನ್ನು ಪರ ರಾಜ್ಯಗಳಿಗೆ ಹಂಚಿ, ಸಣ್ಣ ನೀರಾವರಿ ಯೋಜನೆಗಳಿಗೆ ಅನುದಾನ ಕಡಿತಗೊಳಿಸಿ ಜಲವಂಚನೆ. ಹಕ್ಕುಗಳಿಗಾಗಿ ಪ್ರತಿಭಟಿಸುವ ರೈತರ ಬಂಧನ ಮಾಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬಸ್, ಮೆಟ್ರೋ, ನೀರು, ವಿದ್ಯುತ್, ಸ್ಮಾರ್ಟ್ ವಿದ್ಯುತ್ ಮೀಟರ್, ಡೀಸೆಲ್ ಬೆಲೆ ಏರಿಕೆಗಳಿಂದ ಜನಸಾಮಾನ್ಯರ ಜೇಬಿಗೆ ಕತ್ತರಿ ಹಾಕಿರುವುದಾಗಿ ದೂರಿದರಲ್ಲದೆ, ಕಾಂಗ್ರೆಸ್ ಸಮಾವೇಶ ಮಾಡುವ ಬದಲು ಅದೇ ಹಣವನ್ನು ರಾಜ್ಯದ ಅಭಿವೃದ್ಧಿಗೆ ಬಳಕೆ ಮಾಡುವಂತೆ ಸಲಹೆ ನೀಡಿದರು. ಬಿಜೆಪಿ ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ, ಖಜಾಂಚಿ ಶೋಭನ್‌ಬಾಬು, ಯೋಗೀಶ್, ಮಂಜು ಇತರರಿದ್ದರು.

ಶ್ರೀ ಕೊಲ್ಲಾಪುರದಮ್ಮ ಕೊಂಡೋತ್ಸವ

ಹಾಸನ: ಶ್ರೀ ಕೊಲ್ಲಾಪುರದಮ್ಮ ದೇವಸ್ಥಾನ ಸೇವಾ ಸಮಿತಿ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಯುವಕ ಸಂಘ ಪೆನ್‌ಷನ್‌ಮೊಹಲ್ಲಾ ಮತ್ತು ರಾಜ್‌ಕುಮಾರ್‌ನಗರ ಸಂಯುಕ್ತಾಶ್ರಯದಲ್ಲಿ ಶ್ರೀ ಅಮ್ಮನವರ ಜಾತ್ರೋತ್ಸವ ಅಂಗವಾಗಿ ಶ್ರದ್ಧಾಭಕ್ತಿಯಿಂದ ಕೊಂಡೋತ್ಸವವು ಜರುಗಿತು. ದೇವರ ಅಡ್ಡೆಯ ಮೆರವಣಿಗೆ ಚಿಕ್ಕನಾಳು ಪೊಲೀಸ್ ಕ್ವಾಟ್ರಸ್, ಕುಂಬಾರ ಬೀದಿ, ಹೊಸಲೈನ್ ರಸ್ತೆ ಮಾರ್ಗವಾಗಿ ಗಾಣಿಗರ ಬೀದಿ, ಡಿ.ಆರ್. ಪೊಲೀಸ್ ಕ್ವಾಟ್ರಸ್, ನಿರ್ಮಲ ನಗರ, ಬೆಸ್ತರ ಬೀದಿ ಮತ್ತು ದುರ್ಗಮ್ಮ ದೇವಸ್ಥಾನದ ಸುತ್ತಮುತ್ತ ಅಡ್ಡೆಯು ಮೆರವಣಿಗೆ ಸಾಗಿತು. ಜೈ ಭೀಮ್ ಬ್ರಿಗೇಡ್ ಸಂಘಟನಾ ಸಮಿತಿ ಜಿಲ್ಲಾಧ್ಯಕ್ಷ ರಾಜೇಶ್, ಸೇವಾ ಸಮಿತಿ ಮುಖ್ಯಸ್ಥ ತಮ್ಮಯ್ಯ, ಕಾರ್ಯದರ್ಶಿ ಕೃಷ್ಣ ಸೀತಾರಾಮ್, ಚಂದ್ರಶೇಖರ್, ಕುಮಾರ್, ಪಾಪಣ್ಣ, ಬಸವರಾಜು, ಶಂಕರ್ ಇತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.05.2025 ಮಂಗಳವಾರ, ಮಳೆ ನಕ್ಷತ್ರ: ಕೃತ್ತಿಕ 11.05.2025 ರಿಂದ 24.05.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಶಾಲಾಕ್ಯ ತಂತ್ರ ಸ್ನಾತಕೋತ್ತರ ವಿಭಾಗದಿಂದ ಕಣ್ಣಿನ ದೃಷ್ಟಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಮೂತ್ರಪಿಂಡ (ಕಿಡ್ನಿ) ಕಾಯಿಲೆಗೆ ಚಿಕಿತ್ಸಾ ಶಿಬಿರ, ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.
- **ಶ್ರೀ ಶ್ರೀನಿವಾಸಸ್ವಾಮಿ ಕೈಂಕರ್ಯ ಸಭಾ :** ಶ್ರೀ ಶ್ರೀನಿವಾಸಸ್ವಾಮಿಯವರ ವಾರ್ಷಿಕ ಮಹೋತ್ಸವ, ಬೆಳಗ್ಗೆ 9ಕ್ಕೆ ಶ್ರೀಯವರಿಗೆ ಮಹಾಭಿಷೇಕ, ಸಂಜೆ 7 ಗಂಟೆಗೆ ಶಯನೋತ್ಸವ, ಸ್ಥಳ: ಶ್ರೀ ಶ್ರೀನಿವಾಸಸ್ವಾಮಿಯವರ ದೇವಸ್ಥಾನ, ತಿಲಕ್‌ನಗರ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಸಂಧಿವಾತ ವ್ಯಾಧಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಬಳಿ, ಕೆಬಿಎಲ್ ಲೇಔಟ್, ಬೆಳಗ್ಗೆ 10ಕ್ಕೆ.
- **ಗೃಹ ರಕ್ಷಕ ದಳ, ಮೈಸೂರು ಜಿಲ್ಲೆ :** ಗೃಹ ರಕ್ಷಕರ ಮೂಲ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಅಪರ ಜಿಲ್ಲಾಧಿಕಾರಿ ಡಾ. ಪಿ. ಶಿವರಾಜು, ವಿಶೇಷ ಆಹ್ವಾನಿತರು: ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಸ್.ಟಿ. ಜವರೇಗೌಡ, ಪೊಲೀಸ್ ಉಪ ಅಧೀಕ್ಷಕ ಹೆಚ್.ವಿ. ವೀರಣ್ಣ, ಅಧ್ಯಕ್ಷತೆ : ಜಿಲ್ಲಾ ಗೃಹ ರಕ್ಷಕ ದಳದ ಗೌರವ ಸಮಾದೇಷ್ಟರು ಡಾ. ಎಂ. ಕಾಂತರಾಜು, ಉಪಸ್ಥಿತರು : ಸಹಾಯಕ ಆಡಳಿತಾಧಿಕಾರಿ ಮಲ್ಲಿಕಾರ್ಜುನ್ ಎಂ. ನಾಲತ್‌ವಾಡ್, ಉಪ ಸಮಾದೇಷ್ಟ ಎಸ್.ಆರ್. ಗಾಯಕ್ವಾಡ್, ಎಂ.ಆರ್. ಚಂದನ್, ಎಸ್. ಮಂಜುನಾಥ್, ಸ್ಥಳ: ಡಿಎಆರ್ ಸಮುದಾಯ ಭವನ, ಜ್ಯೋತಿನಗರ, ಸಂಜೆ 4ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಮ್ ಶಾಸ್ತ್ರೀ, ಬಿ.ಶ್ರೀ ರಾಮ್ ಭಟ್, ಕೆ. ಟಿ. ಉದಯಕಿರಣ್, ವ್ಯಾಖ್ಯಾನ–ಡಾ. ಜಿ.ಆರ್. ತಿಪ್ಪೇಸ್ವಾಮಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ:ಎಂ.ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್. ಎಸ್., 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಕರೆಗೊಂದುಗೀತೆ– ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಕಲಾವತಿ ಅವಧೂತ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಥೆಯಲ್ಲಿದೆ ಉತ್ತರ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಕಾರ್ತಿಕ್. ಎಂ.ಎಸ್.

ಮಧ್ಯಾಹ್ನ: 12.05 ವನಿತಾ ವಿಹಾರ ನಾನು ನನ್ನ ಕಂಪನಿ ಯೋಗ ತರಬೇತಿ ಸಂಸ್ಥೆ ನಡೆಸುತ್ತಿರುವ ಕಾಂಚನಗಂಗಾ ಅವರೊಂದಿಗೆ ಮಾತುಕತೆ, ಪ್ರಸ್ತುತಿ: ಸಹನ, 12.35 ದೇವರನಾಮ– ವಾಣಿ ಅರವಿಂದ್, 12.45 ಕನ್ನಡದಲ್ಲಿ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು –ಸುನೀತಾ ಎಸ್., 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎ.ಕೆ.ಸಿ. ನಟರಾಜನ್ – ಕ್ಲ್ಯಾರಿಯೋನೆಟ್, 4.00 ಕಥಾಕಾಲಕ್ಷೇಪ–ರಾಮಾಯಣದ ಅರಣ್ಯಕಾಂಡ, ಪ್ರಸ್ತುತಿ–ವಿದ್ವಾನ್. ಆರ್. ಗುರುರಾಜುಲು ನಾಯ್ಡು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ – ಕಿಸಾನ್ ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಸುಧಾರಿತ ಹಿಪ್ಪುನೇರಳೆ ತಳಿಗಳು ಈ ಕುರಿತು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ. ಎಮ್. ಕೆ. ರಘುನಾಥ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ : ಜಾಂಪಣ್ಣ ಆಶೀಹಾಳ್, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ–ರಘುನಾಥ್ ಸೇಠ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ವಿ. ಕೃಷ್ಣಮೂರ್ತಿ–ನಾಗಸ್ವರ, 10.00 ಚೈತ್ರವನ–ಲಕ್ಷೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ. ಎ.ಎಸ್. ಶಂಕರನಾರಾಯಣ, 10.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 20 ಮಂಗಳವಾರ 2025

46

ಸಂಪುಟ: 46 | ಸಂಚಿಕೆ: 34 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕಾಂಗ್ರೆಸ್‌ನಲ್ಲಿ ಮತ್ತೆ 'ನಾಯಕತ್ವ' ಬದಲಾವಣೆ ಹೊಗೆ...!

ಮುಖ್ಯಮಂತ್ರಿಗಾದಿಗೇರಲು ಡಿಕೆಶಿ ಪಣ

- ವರಿಷ್ಠರಿಗೆ ಸ್ಪಷ್ಟ ಸಂದೇಶ; ಮುಖ್ಯಮಂತ್ರಿ ಸ್ಥಾನ ಕಲ್ಪಿಸಿ ಇಲ್ಲ ಮುಂದಿನ ನಿರ್ಧಾರ ನನ್ನದು
- ಬಿಜೆಪಿ ವರಿಷ್ಠರ ಭೇಟಿ; ತಮ್ಮ ನಾಯಕರಿಗೆ ಸ್ಪಷ್ಟ ಸಂದೇಶ
- ತಮ್ಮನ್ನು ಬೆಂಬಲಿಸುವ 86 ಶಾಸಕರ ಪಟ್ಟಿ ವರಿಷ್ಠರಿಗೆ ಸಲ್ಲಿಕೆ

ಬೆಂಗಳೂರು, ಮೇ 19(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರಕ್ಕೆ ಎರಡು ವರ್ಷಗಳು ತುಂಬುತ್ತಿದ್ದಂತೆ ನಾಯಕತ್ವ ಬದಲಾವಣೆ ಕೂಗು ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಮತ್ತೆ ಕೇಳಿ ಬರುತ್ತಿದೆ.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಶತಾಯ–ಗತಾಯ ಮುಖ್ಯಮಂತ್ರಿಗಾದಿ ಪಡೆಯಲೇಬೇಕೆಂದು ಪಣ ತೊಟ್ಟಿದ್ದಾರೆ. ಮುಖ್ಯಮಂತ್ರಿ ಸ್ಥಾನ ತಮಗೆ ದೊರಕಿಸಿಕೊಡುವಂತೆ ಪಕ್ಷದ ಅಧಿನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಮುಂದೆ ತಮ್ಮ ಬೇಡಿಕೆಯನ್ನು ಮತ್ತೆ ಮಂಡಿಸಿದ್ದಾರೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ರಚನೆ ಸಂದರ್ಭದಲ್ಲಿ ತಮಗೆ ನೀಡಿರುವ ಭರವಸೆಯಂತೆ ಮುಖ್ಯಮಂತ್ರಿ ಗಾದಿ ಕಲ್ಪಿಸಿ, ಕೆಲವರು ನನಗೆ ಶಾಸಕರ ಬೆಂಬಲ ವಿಲ್ಲ ಎಂಬುದಾಗಿ ನಿಮ್ಮ ಬಳಿ ಹೇಳಿಕೊಂಡಿದ್ದಾರೆ. ನನಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದಲ್ಲಿ 86 ಶಾಸಕರ ಬೆಂಬಲವಿದೆ ಎಂದು ಶಾಸಕರ ಹೆಸರು, ಕ್ಷೇತ್ರ ಮತ್ತು




ಇತ್ತೀಚೆಗೆ ದೆಹಲಿ ಭೇಟಿ ವೇಳೆ ಡಿ.ಕೆ. ಶಿವಕುಮಾರ್ ಕೇಂದ್ರ ಸಚಿವರಾದ ರಾಜನಾಥ್ ಸಿಂಗ್ ಹಾಗೂ ಭೂಪೇಂದ್ರ ಯಾದವ್ ಅವರನ್ನು ಭೇಟಿಯಾಗಿ ಸುದೀರ್ಘ ಚರ್ಚೆ ನಡೆಸಿದ್ದರು.

ಜಿಲ್ಲೆಯ ಮಾಹಿತಿಯನ್ನೂ ಖರ್ಗೆ ಹಾಗೂ ವೇಣುಗೋಪಾಲ್ ಅವರುಗಳಿಗೆ ನೀಡಿದ್ದಾರೆ.

ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ನನ್ನ ಪಾತ್ರವೂ ದೊಡ್ಡದಿದೆ ಎಂಬುದು ನಿಮಗೂ ಹಾಗೂ ರಾಜ್ಯದ ಜನತೆಗೂ ತಿಳಿದಿದೆ. ಕಳೆದ 14–15 ವರ್ಷಗಳಿಂದ ಒಬ್ಬರಿಗೇ ಪ್ರತಿಪಕ್ಷದ ನಾಯಕ ಹಾಗೂ ಮುಖ್ಯಮಂತ್ರಿ ಸ್ಥಾನ ನೀಡಿದ್ದೀರಿ. ಈಗ ಮತ್ತೊಮ್ಮೆ ನನಗೆ ಅವಕಾಶ ತಪ್ಪಿದರೆ, ಮುಂದೆ ಮುಖ್ಯಮಂತ್ರಿ ಸ್ಥಾನ ದೊರೆಯುವುದು ಕಷ್ಟ ಎಂಬುದನ್ನು ನಾನು ಬಲ್ಲೆ. ಆದ್ದರಿಂದ ಪ್ರಸಕ್ತ ಅವಧಿಯಲ್ಲೇ ನನಗೆ ನೀವು ಮುಖ್ಯಮಂತ್ರಿಗಾದಿ ನೀಡಬೇಕು. ಮಾತಿಗೆ ತಪ್ಪಿದರೆ ನನ್ನ ರಾಜಕೀಯ ದಾಳವನ್ನು ನಾನು ಉರುಳಿಸಬೇಕಾಗುತ್ತದೆ ಎಂಬ ಸಂದೇಶ ತಲುಪಿಸಿದ್ದಾರೆ. ಈ ಸಂದೇಶದ ಬೆನ್ನಲ್ಲೇ ಶಿವಕುಮಾರ್ ಅವರು, ಮಹತ್ವದ ರಾಜಕೀಯ ■ 6ನೇ ಪುಟಕ್ಕೆ

ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಎರಡು ವರ್ಷ; ಗ್ಯಾರಂಟಿ ಜೊತೆ ಜೊತೆಗೆ ಅಭಿವೃದ್ಧಿ ಪರ್ವ

ಹೊಸಪೇಟೆಯಲ್ಲಿಂದು ಸಾಧನಾ ಸಮಾವೇಶ

▸ ಗ್ಯಾರಂಟಿಗಳ ಫಲಾನುಭವಿಗಳಿಗೆ 90 ಸಾವಿರ ಕೋಟಿ ಜಮೆ ▸ ಅಭಿವೃದ್ಧಿ ಕಾಮಗಾರಿಗಳಿಗೆ 1.35 ಲಕ್ಷ ಕೋಟಿ ರೂ. ಮೀಸಲು ▸ ಉದ್ಯೋಗ ಸೃಷ್ಟಿಯಲ್ಲಿ ದೇಶದಲ್ಲೇ ಕರ್ನಾಟಕಕ್ಕೆ ಮೊದಲ ಸ್ಥಾನ ▸ ಎಫ್‌ಡಿಐ ಒಳಹರಿವಿನಲ್ಲಿ ರಾಜ್ಯವು 2ನೇ ಸ್ಥಾನ ಕಾಯ್ದುಕೊಂಡಿದೆ


ಮೈಸೂರು, ಮೇ 19– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದು ಮೇ 20 ರಂದು ಎರಡು ವರ್ಷ ಪೂರೈಸಲಿದೆ. ಈ ಹಿನ್ನೆಲೆಯಲ್ಲಿ ವಿಜಯನಗರ ಜಿಲ್ಲೆ ಹೊಸಪೇಟೆ ಜಿಲ್ಲಾ ಕ್ರೀಡಾಂಗಣದಲ್ಲಿ ನಾಳೆ (ಮೇ 20)ಬೆಳಗ್ಗೆ 11 ಗಂಟೆಗೆ ಸಾಧನಾ ಸಮಾವೇಶ ನಡೆಯುತ್ತಿದ್ದು, ಇದರಲ್ಲಿ 2 ವರ್ಷದ ಆಳ್ವಿಕೆಯಲ್ಲಿ ಸಾಧನೆಗಳ ಅನಾವರಣ ಆಗಲಿದೆ.

ರಾಜ್ಯದ ಜನತೆಯ ಬಾಳನ್ನು ಗ್ಯಾರಂಟಿ ಯೋಜನೆಗಳು ಹಸನಾಗಿಸುತ್ತಿವೆ. ನೆಮ್ಮದಿಯ ಬದುಕಿನ ಜೊತೆಗೆ ರಾಜ್ಯದ ಅಭಿವೃದ್ಧಿಗೂ ಹತ್ತಾರು ಯೋಜನೆಗಳನ್ನು ಕಾಂಗ್ರೆಸ್ ಸರ್ಕಾರ ರೂಪಿಸಿ, ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದ ಫಲವಾಗಿ ಕರ್ನಾಟಕ ಮಾಡೆಲ್ ಈಗ ಭಾರತದ ಮಾಡೆಲ್ ಆಗಿದೆ. ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳನ್ನು ಬಿಜೆಪಿ ಕೂಡ ತಾನು ಆಡಳಿತ ನಡೆಸುತ್ತಿರುವ ರಾಜ್ಯಗಳಲ್ಲಿ ಜಾರಿಗೆ ತಂದಿದೆ ಎಂದು ಕಾಂಗ್ರೆಸ್ ವಕ್ತಾರರೂ ಆದ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ತಿಳಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ದಿನದಿಂದಲೂ ವಿರೋಧ ಪಕ್ಷದವರು ಒಂದಿಲ್ಲೊಂದು ಟೀಕೆ ಮಾಡುತ್ತಾ ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುತ್ತಲೇ ಬಂದರು. ಗ್ಯಾರಂಟಿ ಯೋಜನೆಗಳ ಜಾರಿಯಿಂದ ಕರ್ನಾಟಕ ದಿವಾಳಿಯಾಗಲಿದೆ ಎಂದೆಲ್ಲಾ ಬೊಬ್ಬೆ ಹೊಡೆದರು. ಆದರೆ, ಆರ್ಥಿಕ ಶಿಸ್ತಿನ ಎಲ್ಲೇ ಮೀರದೆ, ಗ್ಯಾರಂಟಿ ಯೋಜನೆಗಳ ಜೊತೆಗೆ ಅಭಿವೃದ್ಧಿ ಯೋಜನೆಗಳನ್ನೂ ಕಾಂಗ್ರೆಸ್ ಸರ್ಕಾರ ನೀಡುತ್ತಿದೆ ಎಂದು ಅವರು ಹೇಳಿದ್ದಾರೆ.

ಅಭಿವೃದ್ಧಿ ಗ್ಯಾರಂಟಿ: ಜಿಎಸ್‌ಡಿಪಿ ಬೆಳವಣಿಗೆಯಲ್ಲಿ ದೇಶದಲ್ಲೇ ಕರ್ನಾಟಕ ಮೊದಲ ಸ್ಥಾನಕ್ಕೇರಿದೆ. ಮಾತ್ರವಲ್ಲದೆ ತೆರಿಗೆ ಸಂಗ್ರಹಣೆ ಮತ್ತು ವಿದೇಶಿ ಬಂಡವಾಳ ಹೂಡಿಕೆಯಲ್ಲಿ ಎರಡನೇ ಸ್ಥಾನಕ್ಕೇರಿ ಕನ್ನಡಿಗರಿಗೆ ಅಭಿವೃದ್ಧಿಯ ಗ್ಯಾರಂಟಿ ನೀಡಿದೆ. ದೇಶದ ಒಟ್ಟಾರೆ ಜಿಡಿಪಿ ಶೇ.8.2ರಷ್ಟು ಬೆಳವಣಿಗೆಗಿಂತ ಕರ್ನಾಟಕದ ಜಿಡಿಪಿ ಶೇ. 10.2ರಷ್ಟು ಬೆಳವಣಿಗೆಯಾಗಿ ದೇಶದಲ್ಲೇ ಅಗ್ರಸ್ಥಾನ ತಲುಪಿದ್ದು, ತೆರಿಗೆ ಸಂಗ್ರಹದಲ್ಲಿ 2ನೇ ಸ್ಥಾನಕ್ಕೆ ಕರ್ನಾಟಕ ತಲುಪಿದೆ ಎಂದರೆ ಕಾಂಗ್ರೆಸ್ ಸರ್ಕಾರ ದೂರದೃಷ್ಟಿ ಯೋಜನೆಗಳೇ ಕಾರಣ ಎಂದಿದ್ದಾರೆ.

ವಿಶ್ವದ ಅತೀ ದೊಡ್ಡ ಆರ್ಥಿಕ ಪುನಶ್ಚೇತನ ಮತ್ತು ಸಾಮಾಜಿಕ ಭದ್ರತಾ ಯೋಜನೆ (ಗ್ಯಾರಂಟಿ ಯೋಜನೆ) ತಂದು ಸುಮಾರು 4.5 ಕೋಟಿ ಕನ್ನಡಿಗರ ಪ್ರತಿ ಮನೆಗೂ ತಲಾ 5 ಸಾವಿರ ರೂಪಾಯಿವರೆಗೆ ನೀಡಿ ಕಾಂಗ್ರೆಸ್ ಸರ್ಕಾರ ಬಡವರ ಬಾಳಿಗೆ ಬೆಳಕಾಗಿದೆ. ಕಳೆದ 2 ವರ್ಷದಲ್ಲಿ ಸುಮಾರು 4.50 ಕೋಟಿ ಫಲಾನುಭವಿಗಳ ಖಾತೆಗೆ ಗ್ಯಾರಂಟಿ ಹಣ 90 ■ 6ನೇ ಪುಟಕ್ಕೆ



ಹೊಸಪೇಟೆ ಜಿಲ್ಲಾ ಕ್ರೀಡಾಂಗಣದಲ್ಲಿ ಮಂಗಳವಾರ ನಡೆಯಲಿರುವ ಸಾಧನಾ ಸಮಾವೇಶಕ್ಕೆ ಬೃಹತ್ ವೇದಿಕೆ ಸಜ್ಜಾಗಿರುವುದು.

ರಾಜ್ಯ ಕಾಂಗ್ರೆಸ್ ಸರ್ಕಾರದಿಂದ ಜನರಿಗೆ 'ಭೂ ಗ್ಯಾರಂಟಿ'

ಸಾಧನಾ ಸಮಾವೇಶದಲ್ಲಿ 1.11 ಕೋಟಿ ಭೂ ದಾಖಲೆ ವಿತರಣೆ: ಡಿಕೆಶಿ ಮಾಹಿತಿ

ಹೊಸಪೇಟೆ, ಮೇ 19– ರಾಜ್ಯ ಸರ್ಕಾರ ಕೇವಲ ಎರಡು ವರ್ಷದ ಸಂಭ್ರಮಾಚರಣೆ ಮಾಡುತ್ತಿಲ್ಲ. ಜನರಿಗೆ 'ಭೂ ಗ್ಯಾರಂಟಿ' ಯೋಜನೆ ಮೂಲಕ 1 ಕೋಟಿಗೂ ಹೆಚ್ಚು ಜನರಿಗೆ ಭೂ ದಾಖಲಾತಿ ಪತ್ರ ನೀಡಿ ಅವರ ಋಣ ತೀರಿಸುವ ಕೆಲಸ ಮಾಡುತ್ತಿದ್ದೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ರಾಜ್ಯ ಸರ್ಕಾರಕ್ಕೆ ಎರಡು ವರ್ಷ ತುಂಬಿರುವ ಹಿನ್ನೆಲೆಯಲ್ಲಿ ವಿಜಯನಗರದ ಹೊಸಪೇಟೆಯಲ್ಲಿ ನಡೆಯಲಿರುವ ಸಾಧನೆ ಸಮಾವೇಶದ ಪೂರ್ವ ಸಿದ್ಧತೆ ಪರಿಶೀಲನೆ ಬಳಿಕ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿಕೆ ಶಿವಕುಮಾರ್ ಅವರು ಮಾಧ್ಯಮಗಳ ಜತೆ ಮಾತನಾಡಿದರು.

> **ಗೃಹಲಕ್ಷ್ಮಿ ಹಣ ಪ್ರತಿ ತಿಂಗಳು ಕೊಡುತ್ತೇವೆ ಎಂದು ನಾವೇನು ಹೇಳಿಲ್ಲ!**
>
> ನಾವು ಪ್ರತಿ ತಿಂಗಳು ಗೃಹಲಕ್ಷ್ಮಿ ಯೋಜನೆ ಹಣ ಕೊಡುತ್ತೇವೆ ಅಂತಾ ಹೇಳಿಲ್ಲ. ನೀವು ಟ್ಯಾಕ್ಸ್ ಕಟ್ಟುತ್ತಾ ಇರಬೇಕು, ನಾವು ಅದನ್ನು ಕೊಡ್ತಾ ಇರಬೇಕು. ಕಂಟ್ರಾಕ್ಟ್ ಮಾಡುವವರಿಗೆ ಮರುದಿನವೇ ದುಡ್ಡು ಬರುತ್ತಾ? ಒಂದು ವರ್ಷ, ಎರಡು ವರ್ಷ, ಮೂರು ನಾಲ್ಕು ವರ್ಷ ಆಗ್ತಾ ಇರುತ್ತದೆ.
>
> -ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

ನೂರು ವರ್ಷಗಳಲ್ಲಿ ಮಾಡಲಾಗದ ಕೆಲಸವನ್ನು ನಮ್ಮ ಸರ್ಕಾರ ಕಂದಾಯ ಇಲಾಖೆ ಮೂಲಕ ಮಾಡಿ, ಹೊಸ ಇತಿಹಾಸ ಬರೆಯುತ್ತಿದೆ. ಈ ಕಾರ್ಯಕ್ರಮದಲ್ಲಿ ಲೋಪದೋಷಗಳಿವೆಯೇ ಇಲ್ಲವೇ ಎಂದು ಅಧಿಕಾರಿಗಳ ಜತೆ ಭಾನುವಾರ ನಡೆಸಿದ ಸಭೆಯಲ್ಲಿ ಪರಿಶೀಲನೆ ಮಾಡಲಾಗಿದೆ. ಕಂದಾಯ ಇಲಾಖೆಯ ಮೂಲಕ ನೀಡುತ್ತಿರುವ ಈ ಭೂ ಗ್ಯಾರಂಟಿ ಇತಿಹಾಸದ ಪುಟ ಸೇರಲಿದೆ. ಪ್ರತಿಯೊಬ್ಬ ವ್ಯಕ್ತಿಗೂ ತಾನು ವಾಸವಿರುವ ಜಾಗವನ್ನು ತನ್ನದಾಗಿಸಿಕೊಳ್ಳುವ ಆಸೆ ಇರುತ್ತದೆ. ಪರಿಶಿಷ್ಟರು, ■ 6ನೇ ಪುಟಕ್ಕೆ

ಶೂನ್ಯ ಸಾಧನೆ ಸಮಾವೇಶ; ತವರು ಜಿಲ್ಲೆ ಮೈಸೂರಿಗೆ ಕೊಡುಗೆ ನೀಡದವರು ಇನ್ನು ರಾಜ್ಯಕ್ಕೆ ನೀಡುವರೆ...!?


ಎಂಎಲ್‌ಸಿ ವಿಶ್ವನಾಥ್ ವ್ಯಂಗ್ಯಭರಿತ ಪ್ರಶ್ನೆ

- ಜನರ ತೆರಿಗೆ ಹಣದಲ್ಲಿ ಸಮಾವೇಶ ಸಂಭ್ರಮ
- ಜಾತಿ ವರದಿ ಮುಂದಿಟ್ಟುಕೊಂಡು ಜನರಿಗೆ ಟೋಪಿ
- ಕರ್ನಾಟಕವನ್ನು ಸಂಪೂರ್ಣ ರಿಯಲ್ ಎಸ್ಟೇಟ್ ಕೈಗಿತ್ತಿದ್ದಾರೆ
- ಕಿಕ್‌ಬ್ಯಾಕ್ ಪಡೆದು ಗಣಿ ಭೂಮಿ ಹಸ್ತಾಂತರ ಮಾಡಿದ್ದಾರೆ

ಮೈಸೂರು, ಮೇ 19(ಬಿಎಲ್‌ಯು)– ರಾಜ್ಯ ಕಾಂಗ್ರೆಸ್ ಸರ್ಕಾರ ಎರಡು ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ವಿಜಯನಗರ ಜಿಲ್ಲೆ ಹೊಸಪೇಟೆಯಲ್ಲಿ ಆಯೋಜಿಸಿರುವುದು ಸಾಧನ ಸಮಾವೇಶವಲ್ಲ, ಶೂನ್ಯ ಸಾಧನೆ ಸಮಾವೇಶ ಎಂದು ವಿಧಾನಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ವ್ಯಂಗ್ಯವಾಡಿದ್ದಾರೆ.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎರಡು ವರ್ಷದ ಅವಧಿಯಲ್ಲಿ ಏನು ಸಾಧನೆ ಮಾಡಿದ್ದಾರೆಂದು ಈ ಸಮಾವೇಶ ಆಯೋಜಿಸಿದ್ದಾರೆ ಎಂದು ಪ್ರಶ್ನಿಸಿದರು.

ಕರ್ನಾಟಕ ರಾಜ್ಯದ ಅಭಿವೃದ್ಧಿ ಇರಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ತವರು ಜಿಲ್ಲೆ ಮೈಸೂರಿಗೇನಾದರೂ ಕೊಡುಗೆ ಕೊಟ್ಟಿದ್ದಾರಾ ಎಂದು ಪ್ರಶ್ನಿಸಿದ ವಿಶ್ವನಾಥ್, ತಮ್ಮ ವೈಫಲ್ಯ ಮರೆಮಾಚಲು, ಜನರ ಗಮನ ಬೇರೆಡೆ ಸೆಳೆಯಲು ಸಾಧನಾ ಸಮಾವೇಶ ಮಾಡುತ್ತಿದ್ದಾರೆ ಎಂದು ಟೀಕಿಸಿದರು. ಸುಳ್ಳಿನ ಸರಮಾಲೆಯನ್ನು ಜನರ ಮುಂದಿಡಲು ಈ ಸಮಾವೇಶ ಮಾಡುತ್ತಿದ್ದಾರೆ. ಈ ಹಿಂದೆ ಇಂತಹ ಸಮಾವೇಶಗಳನ್ನು ಪಕ್ಷದ ಖರ್ಚಿನಲ್ಲಿ ಆಯೋಜಿಸಲಾಗುತ್ತಿತ್ತು.



ಆದರೆ ಈಗ ಜನರ ತೆರಿಗೆ ಹಣದಲ್ಲಿ ಸಮಾವೇಶ ಏರ್ಪಡಿಸಿ, ಹೂ ಫೋಲು ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಬಿಜೆಪಿಯವರಿಗೂ ಇವರಿಗೂ ಯಾವುದೇ ವ್ಯತ್ಯಾಸವಿಲ್ಲವಾಗಿದೆ. ನಾನು ಕೂಡ ಬಿಜೆಪಿಯಲ್ಲಿದ್ದವನು, ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬರಲು ಕಾರಣನಾದವನು. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ 3,600 ಎಕರೆ ಭೂಮಿಯನ್ನು ಜಿಂದಾಲ್‌ಗೆ ನೀಡಲು ತಡೆಯೊಡ್ಡಿದ್ದೆವು. ಆದರೆ ಸಿದ್ದರಾಮಯ್ಯ ಅವರು ಕಿಕ್‌ಬ್ಯಾಕ್ ಪಡೆದು, ಅಧಿಕಾರಕ್ಕೆ ಬಂದ ಕೇವಲ ಮೂರು ತಿಂಗಳಲ್ಲಿ ಈ ಭೂಮಿಯನ್ನು ಅವರ ಕೈಗಿತ್ತರು. ಗಣಿ ಲೂಟಿ ಮಾಡಿದ ಜನಾರ್ಧನ ರೆಡ್ಡಿಗೂ, ಸಿದ್ದರಾಮಯ್ಯ ಅವರಿಗೂ ಯಾವುದೇ ವ್ಯತ್ಯಾಸವಿಲ್ಲ ಎಂದು ವಿಶ್ವನಾಥ್ ಆಪಾದಿಸಿದರು.

ಸುಳ್ಳು ಹೇಳಿ ಬಿಜೆಪಿಯವರು ಮನೆಗೆ ಹೋದರು: ಜನರ ವಿಶ್ವಾಸ ಕಳೆದುಕೊಂಡಿರುವ ಇವರು ಸಾಧನಾ ಸಮಾವೇಶ ಮಾಡುತ್ತಿದ್ದಾರೆ. ಇದು ಶೂನ್ಯ ಸಮಾವೇಶವೇ ಹೊರತು, ಸಾಧನಾ ಸಮಾವೇಶವಲ್ಲ. ಬರೀ ಬೂಟಾಟಿಕೆಯ ಸಮಾವೇಶ. ಸುಳ್ಳು ಹೇಳಿ ಬಿಜೆಪಿಯವರು ಮನೆಗೆ ಹೋದರು. ಈಗ ■ 6ನೇ ಪುಟಕ್ಕೆ

ವ್ಹೀಲಿಂಗ್ ಮಾಡ್ತೀರಾ...! ಮಾಡಿ ನೋಡೋಣ...!!

ಹುಷಾರ್... ಪೋಲೀಸರು ಮಫ್ತಿಯಲ್ಲಿ ಗಸ್ತು ಇದ್ದಾರೆ!!

ಮೈಸೂರಲ್ಲಿ ಐದು ತಂಡದಲ್ಲಿ 15 ಮಂದಿ ಸಂಚಾರಿ ವಿಭಾಗದ ಸಿಬ್ಬಂದಿ ಕಾರ್ಯಾಚರಣೆ




ಮೈಸೂರು, ಮೇ 19(ಆರ್‌ಕೆ)– ವ್ಹೀಲಿಂಗ್ ಮಾಡ್ತೀರಾ... ಮಾಡಿ ನೋಡೋಣ...!

ಮಾರಣಾಂತಿಕ ವ್ಹೀಲಿಂಗ್ ಮಾಡುವವರಿಗೆ ಬ್ರೇಕ್ ಹಾಕಲು ಸಂಚಾರ ವಿಭಾಗದ ಎಸಿಪಿ ಎಂ. ಶಿವಶಂಕರ್, ಮೈಸೂರು ನಗರದ ಪ್ರತಿ ಸಂಚಾರ ಠಾಣೆಯ ಸಬ್‌ಇನ್‌ಸ್ಪೆಕ್ಟರ್ ನೇತೃತ್ವದಲ್ಲಿ ತಲಾ ಮೂವರು ಸಿಬ್ಬಂದಿ ಒಳಗೊಂಡ 5 ತಂಡ ರಚಿಸಿದ್ದು, ಈ 15 ಮಂದಿ ಸಿಬ್ಬಂದಿ ಈಗ ಕಾರ್ಯಾಚರಣೆಗಿಳಿದಿದ್ದಾರೆ ಎಂದು ಅಪರಾಧ ಮತ್ತು ಸಂಚಾರ ಡಿಸಿಪಿ ಸುಂದರ್‌ರಾಜ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ದೇವರಾಜ ಸಂಚಾರ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಚಂದ್ರಶೇಖರ, ಸಿಬ್ಬಂದಿಗಳಾದ ಸುನಿಲ್ ನಾಟಿಕರ್, ಹರೀಶ್, ಕೆ.ಆರ್. ಸಂಚಾರ ಠಾಣೆ ಸಬ್‌ಇನ್‌ಸ್ಪೆಕ್ಟರ್ ಅಶ್ವಿನಿ ನೇತೃತ್ವದಲ್ಲಿ ನಾಗರಾಜು, ಮನೋರಂಜನ್, ಎನ್‌ಆರ್ ಸಂಚಾರ ಠಾಣೆ ಸಬ್‌ಇನ್‌ಸ್ಪೆಕ್ಟರ್ ನಾಗರಾಜು ನೇತೃತ್ವದಲ್ಲಿ ಮಾರುತಿ ಪೋಟಿ, ಸಮೀರ್ ಪಟೇಲ್, ಸಿದ್ಧಾರ್ಥ ಸಂಚಾರ ಠಾಣೆ ಸಬ್‌ಇನ್‌ಸ್ಪೆಕ್ಟರ್ ಪ್ರಭುರಾಜ್ ಉಸ್ತುವಾರಿಯಲ್ಲಿ ಅಬ್ದುಲ್ ರೆಹಮಾನ್, ಹನಸ್ ಸಾಬ್ ಅಣ್ಣಿಗೇರಿ ಹಾಗೂ ವಿವಿ ಮೊಹಲ್ಲಾ ಸಂಚಾರ ಠಾಣೆ ಸಬ್‌ಇನ್‌ಸ್ಪೆಕ್ಟರ್ ಮೋಹನ್ ಉಸ್ತುವಾರಿಯಲ್ಲಿ ಮೈಲಾರಿ, ದರ್ಶನ್ ಕಾರ್ಯಾಚರಣೆ ಆರಂಭಿಸಿದ್ದಾರೆ.



ಮಫ್ತಿಯಲ್ಲಿ ಸಂಚಾರಿ ಪೋಲೀಸರು ವ್ಹೀಲಿಂಗ್ ಮಾಡುವವರ ಮೇಲೆ ಈಗ ಕಣ್ಣಿಟ್ಟಿದ್ದಾರೆ.

ತಂಡದ ಸಿಬ್ಬಂದಿ ಸಾಮಾನ್ಯ ಉಡುಪಿನಲ್ಲಿದ್ದು, ಅವರಲ್ಲಿ ಹ್ಯಾಂಡಿ ಕ್ಯಾಮರಾ ಇರಲಿದೆ. ವ್ಹೀಲಿಂಗ್ ಮಾಡುವ ಬೈಕ್ ಇಲ್ಲವೇ ಸ್ಕೂಟರ್ ಸವಾರರನ್ನು ಅವರು ಬೆನ್ನತ್ತಲಿದ್ದಾರೆ. ಹ್ಯಾಂಡಿ ಕ್ಯಾಮರಾ ಮೂಲಕ ವ್ಹೀಲಿಂಗ್ ಸ್ಟಂಟ್ ಮಾಡುವವರ ವಾಹನ ಸಂಖ್ಯೆ ಸ್ಪಷ್ಟವಾಗಿ ಕಾಣುವಂತೆ ವಿಡಿಯೋ ಚಿತ್ರೀಕರಣ ಮಾಡಿಕೊಳ್ಳಲಿದ್ದಾರೆ. ನಂತರ ಆ ಬೈಕ್ ಇಲ್ಲವೇ ಸ್ಕೂಟರ್ ಸಂಖ್ಯೆ ಆಧಾರದ ಮೇಲೆ ಆರ್‌ಟಿಓ ಕಚೇರಿ ಮೂಲಕ ಆರ್‌ಸಿ ಮಾಲೀಕರ ವಿಳಾಸ ಪತ್ತೆ ಮಾಡಿ ಸದರಿಯವರ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ರೀತಿಯ ಕ್ರಮ ವಹಿಸಲಿದ್ದಾರೆ.

ಕ್ಲಿಷ್ಟಕರ ಕಾನೂನು: ಮೇ 14ರಂದು ಕರ್ನಾಟಕ ರಾಜ್ಯ ಉಚ್ಚನ್ಯಾಯಾಲಯವು ವ್ಹೀಲಿಂಗ್ ಹಾವಳಿ ಹತ್ತಿಕ್ಕಲು ಕಠಿಣ ಕಾನೂನು ಪ್ರಯೋಗಿಸುವಂತೆ ಸೂಚನೆ ನೀಡಿದೆ. ಅಜಾಗರೂಕ ವಾಹನ ಚಾಲನೆ ಪ್ರಕರಣವೊಂದರ ವಿಚಾರಣೆ ವೇಳೆ ಪ್ರಸ್ತುತ ಚಾಲ್ತಿಯಲ್ಲಿರುವ ಕಾನೂನುಗಳನ್ನು ಉಲ್ಲೇಖಿಸಿರುವ ನ್ಯಾಯಮೂರ್ತಿ ವಿ. ಶ್ರೀಶಾನಂದ, ನಿರ್ಲಕ್ಷ್ಯ ಹಾಗೂ ■ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಯಮ : ನೀನು ಸಿಡಿಲು ಬಡಿದು ಸತ್ತೆ, ಆದರೂ...
ಸತ್ತವ : ಆದರೂ, ಏನು ಪ್ರಭು?
ಯಮ : ಸಾಯೋವಾಗ ಯಾಕೆ ನಗ್ತಾ ಇದ್ದೆ?
ಸತ್ತವ : ಸಿಡಿಲು ಹೊಡೆಯುವ ಮುನ್ನ ಫ್ಲಾಶ್ ಬಂತು. ಯಾರೋ ಫೋಟೋ ತೆಗಿತಾ ಇರಬೇಕು ಅಂತ ಸ್ಮೈಲ್ ಕೊಟ್ಟೆ ಪ್ರಭು!!

ಮೈಸೂರು ಮಿತ್ರ

ಮಂಗಳವಾರ, 20 ಮೇ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಒಂದು ನೆನಪು ನೋವಾಗಿ ಕಾಡೋ ಮುಂಚೆ, ಒಂದು ಕನಸು ನಗುವಾಗಿ ಬರಲಿ. ಒಂದು ಪ್ರೀತಿ ಕಣ್ಣೀರಲ್ಲಿ ಕರಗುವ ಬದಲು, ಒಂದು ಸ್ನೇಹ ಕಣ್ಣಿಗೆ ಬೆಳಕಾಗಿ ಇರಲಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಚಿಂತೆ ಮಾಡಿದರೆ ಸಂತೆ ಸಾಗೀತೆ?

ನಿಮ್ಮ ಪತ್ರಗಳು

■ ದಣಿವರಿಯದ ಮುತ್ಸದ್ದಿ ದೇವೇಗೌಡರಿಗೆ ಹುಟ್ಟುಹಬ್ಬದ ಶುಭಾಶಯಗಳು

ಮಾನ್ಯರೆ,



ಮಾಜಿ ಪ್ರಧಾನ ಮಂತ್ರಿ ಹೆಚ್.ಡಿ.ದೇವೇಗೌಡರು ಇತ್ತೀಚೆಗೆ ತಮ್ಮ 93ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಿಕೊಂಡ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದೆ.

ದೇಶದ ಅತ್ಯುನ್ನತ ರಾಜಕೀಯ ಪದವಿಯಾದ ಪ್ರಧಾನಮಂತ್ರಿ ಹುದ್ದೆಗೇರಿದ ಪ್ರಪ್ರಥಮ ಕನ್ನಡಿಗರಾದ ಹೆಚ್.ಡಿ.ದೇವೇಗೌಡರ ಬಗ್ಗೆ ಕನ್ನಡಿಗರಾದ ನಮ್ಮೆಲ್ಲರಿಗೂ ಪ್ರೀತಿ, ಅಭಿಮಾನ, ಗೌರವ ಮತ್ತು ಹೆಮ್ಮೆ ಇದೆ. ಈ ಇಳಿ ವಯಸ್ಸಿನಲ್ಲೂ ಅವರ ಜೀವನೋತ್ಸಾಹ ಬೆರಗು ಹುಟ್ಟಿಸುವಂತಹುದು.

ಹಾಲಿ ರಾಜ್ಯಸಭೆಯ ಸದಸ್ಯರೂ ಸಹ ಆಗಿರುವ ದೇವೇಗೌಡರು, ಈಗಲೂ ಸಹ ಸಂಸತ್ತಿನ ಅಧಿವೇಶನಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ. ತಮ್ಮ ರಾಜಕೀಯ ಬದುಕಿನಲ್ಲಿ ಹಲವಾರು ಏರಿಳಿತಗಳನ್ನು ಕಂಡರೂ, ಬಂದದ್ದನ್ನು ಬಂದ ಹಾಗೆ ಸ್ವೀಕರಿಸುವ ಮನೋಭಾವ ಹೊಂದಿರುವ ದೇವೇಗೌಡರು ಕಾವೇರಿ ನದಿ ನೀರಿನ ಬಿಕ್ಕಟ್ಟು, ರೈತರ ಸಮಸ್ಯೆ, ಕೂಲಿ ಕಾರ್ಮಿಕರ ಸಮಸ್ಯೆ ಮುಂತಾದ ಜ್ವಲಂತ ವಿಚಾರಗಳ ಬಗ್ಗೆ ಕಳೆದ ಹಲವಾರು ದಶಕಗಳಿಂದ ಹೋರಾಟ ಮಾಡಿಕೊಂಡು ಬಂದಿದ್ದಾರೆ. 'ಮಣ್ಣಿನ ಮಗ' ಎಂಬ ಅನ್ವರ್ಥನಾಮದಿಂದಲೂ ಅವರನ್ನು ಕರೆಯಲಾಗುತ್ತದೆ. ಅವರು ದೈಹಿಕವಾಗಿ ಕುಗ್ಗಿದ್ದರೂ ಮಾನಸಿಕವಾಗಿ ಸದೃಢರಾಗಿದ್ದಾರೆ. ಇಂತಹ ದಣಿವರಿಯದ ರಾಜಕೀಯ ಮುತ್ಸದ್ದಿಗೆ ಮತ್ತೊಮ್ಮೆ ಹುಟ್ಟುಹಬ್ಬದ ಶುಭಕಾಮನೆಗಳು. –ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

■ ರಕ್ಷಣೆ ಇಲ್ಲದ ದೋಣಿ ವಿಹಾರ


ಸಾಂದರ್ಭಿಕ ಚಿತ್ರ

ಮಾನ್ಯರೆ,

ಮೈಸೂರು ಜಿಲ್ಲೆಯ ಪ್ರಸಿದ್ಧ ಪ್ರವಾಸಿ ತಾಣ ಹಾಗೂ ಧಾರ್ಮಿಕ ಕ್ಷೇತ್ರವಾದ ತಲಕಾಡಿನ ಕಾವೇರಿ ನದಿಯ ತಟದಲ್ಲಿ ದಿನನಿತ್ಯ ದೋಣಿಯಾನ ನಡೆಯುತ್ತಿದೆ. ಆದರೆ ದೋಣಿವಿಹಾರದ ಸಮಯದಲ್ಲಿ ಪ್ರವಾಸಿಗರಿಗೆ ಯಾವುದೇ ಮುನ್ನೆಚ್ಚರಿಕಾ ಕ್ರಮ ಅನುಸರಿಸದೇ, ವಾಟರ್‌ಪ್ರೂಫ್ ಜಾಕೆಟ್ ಬಳಸದೇ, ದೋಣಿವಿಹಾರ ನಡೆಸುತ್ತಿರುವುದು ಹಾಗೂ ದೋಣಿಯಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಜನರು ವಿಹರಿಸುತ್ತಿರುವುದು ಅಪಾಯಕ್ಕೆ ಕಟ್ಟಿಟ್ಟಬುತ್ತಿ. ಆದ್ದರಿಂದ ಯಾವುದೇ ಅಪಾಯವಾಗುವ ಮುನ್ನ ಜಿಲ್ಲಾಡಳಿತ ಹಾಗೂ ಪ್ರವಾಸೋದ್ಯಮ ಇಲಾಖೆಯು ಆದಷ್ಟು ಬೇಗ ಪ್ರವಾಸಿಗರಿಗೆ ಸೂಕ್ತ ರಕ್ಷಣೆ ನೀಡುವ ಕ್ರಮ ಕೈಗೊಳ್ಳಲಿ ಎಂಬುದು ನನ್ನ ಆಶಯ.

–ಪ್ರದೀಪ್, ಯರಗನಹಳ್ಳಿ, ಮೈಸೂರು

■ ಮರಗಳ ಬುಡಕ್ಕೆ ಇಂಟರ್‌ಲಾಕ್; ಪರೋಕ್ಷವಾಗಿ ಮರಗಳ ಹತ್ಯೆಗೆ ಸ್ಕೆಚ್



ಮಾನ್ಯರೆ,

ಮೈಸೂರು ಮಹಾನಗರ ಪಾಲಿಕೆ (ಎಂಸಿಸಿ) ಮೈಸೂರು ನಗರವನ್ನೇ ಕಾಂಕ್ರೀಟ್ ಕಾಡು ಮಾಡುತ್ತಿದೆ 'ಇದು ಪರಿಸರ ಹಾನಿ ಎಂಬುದು ಅದರ ಸಿಬ್ಬಂದಿಗೇ ಅರಿವಿಲ್ಲ'. ಹೋಗಲಿ ಅರಣ್ಯ ಇಲಾಖೆಯ ಅಧಿಕಾರಿಗಳು ಇದರ ಬಗ್ಗೆ ಅರಿವು ಮೂಡಿಸಬೇಕಿತ್ತು. ಅವರು ಬರೇ ಮರ ಕಡಿಯುವುದಕ್ಕೆ ಪರ್ಮಿಷನ್ ನೀಡಲು ಇದ್ದಾರೆ ಎನಿಸದೇ ಇರದು. ಇರಲಿ, ಈಗ ಪಾದಚಾರಿ ಮಾರ್ಗಗಳಿಗೆ ಇಂಟರ್‌ಲಾಕಿಂಗ್ ಟೈಲ್ಸ್‌ಗಳನ್ನು ಎಲ್ಲೆಡೆ ಹಾಕಲಾಗುತ್ತಿದೆ. ಪಾದಚಾರಿಗಳಿಗೆ ಸುರಕ್ಷಿತ ಮತ್ತು ಆರಾಮದಾಯಕ ನಡಿಗೆಗೆ ಇದು ಅನುಕೂಲವಾಗುತ್ತದೆ.

ಇದನ್ನು ಅಳವಡಿಸಬೇಕು. ಇಲ್ಲದೇ ಹೋದಲ್ಲಿ ಇದರಿಂದ ಮರ, ಗಿಡಗಳಿಗೆ ಹಾನಿಯಾಗುತ್ತಿದೆ. ಮರದ ಬುಡಕ್ಕೆ ಲಾಕ್ ಮಾಡಿದರೆ ಅವು ಮಳೆ ನೀರು ಹೀರಿಕೊಳ್ಳುವುದಾದರೂ ಹೇಗೆ? ಹಾಗಾಗಿ ಅವುಗಳ ಸರಿಯಾದ ಬೆಳವಣಿಗೆಗೆ ತೊಂದರೆಯಾಗುತ್ತದೆ. ಮರಗಳನ್ನು ಕೈಯ್ಯಾರೇ ಕೊಲ್ಲಲಾಗುತ್ತಿದೆ. ಅಭಿವೃದ್ಧಿ ಯೋಜನೆಗಳ ಹೆಸರಲ್ಲಿ ಮೈಸೂರು ತನ್ನ ಸಹಜ ಸೌಂದರ್ಯವನ್ನು ಕಳೆದುಕೊಳ್ಳುವಂತಾಗಿದೆ. ಫುಟ್‌ಪಾತ್ ಹೆಸರಿನಲ್ಲಿ ಇಲ್ಲಿನ ಮರಗಳನ್ನು ಉಸಿರುಗಟ್ಟಿಸುವ ಕೆಲಸವಾಗುತ್ತಿದೆ. ಈಗಾಗಲೇ ರಸ್ತೆಯನ್ನು ಅಗೆದು ಮರಗಳ ಬೇರಿಗೆ ಹಾನಿ ಮಾಡಲಾಗಿದೆ. ಮರಗಳ ಸುತ್ತ ನಾಲ್ಕು ಅಡಿ ಜಾಗವನ್ನೂ ಬಿಡದಂತೆ ಅಗೆಯಲಾಗಿದೆ. ಅಲ್ಲದೆ, ಕೆಲವು ಕಡೆ ಜಲ್ಲಿ ಹಾಕಿ, ಡಾಂಬರ್ ಹಾಕಿ ಮುಚ್ಚಲಾಗಿದೆ.

ಮರಗಳಿಗೆ ಹಾಗೂ ಬೇರುಗಳಿಗೆ ಹಾನಿಯಾಗದಂತೆ ಕೆಲಸ ಮಾಡಲು ಗುತ್ತಿಗೆದಾರರಿಗೆ ಮೊದಲೇ ಸೂಚಿಸಬೇಕು. ಫುಟ್‌ಪಾತ್ ಮಾಡಲು ಮರಗಳನ್ನು ಬೇರು ಸಮೇತ ಕೊರೆಯುವುದು ತಪ್ಪು. ಮರಗಳ ಸುತ್ತ ನಾಲ್ಕು ಅಡಿ ಜಾಗ ಬಿಟ್ಟು ಇಂಟರ್‌ಲಾಕ್ ಹಾಕಬೇಕು. ಬೆಳೆದ ಮರಗಳ ಬೇರುಗಳಿಗೆ ಹಾನಿಯಾಗದಂತೆ ಎಚ್ಚರಿಕೆ ವಹಿಸಬೇಕು. ಇದನ್ನು ಅರಣ್ಯ ಇಲಾಖೆ ಅಧಿಕಾರಿಗಳು ಗಮನಹರಿಸಿ ಮರಗಳ ರಕ್ಷಣೆಗೆ ಮುಂದಾಗಬೇಕು.

–ಗೋವಿತ್ ಕಿರಣ್, ರಾಜೇಂದ್ರನಗರ ಮೈಸೂರು

■ ಎಂಎಲ್‌ಎ, ಎಂಪಿ, ಎಂಎಲ್ಸಿ ಆಗುವವರಿಗೆ ಮೊದಲು ಸೈನಿಕ ಶಿಕ್ಷಣ ನೀಡಬೇಕು

ಮಾನ್ಯರೆ,

ಹೇಗೋ ಹಣ ಮಾಡಿಕೊಂಡು ದೇಶ, ದೇಶಭಕ್ತಿ, ಸೈನ್ಯದ ಬಗ್ಗೆ ಹಿಂದೆ–ಮುಂದೆ ಗೊತ್ತಿಲ್ಲದೆ ರಾಜಕೀಯಕ್ಕೆ ಬರುವವರಿಗೆ ಮೊದಲು ಸೈನಿಕ ಶಿಕ್ಷಣ ನೀಡಬೇಕು. ಆಗ ಅವರು ಎಂಎಲ್‌ಎ, ಎಂಪಿ, ಎಂಎಲ್ಸಿಗಳಾದರೆ ದೇಶ, ದೇಶಭಕ್ತಿ, ಸೈನ್ಯದ ಮಹತ್ವದ ಅರಿವಿರುತ್ತದೆ. ಇಲ್ಲದಿದ್ದಲ್ಲಿ ಸೈನ್ಯದ ಕಾರ್ಯಕ್ಕೆ 'ಪ್ರೂಫ್' ಕೇಳುವ ನಾಚಿಕೆಗೇಡಿತನದ ವರ್ತನೆ ವ್ಯಕ್ತವಾಗಿ, ದೇಶದ ಜನ ಆಘಾತಕ್ಕೊಳಗಾಗಬೇಕಾಗುತ್ತದೆ. ಇದೊಂದು ಮಹತ್ಕಾರ್ಯ ಪ್ರಧಾನಿ ಮೋದಿಯವರಿಂದ ಮೊದಲು ಆಗಬೇಕು.

– ಕೃಷ್ಣ, ವಿಜಯನಗರ, ಮೈಸೂರು.

ಈಗಿನವರಿಗೆ ಮದುವೆಯ ಮಹತ್ವದ ಅರಿವಿದೆಯೇ?



ಮಿರ್ಲೆ ಚಂದ್ರಶೇಖರ್
ಮೊ. 99161 29654

ಮದುವೆ ಎಂಬುದು ಹೆಣ್ಣು ಮತ್ತು ಗಂಡಿಗೆ ಸತಿ–ಪತಿಗಳ ಪಟ್ಟ ನೀಡಿ, ಮಾನವ ಸಂತತಿಯ ಮುಂದುವರಿಕೆಗೆ ಸಂಸಾರ ನಡೆಸುವ ರಹದಾರಿ. ಅದಕ್ಕೂ ಮೀರಿದ ಎರಡು ಜೀವಗಳ ಬಂಧ– ಬಾಂಧವ್ಯ. ಮದುವೆಗಳು ಸ್ವರ್ಗದಲ್ಲಿ ನಿಶ್ಚಯವಾಗಿವೆ ಎನ್ನುವುದೆಲ್ಲ ಸುಳ್ಳಾಗಿ, ಈಗ ಇಲ್ಲೇ ಅವರವರುಗಳೇ ನಿಶ್ಚಯಿಸಿಕೊಂಡು ಮದುವೆಗಳಾಗುತ್ತಿವೆ. ಅವೂ ಜೊಳ್ಳಾಗುತ್ತಿವೆ ಎಂಬುದು ಇವತ್ತಿಗೆ ವಾಸ್ತವದ ನುಡಿ!.

ಮದುವೆಗಳು ಇಂದು ದಾರಿ ತಪ್ಪುತ್ತಿವೆ. ಅದ್ದೂರಿ ಹೆಸರಿನಲ್ಲಿ ತಮ್ಮ ಶ್ರೀಮಂತಿಕೆಯನ್ನು ಮೆರೆಸಲು ಉತ್ಸವವಾಗುತಿವೆ. ಮನೆಯ ಮುಂದೆ ಹಸಿರು ಚಪ್ಪರ ಹಾಕಿ, ವಾರಪೂರ ಬಂಧು–ಬಾಂಧವರ ಸಂಭ್ರಮ ಇಲ್ಲವಾಗಿದೆ. ತುಂಬಿದ ಮನ–ಮನೆಗಳು ಬರಿದಾಗಿ ಭಣಗುಡುತ್ತಿವೆ. ಮದುವೆಗಳು ಮನೆ ಮುಂದೆ ಇಲ್ಲವೇ ಸಮೀಪದ ದೇವಸ್ಥಾನಗಳಲ್ಲಿ ಶ್ರೀನಿವಾಸಕಲ್ಯಾಣದಂತೆ ಶಾಸ್ರೋಕ್ತವಾಗಿ ನಡೆಯುತ್ತಿದ್ದವು. ಸಮಾರಂಭವಾಗಿರದೆ ಸಾಮರಸ್ಯಗಳ ಸಂಗಮವಾಗಿದ್ದವು. ಆ ದಿನಗಳಲ್ಲಿ ಮದುವೆಗಳಿಗೆಂದು ಕಲ್ಯಾಣಮಂಟಪಗಳು, ರೆಸಾರ್ಟ್‌ಗಳು ಇರಲಿಲ್ಲ.

ಕಾಲಕಾಲಕ್ಕೆ ಬದಲಾವಣೆ ಕಾಣುತ್ತಾ ಮದುವೆಗಳಿಗೆ ಅದ್ದೂರಿತನ ಹಾಗೂ ಡಿಜಿಟಲ್ ಟಚ್ ಬಂತಾದರೂ ಸಂಸಾರಗಳು ಗಟ್ಟಿಯಾಗಿ ಉಳಿಯುತ್ತಿಲ್ಲ. ಹಿಂದೆಲ್ಲಾ ಹೆಣ್ಣು–ಗಂಡುಗಳ ಅಭಿಪ್ರಾಯ ಏನೆಂದು ವಿಚಾರಿಸುತ್ತಿರಲಿಲ್ಲ ನಿರ್ಣಯಗಳು, ಕಂಡೀಷನ್‌ಗಳು ಎಲ್ಲವೂ ಹೆತ್ತವರದ್ದೇ ಆಗಿರುತ್ತಿತ್ತು. ಹೆಣ್ಣು–ಗಂಡು ಪರಸ್ಪರ ಮುಖಗಳನ್ನು ನೋಡಿಕೊಳ್ಳುತ್ತಿದ್ದದ್ದು ಮುಹೂರ್ತ ಸಮಯದಲ್ಲಿ ಅದೂ ಪರದೆ ಸರಿಸಿದಾಗಲೇ. ಹೆಣ್ಣು/ಗಂಡನ್ನು ಅಮ್ಮ–ಅಪ್ಪ ಒಪ್ಪಿದರೆ ಆಯಿತು, ಮಕ್ಕಳ ಅಭಿಪ್ರಾಯವೂ ಅದೇ ಆಗಿತ್ತು. ಅವರು ಹೇಗೆ ಹೇಳ್ತಾರೋ ಹಾಗೆ ಎಂದು ಕಡಕ್ ಆಗಿ ಹೇಳುತ್ತಿದ್ದರು. ಆ ಮಕ್ಕಳು ಹರೆಯಕ್ಕೆ ಬರುತ್ತಿದ್ದಂತೆ ವಿವಾಹ ಆಗಲು ತುದಿಗಾಲಲ್ಲಿ ನಿಂತಿರುತ್ತಿದ್ದರು. ಆದರೆ ಇಂದು ಮೂವತ್ತು ದಾಟಿದರು ಈಗಲೇ ಬೇಡವೆನ್ನುವ ತಕರಾರು. ಮದುವೆ ನಂತರದ ಕಾರ್ಯಗಳು ಪ್ರವಾಸಿ ತಾಣಗಳಲ್ಲಿ ಅಥವಾ ಹೊರದೇಶಗಳಲ್ಲಿರದೆ ಎಲ್ಲವೂ ಮನೆಯಲ್ಲಿಯೇ ನಡೆಯುತ್ತಿತ್ತು. ಮದುವೆ ಆಗುತ್ತಿದ್ದಂತೆ ನಾಲ್ಕಾರು ಮಕ್ಕಳನ್ನು ಹಡೆಯಲು ಮುಂಚೂಣಿಯಲ್ಲಿ ನಿಲ್ಲುತ್ತಿದ್ದರು.

ಹಿಂದಿನ ಮದುವೆಗಳ ಊಟ ಸವಿ ಬಾಯಲ್ಲಿ ನೀರೂರಿಸುತ್ತದೆ. ಎಲೆಯ ತುಂಬಾ ರಾಶಿ ಅನ್ನ, ತೆಂಗಿನ ಕಂತದ ಸೌಟಿನಲ್ಲಿ ಹಾಕುತ್ತಿದ್ದ ರುಚಿ ರುಚಿಯಾದ ಬೇಳೆಸಾಂಬಾರು, ಉದ್ದಿನಹಪ್ಪಳ, ಒಂದು ಪಲ್ಯ, ಉಪ್ಪಿನಕಾಯಿ ಮತ್ತು ಬೂಂದಿ ಪಾಯಸ ಇವುಗಳಿಗಷ್ಟೇ ಊಟದಲ್ಲಿ ಅವಕಾಶ. ಬಿದಿರಿನ ದೊಡ್ಡ ಮಂಕ್ರಿಯಲ್ಲಿದ್ದ ಅನ್ನ ಐದಾರು ಜನರಿಗೆ ಖಾಲಿ. ಆದರೆ ಇಂದು ಬಂದವರೆಲ್ಲಾ ಉಂಡರೂ ಉಳಿಯುತ್ತದೆ. ಆ ದಿನಗಳಲ್ಲಿ ಊಟದ ಎಲೆಗೆ ಬಡಿಸಿದ ಅಷ್ಟೂ ಐಟಂಗಳನ್ನು ಸಂಪೂರ್ಣವಾಗಿ ತಿಂದು ಎಲೆಗಳು ತೊಳೆದಂತೆ ನೆಕ್ಕಿಬಿಡುತ್ತಿದ್ದರು.



> ಸಮಾಧಾನಕರ ಸಂಗತಿ ಎಂದರೆ ನಮ್ಮಲ್ಲಿ ವಿಚ್ಛೇದನ ಪ್ರಮಾಣ ಪ್ರಪಂಚದ ಇನ್ನಿತರೆ ದೇಶಗಳಿಗಿಂತ ಅತ್ಯಂತ ಕಡಿಮೆ ಇದೆ. ಆದರೂ ಇತ್ತೀಚೆಗೆ ನಮ್ಮಲ್ಲೂ ವಿಚ್ಛೇದನಗಳು ಹಾಗೂ ಮುರಿದು ಬೀಳುವ ಮದುವೆಗಳ ಸಂಖ್ಯೆಯಲ್ಲಿ ಏರಿಕೆಯಾಗುತ್ತಿವೆ. ಹಿಂದಿನ ರಾತ್ರಿ ಅದ್ದೂರಿಯಾಗಿ ಆರತಕ್ಷತೆ ಮಾಡಿಕೊಂಡು, ಮರುದಿನ ಮಾಂಗಲ್ಯ ಕಟ್ಟಿಸಿಕೊಳ್ಳದಿರುವ ಅಥವಾ ಕಟ್ಟದೇ ಇರುವ ವಧು–ವರರಿಗೆ ಯಾವ ರೀತಿ ಬುದ್ದಿವಾದ ಹೇಳಬೇಕೋ ತಿಳಿಯದು.

ಬಡಿಸಿದ ಹತ್ತಿಪ್ಪತ್ತು ಐಟಂಗಳನ್ನು ತಿನ್ನಲಾಗದೆ ಅರ್ಧ ಊಟ ಎಲೆಯಲ್ಲಿ ಉಳಿಸಿ, ಆಹಾರ ವ್ಯರ್ಥ ಮಾಡುತ್ತಿರುವ ಇಂದಿನ ಪೀಳಿಗೆ, ಅವರ ವೈವಾಹಿಕ ಬದುಕು ಸಹ ನೆಲೆ ಕಾಣದಂತಾಗಿದೆ.

ಮದುವೆಗಳು ನಿಶ್ಚಿತಾರ್ಥ ಆಗುತ್ತಿರುವಾಗಲೇ ನಿಲ್ಲುತ್ತವೆ. ನೀರು ಕೊಡಲಿಲ್ಲ ಎಂಬ ಕ್ಷುಲ್ಲಕ ಕಾರಣಕ್ಕೆ ಮುರಿದು ಬೀಳುತ್ತವೆ. ಸತಿಯು ಇವನು ಗಂಡೇ ಅಲ್ಲವೆಂದರೆ, ಪತಿಯಾದವನು ಇವಳಿಗೆ ಮತ್ತೊಬ್ಬನ ಜೊತೆ ಸಂಪರ್ಕವಿದೆ ಎನ್ನುತ್ತಾನೆ. ಏನೇನೋ ಸಬೂಬುಗಳನ್ನು ಹೇಳಿ ಮದುವೆಯ ನಂತರವೂ ದೂರವಾಗುತ್ತವೆ. ಕಲಿತ ವಿದ್ಯೆಯು ಇವರನ್ನು ಹಾಳು ಮಾಡಿತೆ ಎಂಬ ಅನುಮಾನ ಹುಟ್ಟುತ್ತದೆ. ದುಡಿಯುತ್ತಿದ್ದೇವೆ ಎಂಬ ಗರ್ವ, ಯಾರೂ ಓದಬಾರದ್ದನ್ನು ಓದಿದ್ದೇವೆ ಎಂಬ ಅಹಂಕಾರ ಮಹಿಳಾ ಪ್ರಧಾನ ಸಮಾಜ ಮತ್ತು ಪುರುಷ ಪ್ರಧಾನ ಸಮಾಜ ಎಂಬ ವರ್ಗಗಳು ತಲೆ ಎತ್ತಿದ ದಿನದಿಂದ ಮದುವೆಗಳು ಮದುವೆಗಳಾಗಿ ಉಳಿಯದೆ ಮಕ್ಕಳಾಟವಾಗುತ್ತಿವೆ.

ಸಾಮಾಜಿಕವಾಗಿ ಅಭಿವೃದ್ಧಿಗೊಂಡು, ಜೀವನವು ವಿಕಸಿಸುತ್ತಿದ್ದರೂ ಮದುವೆಗಳು ಸಂಖ್ಯೆಯಲ್ಲಿ ಕುಸಿಯುತ್ತಿವೆ. ದೇಶದಲ್ಲಿ ಹಾಲಿ ವಾರ್ಷಿಕ 3.50 ಮಿಲಿಯನ್‌ಗಿಂತ ಹೆಚ್ಚು ವಿವಾಹಗಳು ಆಗುತ್ತಿವೆ. ಆದರೆ ಇತ್ತೀಚೆಗೆ ಆ ಸಂಖ್ಯೆಯು ಕಡಿಮೆ ಆಗುತ್ತಿದೆ ಎಂದರೆ ಮಕ್ಕಳು ಹಾಗೂ ಪೋಷಕರಿಬ್ಬರೂ ಸರಿಸಮನಾಗಿ ಕಾರಣರಾಗುತ್ತಾರೆ. ಕನ್ನಡ ಮಿಡಿಯಂನ ಸರ್ಕಾರಿ ಶಾಲೆಯಲ್ಲಿ ಓದಿದ ಮಕ್ಕಳು ಇವತ್ತಿನ ಕಾನ್ವೆಂಟ್ ಶಿಕ್ಷಣದ ಮಕ್ಕಳಷ್ಟು ಮದುವೆಯನ್ನು ಲೈಟ್ ಆಗಿ ತೆಗೆದುಕೊಂಡಿದ್ದಿಲ್ಲ. ನಮ್ಮ ಮಕ್ಕಳು ಪ್ರತಿಷ್ಠಿತ ಇಂಗ್ಲೀಷ್ ಶಾಲೆಗಳಲ್ಲಿ ಓದಬೇಕು ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡಬೇಕು. ಲಕ್ಷಲಕ್ಷ ಸಂಬಳದ ಕೆಲಸಕ್ಕೆ ಹೊರದೇಶವಾದರೂ ಸರಿ ಹೋಗಬೇಕು ಎಂಬ ಮನಸ್ಥಿತಿಗಳೇ ಕಾರಣವಾಗಿದೆ. ವಿಳಂಬವಾಗಿ ಮದುವೆ ಆಗುವುದು, ಮದುವೆಗಳು ಮುರಿದು ಬೀಳುತ್ತಿರುವುದು, ಹೆತ್ತವರ ಮಾತನ್ನು ಕೇಳದಿರುವುದು, ಪ್ರೇಮಿಸಿ ಮದುವೆ ಆಗುವುದು, ಲಿವಿಂಗ್ ಟುಗೆದರ್, ಡೇಟಿಂಗ್...., ಹೀಗೆ ಸಂಭವಿಸುವ ಹತ್ತು ಹಲವು ಘಟನೆಗಳಿಗೆ ಕಾರಣಗಳು ವಿದ್ಯೆಯೇ ಆಗಿರುವುದು ದುರದೃಷ್ಟಕರ.

ಅಭಿವೃದ್ಧಿ ಹೊಂದಿದ ದೇಶವೆಂದು ಜಂಬ ಪಡುವ ಅಮೆರಿಕಾದಲ್ಲಿ ಪ್ರತಿ ಶತ ಐವತ್ತರಷ್ಟು ವಿಚ್ಛೇದನಗಳು ಆಗುತ್ತಿವೆಯೆಂದು ಹೇಳುವ ವರದಿಯು ಭಾರತದಲ್ಲಿ ಪ್ರತಿಶತ ಕೇವಲ ಒಂದು ಎಂದು ಹೇಳಿರುವುದು ಹೆಮ್ಮೆಯ ವಿಷಯವಾದರೂ ನೂರಕ್ಕೆ ಒಂದಿರುವುದು ಲಕ್ಷಕ್ಕೆ ಒಂದು ಆಗುವ ಹಂತಕ್ಕೆ ಇಳಿಯಲಿ. ನಮ್ಮ ಪರಂಪರೆ ಅಷ್ಟು ಸದೃಢ ಹಾಗೂ ಸಂಸ್ಕೃತಿಯುಳ್ಳದ್ದಾಗಿದೆ.

ಭಾರತದಲ್ಲಿ ಮದುವೆ ಸಮಾರಂಭಗಳ ಆರ್ಥಿಕ ವಹಿವಾಟು ವಾರ್ಷಿಕ ಸುಮಾರು 6 ಲಕ್ಷ ಕೋಟಿಗೂ ಹೆಚ್ಚು ಎಂದು ಅಂಕಿಅಂಶಗಳು ಹೇಳುತ್ತವೆ. ಮದುವೆ ಒಂದಕ್ಕೆ ಹಲವು ಕೋಟಿಗಳನ್ನು ಖರ್ಚು ಮಾಡುವ ಭಾರತೀಯರು, ಬಹುಶಃ ಪ್ರಪಂಚದಲ್ಲಿ ಎಲ್ಲಿಯೂ ನಮ್ಮಷ್ಟು ಅದ್ದೂರಿಯಾಗಿ ಮದುವೆ ಮಾಡುವುದಿಲ್ಲ.

ಸಮಾಧಾನಕರ ಸಂಗತಿ ಎಂದರೆ ನಮ್ಮಲ್ಲಿ ವಿಚ್ಛೇದನ ಪ್ರಮಾಣ ಪ್ರಪಂಚದ ಇನ್ನಿತರೆ ದೇಶಗಳಿಗಿಂತ ಅತ್ಯಂತ ಕಡಿಮೆ ಇದೆ. ಆದರೂ ಇತ್ತೀಚೆಗೆ ನಮ್ಮಲ್ಲೂ ವಿಚ್ಛೇದನಗಳು ಹಾಗೂ ಮುರಿದು ಬೀಳುವ ಮದುವೆಗಳ ಸಂಖ್ಯೆಯಲ್ಲಿ ಏರಿಕೆಯಾಗುತ್ತಿವೆ. ಹಿಂದಿನ ರಾತ್ರಿ ಅದ್ದೂರಿಯಾಗಿ ಆರತಕ್ಷತೆ ಮಾಡಿಕೊಂಡು, ಮರುದಿನ ಮಾಂಗಲ್ಯ ಕಟ್ಟಿಸಿಕೊಳ್ಳದಿರುವ ಅಥವಾ ಕಟ್ಟದೇ ಇರುವ ವಧು–ವರರಿಗೆ ಯಾವ ರೀತಿ ಬುದ್ದಿವಾದ ಹೇಳಬೇಕೋ ತಿಳಿಯದು.

ಸಿಂಧೂರಕ್ಕೆ ಎಷ್ಟು ಬೆಲೆ ಕೊಡುತ್ತೇವೆ ಹಾಗೂ ಅದನ್ನು ಮುಟ್ಟಿದರೆ ಭಾರತೀಯರಿಗೆ ಹೇಗೆ ರೋಷ ಬರುತ್ತದೆ ಎಂಬುದನ್ನು 'ಆಪರೇಷನ್ ಸಿಂಧೂರ'ದಲ್ಲಿ ನಾವೆಲ್ಲರೂ ನೋಡಿದ್ದೇವೆ. ಕೆಲವು ಹೆಣ್ಣು ಮಕ್ಕಳು ಮದುವೆಯ ನಂತರ ತಾಳಿ, ಬಳೆ ಹಾಗೂ ಸಿಂಧೂರವನ್ನು ತೊಡುತ್ತಿಲ್ಲವಲ್ಲ, ಮದುವೆಗೆ ಮುಂಚೆ ಈ ಬಗ್ಗೆ ಹೆಣ್ಣು ಮಕ್ಕಳು ಕಂಡೀಷನ್ ಹಾಕುವವರನ್ನು ನೋಡಿದ್ದೇವೆ. 'ಆಪರೇಷನ್ ಮುತ್ತೈದೆ ಚಿನ್ಹೆ' ಕಾರ್ಯಕ್ರಮವನ್ನು ಹಮ್ಮಿಕೊಂಡು ಆಚಾರ–ವಿಚಾರಗಳನ್ನು ಅರಿಯದ ಹೆಣ್ಣು ಮಕ್ಕಳಿಗೆ ಜಾಗೃತಿ ಮೂಡಿಸುವ ಅವಶ್ಯಕತೆ ಇದೆ.

ಯೌವ್ವನದವರ ಕಥೆ ಇದಾದರೆ, ಹೆತ್ತವರಲ್ಲೂ ಪರಿವರ್ತನೆಯಾಗಿದೆ. ನನ್ನ ಮಗ, ಮಗಳು ಅಮೆರಿಕಾ, ಫ್ರಾನ್ಸ್, ಆಸ್ಟ್ರೇಲಿಯಾ..... ಇಂತಹ ದೇಶದಲ್ಲಿ ಇದ್ದಾನೆ(ಳೆ). ಸಂಬಳ ಲಕ್ಷ/ಕೋಟಿಗಳಲ್ಲಿ ಪ್ಯಾಕೇಜ್ ಎಂದು ಖುಷಿಯಾಗಿ ಹೇಳಿಕೊಳ್ಳುತ್ತಾರೆ. ಅಹಾ... ಎಂಥ ಬೆಳವಣಿಗೆ, ಉಸಿರು ನಿಲ್ಲುವಾಗ ಬಾಯಿಗೆ ನೀರು ಬಿಡಿಸಿಕೊಳ್ಳದ ನತದೃಷ್ಟ ಇಳಿವಯಸ್ಸಿನ ಇವರನ್ನು ನೋಡಿಕೊಳ್ಳುವುದಕ್ಕಾದರೂ ಇವರೊಟ್ಟಿಗೆ ಇಲ್ಲದಿದ್ದರೂ ಹಿರಿಹಿರಿ ಹಿಗ್ಗುತ್ತಾರಲ್ಲ! ಏನನ್ನಬೇಕು ಇವರನ್ನು?!.

ಕಾನೂನುಗಳ ಹೇರಿಕೆ ಇಲ್ಲದಿದ್ದಾಗ ಮದುವೆಗಳು ಮುರಿದುಬೀಳುವ ಪ್ರಸಂಗಗಳು ತೀರ ಕಡಿಮೆ ಇದ್ದವು. ಕಾಲಾನುಕಾಲಕ್ಕೆ ಜೀವನ ಶೈಲಿ ಬದಲಾದಂತೆ ಭದ್ರತೆಯ ಉದ್ದೇಶದಿಂದ ಹಿಂದೂ ಮ್ಯಾರೇಜ್ ಆಕ್ಟ್–1955 ಜಾರಿಗೆ ಬಂತು. ಜೊತೆಗೆ ಮದುವೆಗಳಿಗಿದ್ದ ಮೌಲ್ಯವು ಕಡಿಮೆ ಆಗಿ ಅವಾಂತರಗಳಿಗೆ ಕಾರಣವಾಯಿತು. ಎಲ್ಲದಕ್ಕೂ ಮೂಲ ವಿನಯವಿಲ್ಲದ ವಿದ್ಯೆ ಹಾಗೂ ಹುದ್ದೆಗಳ ನಾನತ್ವ ಇರಬಹುದೆ?!.

ಇಡೀ ಗಾಜಾ ಪಟ್ಟಿ ಆಕ್ರಮಿಸಿಕೊಳ್ಳುತ್ತೇವೆ: ಇಸ್ರೇಲ್ ಪ್ರಧಾನಿ ನೆತನ್ಯಾಹು ಘೋಷಣೆ

ಇಸ್ರೇಲ್: ಇಸ್ರೇಲಿ ಸೇನೆ ಗಾಜಾದಲ್ಲಿ ನಿರಂತರವಾಗಿ ಬಾಂಬ್ ದಾಳಿಗಳನ್ನು ನಡೆಸುತ್ತಿದೆ. ಏತನ್ಮಧ್ಯೆ, ಇಸ್ರೇಲಿ ಪ್ರಧಾನಿ ಬೆಂಜಮಿನ್ ನೆತನ್ಯಾಹು ಇಸ್ರೇಲ್ ಸಂಪೂರ್ಣ ಗಾಜಾವನ್ನು ಹಿಡಿತಕ್ಕೆ ತೆಗೆದುಕೊಳ್ಳಲಿದೆ ಎಂದು ಹೇಳಿದರು.

ಇಸ್ರೇಲಿ ರಕ್ಷಣಾ ಪಡೆ (IDF) ಈ ಬಗ್ಗೆ ಅಭಿಯಾನವನ್ನು ತೀವ್ರಗೊಳಿಸಿದೆ. ದಕ್ಷಿಣ ಗಾಜಾದಲ್ಲಿರುವ ಖಾನ್ ಯೂನಿಸ್ ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಸ್ಥಳಾಂತರಿಸಲು ಐಡಿಎಫ್ ಆದೇಶಗಳನ್ನು ಹೊರಡಿಸಿದೆ. ಪ್ಯಾಲೆಸ್ಟೀನಿಯನ್ ಜನರು ತಕ್ಷಣವೇ ಈ ಪ್ರದೇಶವನ್ನು ತೊರೆಯುವಂತೆ ಸೂಚಿಸಿದೆ.

ಇಸ್ರೇಲಿ ಸೇನೆಯು ಗಾಜಾದಲ್ಲಿ ಹೊಸ ದೊಡ್ಡ ಪ್ರಮಾಣದ ನೆಲದ ಸೇನಾ ಕಾರ್ಯಾಚರಣೆಯನ್ನು ಪ್ರಾರಂಭಿಸುವುದಾಗಿ ಘೋಷಿಸಿದೆ. ಹೋರಾಟ ತೀವ್ರವಾಗಿದ್ದು, ನಾವು ಮುಂದುವರಿಯುತ್ತಿದ್ದೇವೆ. ಗಾಜಾ ಪಟ್ಟಿಯ ಎಲ್ಲಾ ಪ್ರದೇಶಗಳ ಮೇಲೆ ಹಿಡಿತ ಸಾಧಿಸುತ್ತೇವೆ. ನಾವು ಬಿಟ್ಟುಕೊಡುವುದಿಲ್ಲ. ಆದರೆ ಯಶಸ್ವಿಯಾಗಲು ನಾವು ತಡೆಯಲಾಗದ ರೀತಿಯಲ್ಲಿ ಕಾರ್ಯ ನಿರ್ವಹಿಸಬೇಕು ಎಂದು ನೆತನ್ಯಾಹು ಟೆಲಿಗ್ರಾಮ್‌ನಲ್ಲಿ ಪೋಸ್ಟ್ ಮಾಡಿದ ವೀಡಿಯೊದಲ್ಲಿ ಹೇಳಿದ್ದಾರೆ.



ಪ್ರಾಯೋಗಿಕ ಮತ್ತು ರಾಜತಾಂತ್ರಿಕ ಕಾರಣಗಳಿಗಾಗಿ ನಾವು ಗಾಜಾದ ಜನಸಂಖ್ಯೆಯನ್ನು ಕ್ಷಾಮದತ್ತ ಮುನ್ನಡೆಯಲು ಬಿಡಬಾರದು ಎಂದು ಹೇಳಿದರು.

ಕಳೆದ ಎರಡೂವರೆ ತಿಂಗಳುಗಳಲ್ಲಿ, ಗಾಜಾದಲ್ಲಿರುವ ವಿಶ್ವಸಂಸ್ಥೆ ಮತ್ತು ಇತರ ಸಂಸ್ಥೆ ಗಳ ಆಹಾರ ದಾಸ್ತಾನು ಸಂಪೂರ್ಣವಾಗಿ ಖಾಲಿಯಾಗಿದೆ. ಆಹಾರ ಪದಾರ್ಥಗಳ ಕೊರತೆಯಿಂದಾಗಿ, ಗಾಜಾದಲ್ಲಿ ಹಸಿವಿನ ಅಪಾಯ ಹೆಚ್ಚಾಗಿದೆ. ಈ ಕಾರಣದಿಂದಾಗಿ, ಅಮೆರಿಕ ಸೇರಿದಂತೆ ಹಲವು ದೇಶಗಳಿಂದ ಇಸ್ರೇಲ್ ಮೇಲೆ ಒತ್ತಡ ಹೆಚ್ಚುತ್ತಿತ್ತು, ಅದರ ನಂತರ ಪ್ರಧಾನಿ ನೆತನ್ಯಾಹು ಗಾಜಾ ಪಟ್ಟಿಯಲ್ಲಿ ಅಗತ್ಯ ಸಹಾಯವನ್ನು ಪುನರಾರಂಭಿಸುವಂತೆ ಆದೇಶಿಸಿದರು.

ಗಾಜಾದಲ್ಲಿ ಕ್ಷಾಮ ಉಂಟಾಗದಂತೆ ಗಾಜಾಗೆ ಸಹಾಯವನ್ನು ಕಳುಹಿಸುವುದು ಮುಖ್ಯ ಎಂದು ನೆತನ್ಯಾಹು ಹೇಳಿದರು. ಏಕೆಂದರೆ ಇದು ಹಮಾಸ್ ವಿರುದ್ಧ ನಡೆಯುತ್ತಿರುವ ಮಿಲಿಟರಿ ಕಾರ್ಯಾಚರಣೆಗೆ ಹಾನಿ ಮಾಡಬಹುದು. ಇಸ್ರೇಲ್ ನೆರವು ಅಗತ್ಯವಿರುವವರಿಗೆ ಮಾತ್ರ ತಲುಪುವಂತೆ ನೋಡಿಕೊಳ್ಳುತ್ತದೆ ಮತ್ತು ಹಮಾಸ್‌ಗೆ ಅಲ್ಲ ಎಂದು ಅವರು ಹೇಳಿದರು.

ಗಾಜಾವನ್ನು ಸಂಪೂರ್ಣವಾಗಿ ಶಸ್ತ್ರಾಸ್ತ್ರಗಳಿಂದ ಖಾಲಿ ಮಾಡಬೇಕು ಮತ್ತು ಹಮಾಸ್ ಭಯೋತ್ಪಾದಕರು ಗಾಜಾವನ್ನು ತೊರೆಯಬೇಕು ಎಂಬ ಷರತ್ತನ್ನು ನೆತನ್ಯಾಹು ವಿಧಿಸಿದ್ದರು. ದೋಹಾದಲ್ಲಿ ಶಾಂತಿ ಮಾತುಕತೆಗಾಗಿ ಪ್ರಯತ್ನಗಳ ಕುರಿತು ಚರ್ಚೆ ನಡೆಯುತ್ತಿರುವ ಸಮಯದಲ್ಲಿ ಈ ಸುದ್ದಿ ಬಂದಿದೆ. ನೆತನ್ಯಾಹು ಪ್ರಸ್ತುತ ತಮ್ಮ ಅಧಿಕಾರಿಗಳನ್ನು ದೋಹಾದಲ್ಲಿಯೇ ಉಳಿಯುವಂತೆ ಕೇಳಿಕೊಂಡಿದ್ದಾರೆ.

ಲೋಕಾಯುಕ್ತ ದೂರು ಸ್ವೀಕಾರ ಮುಂದೂಡಿಕೆ

ಮೈಸೂರು: ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗದಿಂದ ಮೇ 21ರಂದು ಮೈಸೂರು ಜಿಲ್ಲೆ ತಿ.ನರಸೀಪುರ ತಾಲೂಕು ಪಂಚಾಯತ್ ಕಚೇರಿಯ ಸಭಾಂಗಣದಲ್ಲಿ ದೂರು ಸ್ವೀಕರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರಣಾಂತರಗಳಿಂದ ದೂರು ಸ್ವೀಕಾರ ಕಾರ್ಯಕ್ರಮವನ್ನು ಮೇ 23ಕ್ಕೆ ಮುಂದೂಡಲಾಗಿದೆ. ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಅಧಿಕೃತ ಕೆಲಸಗಳ ಅನಗತ್ಯ ವಿಳಂಬ, ಲಂಚದ ಹಣದ ಬೇಡಿಕೆ ಇತ್ಯಾದಿ ತೊಂದರೆಗಳನ್ನು ನೀಡುತ್ತಿರುವ ಸಾರ್ವಜನಿಕ, ಸರ್ಕಾರಿ ಅಧಿಕಾರಿ, ನೌಕರರ ವಿರುದ್ಧ ಅಗತ್ಯ ದಾಖಲೆಗಳೊಡನೆ ಸಾರ್ವಜನಿಕರು ದೂರು ನೀಡಬಹುದು ಎಂದು ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಉಮೇಶ್.ಟಿ.ಜೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೆಸ್ಕ್ ಕಚೇರಿ ಸಿಬ್ಬಂದಿ; ಹೊರ ಗುತ್ತಿಗೆ ನೌಕರರಿಗೆ ಆರೋಗ್ಯ ತಪಾಸಣೆ

ನಿಗಮದ ಕಚೇರಿಯಲ್ಲಿ ಎರಡು ದಿನಗಳ ಶಿಬಿರಕ್ಕೆ ಸೆಸ್ಕ್ ಅಧ್ಯಕ್ಷರೂ ಆದ ಶಾಸಕ ರಮೇಶ್ ಬಂಡಿಸಿದ್ದೇಗೌಡ ಚಾಲನೆ

ಮೈಸೂರು, ಮೇ 19– ಸಿಬ್ಬಂದಿಯ ಸುರಕ್ಷತೆ ಹಾಗೂ ಆರೋಗ್ಯದ ಬಗ್ಗೆ ಕಾಳಜಿ ವಹಿಸಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್), ನಿಗಮದ ಪ್ರಧಾನ ಕಚೇರಿಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಎರಡು ದಿನಗಳ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಿದ್ದು, ಶಾಸಕರೂ ಆಗಿರುವ ಸೆಸ್ಕ್ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ ಅವರು ಸೋಮವಾರ ಶಿಬಿರಕ್ಕೆ ಚಾಲನೆ ನೀಡಿದರು.

ವಿಜಯನಗರ 2ನೇ ಹಂತದಲ್ಲಿರುವ ಸೆಸ್ಕ್ ಪ್ರಧಾನ ಕಚೇರಿಯಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿದ ರಮೇಶ್ ಬಂಡಿಸಿದ್ದೇಗೌಡ, ಜನರಿಗೆ ವಿದ್ಯುತ್ ಪೂರೈಸುವ ಸೆಸ್ಕ್ ಸಿಬ್ಬಂದಿ ತಮ್ಮ ಆರೋಗ್ಯ ಮತ್ತು ಸುರಕ್ಷತೆ ಬಗ್ಗೆಯೂ ಗಮನಹರಿಸುವ ಅನಿವಾರ್ಯತೆ ಇದ್ದು, ಈ ನಿಟ್ಟಿನಲ್ಲಿ ನಿಗಮ ಕೈಗೊಂಡಿರುವ ಈ ಶಿಬಿರವು ಹೆಚ್ಚು ಪ್ರಯೋಜನಕಾರಿಯಾಗಿದೆ ಎಂದು ಹೇಳಿದರು.


ಸೆಸ್ಕ್ ಸಿಬ್ಬಂದಿಗೆ ಆಯೋಜಿಸಿರುವ ಎರಡು ದಿನಗಳ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಶಾಸಕರೂ ಆಗಿರುವ ಸೆಸ್ಕ್ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ ಅವರು ಸೋಮವಾರ ಚಾಲನೆ ನೀಡಿದರು.

ಮೊದಲ ದಿನದಂದು ನಡೆದ ಶಿಬಿರದಲ್ಲಿ ಸೆಸ್ಕ್ ಪ್ರಧಾನ ಕಚೇರಿಯಲ್ಲಿ ಗುತ್ತಿಗೆ ಹಾಗೂ ಹೊರ ಗುತ್ತಿಗೆಯಲ್ಲಿ ಕೆಲಸ ಮಾಡುತ್ತಿರುವ ಡೇಟಾ ಎಂಟ್ರಿ ಸಿಬ್ಬಂದಿ, ವಾಹನ ಚಾಲಕರು, ಕಚೇರಿಯ ಸಹಾಯಕ ಸಿಬ್ಬಂದಿ ಸೇರಿದಂತೆ ನೂರಾರು ಮಂದಿ ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಶಿಬಿರದ ಎರಡನೇ ದಿನವಾದ ಮಂಗಳವಾರ(ಮೇ 20) ಪ್ರಧಾನ ಕಚೇರಿಯಲ್ಲಿ ಕರ್ತವ್ಯನಿರ್ವಹಿಸುವ ಅಧಿಕಾರಿಗಳು ಹಾಗೂ ಇತರ ಸಿಬ್ಬಂದಿಗೆ ಆರೋಗ್ಯ ತಪಾಸಣೆ ನಡೆಸಲಾಗುವುದು.

80 ಪರೀಕ್ಷೆಗಳ ಲಾಭ: ಈ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ 80ಕ್ಕೂ ಹೆಚ್ಚು ತಪಾಸಣೆ ನಡೆಸಲಾಯಿತು. ಪ್ರಮುಖವಾಗಿ ರಕ್ತ, ಥೈರಾಯ್ಡ್, ಮೂತ್ರ ಪರೀಕ್ಷೆ, ಎಫ್‌ಬಿಎಸ್, ಎಲ್‌ಎಫ್‌ಟಿ, ಕ್ಯಾಲ್ಸಿಯಂ, ವಿಟಮಿನ್ ಬಿ12 ಮತ್ತು ಡಿ ಪರೀಕ್ಷೆ ಸೇರಿದಂತೆ ಇನ್ನಿತರ ತಪಾಸಣೆ ನಡೆಸಲಾಯಿತು. ಇದೇ ವೇಳೆ ನಿಗಮದ ಕಚೇರಿಯಲ್ಲಿ ಹೊಸದಾಗಿ ಅಳವಡಿಸಿರುವ ಲಿಫ್ಟ್ ಅನ್ನು ರಮೇಶ್ ಬಂಡಿಸಿದ್ದೇಗೌಡ ಉದ್ಘಾಟಿಸಿದರು. ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಂ. ಮುನಿಗೋಪಾಲರಾಜು, ಮುಖ್ಯ ಆರ್ಥಿಕ ಅಧಿಕಾರಿ ರೇಣುಕಾ, ಪ್ರಧಾನ ವ್ಯವಸ್ಥಾಪಕರಾದ ಡಾ. ಬಿ.ಆರ್.ರೂಪ, ಲೋಕೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

> ▶ ತನ್ನ ಸಿಬ್ಬಂದಿ ಹಾಗೂ ಅಧಿಕಾರಿಗಳ ಆರೋಗ್ಯ ಮತ್ತು ಸುರಕ್ಷತೆಗೆ ಮೊದಲಿನಿಂದಲೂ ಸೆಸ್ಕ್ ಆದ್ಯತೆ ನೀಡಿದೆ. ಅದರಂತೆ ನಿಗಮ ಕಚೇರಿಯಲ್ಲಿ ಕಾರ್ಯನಿರ್ವಹಿಸುವ ಎಲ್ಲ ಸಿಬ್ಬಂದಿ, ಅಧಿಕಾರಿಗಳ ಅನುಕೂಲಕ್ಕೆ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಗುತ್ತಿದೆ. ಶಿಬಿರದಲ್ಲಿ ಅಂದಾಜು 7000 ರೂ. ವೆಚ್ಚವಾಗುವ ಹಲವು ಪರೀಕ್ಷೆಗಳನ್ನು ಉಚಿತವಾಗಿ ಮಾಡಲಾಗುತ್ತಿದೆ. ಸಿಬ್ಬಂದಿ ಇದರ ಪ್ರಯೋಜನ ಪಡೆದು ಆರೋಗ್ಯದ ಬಗ್ಗೆ ಕಾಳಜಿವಹಿಸಬೇಕು.
> –ಕೆ.ಎಂ.ಮುನಿಗೋಪಾಲ್‌ರಾಜು, ವ್ಯವಸ್ಥಾಪಕ ನಿರ್ದೇಶಕರು, ಸೆಸ್ಕ್

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No.114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಲ್ಲಿ ಬಿಜೆಪಿ ನಾಯಕರಿಂದ ಕಾಂಗ್ರೆಸ್ ಸರ್ಕಾರದ ಚಾರ್ಜ್‌ಶೀಟ್ ಬಿಡುಗಡೆ

- 'ದುಬಾರಿ ಜೀವನ–ಅಭಿವೃದ್ಧಿ ಶೂನ್ಯ ಸರ್ಕಾರದ ಸಾಧನೆ'; ಗೇಲಿ
- ಲೂಟಿ ಮಾಡಿ ಲ್ಯಾಂಬೋರ್ಗಿನಿ ಕಾರು ಖರೀದಿ; ಜನರ ಬದುಕು ಬರ್ಬಾತ್
- ಒಬ್ಬ ಪ್ರಾಮಾಣಿಕ ಸಚಿವನಿಲ್ಲ; ಬಾಂಬ್ ಹಾಕುವವರನ್ನು ಅಮಾಯಕರೆನ್ನುತ್ತಾರೆ!

ಮೈಸೂರು, ಮೇ19(ಬಿಎಲ್‌ಯು)– ರಾಜ್ಯ ಕಾಂಗ್ರೆಸ್ ಸರ್ಕಾರ ಎರಡು ವರ್ಷ ಪೂರೈಸುತ್ತಿರುವ ಹಿನ್ನೆಲೆಯಲ್ಲಿ ವಿಜಯನಗರ ಜಿಲ್ಲೆ ಹೊಸಪೇಟೆಯಲ್ಲಿ ನಾಳೆ ಸಾಧನಾ ಸಮಾವೇಶ ಆಯೋಜಿಸಿರುವುದಕ್ಕೆ ಠಕ್ಕರ್ ಕೊಡುವ ನಿಟ್ಟಿನಲ್ಲಿ ಬಿಜೆಪಿ ಇಂದು ಕಾಂಗ್ರೆಸ್ ಸರ್ಕಾರದ ಚಾರ್ಜ್‌ಶೀಟ್ ಅನ್ನು ಬಿಡುಗಡೆ ಮಾಡಿತು.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ಮಾಜಿ ಉಪ ಮುಖ್ಯಮಂತ್ರಿ ಡಾ.ಅಶ್ವಥ್ ನಾರಾಯಣ್ ಅವರು ಚಾರ್ಜ್‌ಶೀಟ್ ಬಿಡುಗಡೆ ಮಾಡಿ, ಕಾಂಗ್ರೆಸ್ ಸರ್ಕಾರದ ಬೆಲೆ ಏರಿಕೆ, ಅವ್ಯವಸ್ಥೆ ಹಾಗೂ ಭ್ರಷ್ಟಾಚಾರವನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು.

'ದುಬಾರಿ ಜೀವನ–ಅಭಿವೃದ್ಧಿ ಶೂನ್ಯ, ಇದುವೇ ಕಾಂಗ್ರೆಸ್ ಸರ್ಕಾರದ ಸಾಧನೆ' ಎಂಬ ಘೋಷವಾಕ್ಯವಿರುವ ಚಾರ್ಜ್‌ಶೀಟ್‌ನಲ್ಲಿ ಕಾಂಗ್ರೆಸ್ ಸರ್ಕಾರದ ಬೆಲೆ ಏರಿಕೆ, ಭ್ರಷ್ಟಾಚಾರ ಸೇರಿದಂತೆ ಹಲವು ಲೋಪಗಳನ್ನು ಎತ್ತಿ ತೋರಿಸಲಾಯಿತು.

ತರುವಾಯ ಮಾತನಾಡಿದ ಡಾ.ಅಶ್ವಥ್ ನಾರಾಯಣ್, ಯಾವ ಪುರುಷಾರ್ಥಕ್ಕೆ ಈ ಸಮಾವೇಶ ಮಾಡುತ್ತಿದ್ದಾರೋ ತಿಳಿಯದು, ರಾಜ್ಯದ ಜನರ ಬದುಕು ಬರ್ಬಾತ್ ಮಾಡಿ ಸಮಾವೇಶ ಮಾಡುತ್ತಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಅವರ ಸಚಿವರು ಸಂತೋಷವಾಗಿರುವುದು ಬಿಟ್ಟರೆ ರಾಜ್ಯದ ಜನರು ಸಂಕಷ್ಟದಲ್ಲಿದ್ದಾರೆ ಎಂದು ಅವರು ಟೀಕಿಸಿದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸೋಮವಾರ ಪಕ್ಷದ ನಾಯಕರಿಂದ ಕಾಂಗ್ರೆಸ್ ಸರ್ಕಾರದ ಚಾರ್ಜ್‌ಶೀಟ್ ಬಿಡುಗಡೆ ಮಾಡಲಾಯಿತು.

ಇದು ಶೇಕಡ 60 ಪರ್ಸೆಂಟ್ ಸರ್ಕಾರವಾಗಿದ್ದು, ಯಾವ ಇಲಾಖೆ ನೋಡಿದರೂ ಅಲ್ಲಿ ವಸೂಲಿ ನಡೆಯುತ್ತಿದೆ. ಮೈಸೂರಿನ ಮುಡಾದಲ್ಲಿ ಕೋಟ್ಯಾಂತರ ರೂಪಾಯಿ ಹಗರಣ ನಡೆದಿದೆ. ವಾಲ್ಮೀಕಿ ನಿಗಮದಲ್ಲಿ ಹಣ ಲೂಟಿ ಮಾಡಿ ಲ್ಯಾಂಬೋರ್ಗಿನಿ ಕಾರು ಖರೀದಿ ಮಾಡಿದ್ದಾರೆ ಎಂದು ಆರೋಪಿಸಿದರು.

ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಔಷಧಿ ದೊರೆಯುತ್ತಿಲ್ಲ. ಕಾರ್ಮಿಕ ಇಲಾಖೆಯಲ್ಲಿ ಕಿಟ್ ವಿತರಣೆಯಲ್ಲಿ ಭಾರಿ ಹಗರಣ ನಡೆದಿದೆ. ಗುತ್ತಿಗೆದಾರರಿಗೆ 60 ಸಾವಿರ ಕೋಟಿ ಬಾಕಿ ನೀಡ ಬೇಕಿದ್ದು, ಬಿಲ್ ಪಾವತಿಸದೆ ಸತಾಯಿಸುತ್ತಿದ್ದಾರೆ. ಸಿದ್ದರಾಮಯ್ಯ ಸಂಪುಟದಲ್ಲಿ ಒಬ್ಬನೇ ಒಬ್ಬ ಪ್ರಾಮಾಣಿಕ ಸಚಿವ ಕಾಣುವುದಿಲ್ಲ. ತಿಂದು ತೇಗುವ ಸಚಿವರಿದ್ದಾರೆಯೇ ಹೊರತು ನಿಷ್ಠರಿಲ್ಲ ಎಂದು ಡಾ.ಅಶ್ವಥ್ ನಾರಾಯಣ್ ಆರೋಪಿಸಿದರು.

ಗಲಭೆಕೋರರಿಗೆ ರಕ್ಷಣೆ ನೀಡುತ್ತಾರೆ. ಬಾಂಬ್ ಹಾಕುವ ದೇಶದ್ರೋಹಿಗಳನ್ನು ಅಮಾಯಕರು ಎನ್ನುತ್ತಾರೆ. ಸಾವಿನ ಮನೆಯಲ್ಲಿ ರಾಜಕಾರಣ ಮಾಡುತ್ತಾರೆ ಎಂದು ಆಪಾದಿಸಿದರು.

ಎಲ್ಲೆ ಹೋದರು ಮಾತನಾಡುವಾಗ ಜೇಬಿನಿಂದ ಸಂವಿಧಾನದ ಪುಸ್ತಕವೆಂದು ತೋರಿಸುತ್ತಾರೆ. ಅದು ಸಂವಿಧಾನದ ಪುಸ್ತಕವೋ ಅಥವಾ ಬೈಬಲ್ಲೋ ತಿಳಿಯದು ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ನಡೆಯನ್ನು ಡಾ.ಅಶ್ವಥ್ ನಾರಾಯಣ್ ಗೇಲಿ ಮಾಡಿದರು. ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ನಗರ ಅಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಮಾಜಿ ಮೇಯರ್ ಶಿವಕುಮಾರ್, ಉಪಾಧ್ಯಕ್ಷ ಜೋಗಿ ಮಂಜು, ಪ್ರಧಾನ ಕಾರ್ಯದರ್ಶಿ ಮಹೇಶ್, ಗ್ರಾಮಾಂತರ ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣ, ಮುಖಂಡರಾದ ಡಾ.ಶುಶ್ರುತ್‌ಗೌಡ, ಮಾಧ್ಯಮ ಸಂಚಾಲಕ ಮಹೇಶ್ ರಾಜ್ ಅರಸ್ ಸೇರಿದಂತೆ ಹಲವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕರ್ನಾಟಕ ಲೂಟಿ–ಕಾಂಗ್ರೆಸ್ ಡ್ಯೂಟಿ

ಕರ್ನಾಟಕ ಲೂಟಿ– ಕಾಂಗ್ರೆಸ್ ಡ್ಯೂಟಿ ಎಂಬ ಘೋಷವಾಕ್ಯವಿರುವ ಚಾರ್ಜ್‌ಶೀಟ್‌ನಲ್ಲಿ ಪ್ರತಿಯೊಂದು ವಿವರವನ್ನು ಸೂಕ್ಷ್ಮವಾಗಿ ವಿವರಿಸಲಾಗಿದೆ. ಕತ್ತಲಾಗಿರುವ ಕರ್ನಾಟಕದ ಭೂಪಟದಲ್ಲಿ ಕಣ್ಮುಚ್ಚಿ ಕುಳಿತಿರುವ ಸಿದ್ದರಾಮಯ್ಯ ಅವರ ಮೇಲೆ ಕನ್ನಡಿಗರ ಭವಿಷ್ಯ ಕತ್ತಲೆಯತ್ತ ಎಂದು ಉಲ್ಲೇಖಿಸಲಾಗಿದೆ.

ಹಾಲಿನ ದರ 9 ರೂಪಾಯಿ ಹೆಚ್ಚಳ, ದಿನಬಳಕೆ ವಸ್ತುಗಳ ನಿರಂತರ ಬೆಲೆ ಏರಿಕೆ, ಪೆಟ್ರೋಲ್, ಡೀಸೆಲ್ ಮೇಲಿನ ರಾಜ್ಯದ ಸುಂಕ ಹೆಚ್ಚಳ, ಬಸ್ಸು, ಮೆಟ್ರೋ ಪ್ರಯಾಣ ದರ ಹೆಚ್ಚಳ, ಬಿತ್ತನೆ ಬೀಜ ಟಿಸಿ ಸಂಪರ್ಕ ದರ ಬಲು ದುಬಾರಿ, ಮುಡಾ, ವಾಲ್ಮೀಕಿ ನಿಗಮ, ಕಾರ್ಮಿಕ ಇಲಾಖೆ ಹಗರಣ, ಎಸ್‌ಸಿ ಎಸ್ಟಿ ಟಿಎಸ್‌ಪಿ ಹಣ ದುರ್ಬಳಕೆ– ಮುಸ್ಲಿಂರಿಗೆ ಶೇಕಡ 4 ಮೀಸಲಾತಿ, ಅಭಿವೃದ್ಧಿಗಿಲ್ಲ ಅನುದಾನ, ಕರ್ನಾಟಕದಿಂದ ಪ್ರಮುಖ ಕೈಗಾರಿಕೆಗಳ ವಲಸೆ, ಹಣದುಬ್ಬರ ಏರಿಕೆ

ಹೀಗೆ ರಾಜ್ಯ ಕಾಂಗ್ರೆಸ್ ಸರ್ಕಾರದ ಭ್ರಷ್ಟತೆ, ಲೂಟಿ, ಬೆಲೆ ಏರಿಕೆ ಅವ್ಯವಸ್ಥೆಯನ್ನು ಒಂದೊಂದಾಗಿ ಬಿಡಿಸಿ ಹೇಳಲಾಗಿದೆ. ಇದರಿಂದ ಹೊಸಪೇಟೆಯಲ್ಲಿ ಕಾಂಗ್ರೆಸ್ ಸರ್ಕಾರ ಮಾಡುತ್ತಿರುವುದು ಸಾಧನಾ ಸಮಾವೇಶವಲ್ಲ, ಶೂನ್ಯ ಸಮಾವೇಶ ಎಂದು ಬಿಜೆಪಿ ನಾಯಕರು ಜರಿದರು. ಕರ್ನಾಟಕ ಈ ತನಕ ಒಟ್ಟು 7 ಲಕ್ಷ ಕೋಟಿ ಸಾಲ ಮಾಡಿದೆ. ಇದರಲ್ಲಿ ನಮ್ಮ ಸರ್ಕಾರದ ಅವಧಿಯಲ್ಲಿ ಮೂರು ಲಕ್ಷ ಕೋಟಿ ಸಾಲ ಮಾಡಿದ್ದರೆ, ಕಾಂಗ್ರೆಸ್ ಅವಧಿಯಲ್ಲಿ ಮೂರೂವರೆ ಲಕ್ಷ ಕೋಟಿ ಸಾಲ ಮಾಡಲಾಗಿದೆ ಎಂದು ಡಾ.ಅಶ್ವಥ ನಾರಾಯಣ ತಿಳಿಸಿದರು.

ಬಿಜೆಪಿ ಸರ್ಕಾರ ಕೂಡ ಸಾಲ ಮಾಡಿದೆಯಲ್ಲ ಎಂಬ ಪ್ರಶ್ನೆಗೆ ಡಾ.ಅಶ್ವಥ್ ನಾರಾಯಣ್ ಯಾವುದೇ ಪ್ರತಿಕ್ರಿಯೆ ನೀಡದೆ ಪತ್ರಿಕಾಗೋಷ್ಠಿ ಸಮಾಪ್ತಿಗೊಳಿಸಿದರು.

ಅಭಿನಂದನೆ



ಚೆಸ್ಕಾಂನ ನೂತನ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಂ. ಮುನಿಗೋಪಾಲ್ ರಾಜು ಅವರನ್ನು ಇಂಡಿಯನ್ ಟಿವಿಯ ವ್ಯವಸ್ಥಾಪಕ ನಿರ್ದೇಶಕ ಎಸ್.ವೆಂಕಟೇಶ್ ಕುಮಾರ್ ಆತ್ಮೀಯವಾಗಿ ಅಭಿನಂದಿಸಿದರು.

ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಆಯ್ಕೆ



ಮೈಸೂರು: ಹನೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಸಾಲಗಾರರ ಕ್ಷೇತ್ರದ ಮಹಿಳಾ ಮೀಸಲು ಸ್ಥಾನದಿಂದ ಉದ್ದನೂರಿನ ಪುಷ್ಪಲತಾ ಮಲ್ಲುಸ್ವಾಮಿ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ನಾಳೆ ವಿದ್ಯುತ್ ವ್ಯತ್ಯಯ

ಮೈಸೂರು, ಮೇ 19– ಮೇ 21 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ರವರೆಗೆ ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯ ನಿರ್ವಹಣಾ ಕೆಲಸ ನಿಮಿತ್ತ ಜಯಪುರ ಗ್ರಾಪಂ ವ್ಯಾಪ್ತಿಯ ಗ್ರಾಮಗಳು, ಮಾರ್ಬಳ್ಳಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳು, ಗೋಪಾಲಪುರ ಗ್ರಾಪಂ ವ್ಯಾಪ್ತಿಯ ಗ್ರಾಮಗಳು, ಉದ್ಬೂರು ಗ್ರಾಪಂ ವ್ಯಾಪ್ತಿಯ ಗ್ರಾಮಗಳು, ಧನಗಳ್ಳಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳು, ಹಾರೋಹಳ್ಳಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಪ್ರತಿಭಾ ಪುರಸ್ಕಾರ

ಮೈಸೂರು, ಮೇ 19– ಕರ್ನಾಟಕ ರಾಜ್ಯ ಎಸ್‌ಸಿ, ಎಸ್‌ಟಿ ಪ್ರಾಥಮಿಕ, ಮಾಧ್ಯಮಿಕ ಶಾಲಾ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು ವತಿಯಿಂದ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಶೇ.86ಕ್ಕಿಂತ ಹೆಚ್ಚು ಅಂಕ ಗಳಿಸಿದ ಸಂಘದ ಶಿಕ್ಷಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು. ಆಸಕ್ತರು ಮೇ 31ರೊಳಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ. ಮಾಹಿತಿಗೆ ಮೊ.ನಂ.9986485831, 7760517374 ಸಂಪರ್ಕಿಸಬಹುದು.

ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಮೇ 19– ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಮೇ 22ರಂದು ಬೆಳಗ್ಗೆ 10ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ. 0821–4259259.

ಅಪರಿಚಿತ ಶವ ಪತ್ತೆ

ಮೈಸೂರು, ಮೇ 19– ಸುಮಾರು 50ರಿಂದ 55 ವರ್ಷದ ಅಪರಿಚಿತ ವ್ಯಕ್ತಿ ಮೇ 9ರಂದು ರೈಲುಗಾಡಿಗೆ ಸಿಕ್ಕಿ ಮೃತಪಟ್ಟಿದ್ದಾರೆ. ಮೃತದೇಹವು ಮೈಸೂರಿನ ಕೆ.ಆರ್ ಆಸ್ಪತ್ರೆಯ ಶವಾಗಾರದಲ್ಲಿದ್ದು, ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತನ ವಾರಸುದಾರರ ಬಗ್ಗೆ ಮಾಹಿತಿ ಕಂಡುಬಂದಲ್ಲಿ ಮೈಸೂರು ಪೊಲೀಸ್ ಠಾಣೆಯ ದೂ.ಸಂ:0821–2516579 ಸಂಪರ್ಕಿಸಬಹುದಾಗಿದೆ ಎಂದು ಮೈಸೂರು ರೈಲ್ವೆ ಪೊಲೀಸ್ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗಾಂಧಿನಗರ ಯುವ ಬಳಗದಿಂದ ಡಾ.ಅಂಬೇಡ್ಕರ್ ಜಯಂತಿ ಆಚರಣೆ

ಮಹಾನಾಯಕ ಕಪ್ ಕ್ರಿಕೆಟ್ ಪಂದ್ಯಾವಳಿ; ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ, ಗಣ್ಯರಿಗೆ ಸನ್ಮಾನ





ಮೈಸೂರಿನ ಗಾಂಧಿನಗರದ ಯುವ ಬಳಗದಿಂದ ಮಹಾನಾಯಕ ಕಪ್ ಕ್ರಿಕೆಟ್ ಪಂದ್ಯಾವಳಿ ವಿಜೇತರು ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಮೈಸೂರು: ಮೈಸೂರಿನ ಗಾಂಧಿನಗರದ ಯುವ ಬಳಗದ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತಿ ಪ್ರಯುಕ್ತ ಮಹಾನಾಯಕ ಕಪ್ (ಸೀಸನ್ ಒಂದು) ಕ್ರಿಕೆಟ್ ಪಂದ್ಯಾವಳಿ ಏರ್ಪಡಿಸಲಾಗಿತ್ತು.

ವಿಜೇತರಿಗೆ ಮೈಸೂರು ನಗರ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರತಾಪ್ ಬಹುಮಾನವನ್ನು ನೀಡಿದರು. ಇದೇ ವೇಳೆ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಗಾಂಧಿನಗರದಲ್ಲಿ ಡಾಕ್ಟರೇಟ್ ಪಡೆದ ಪದವೀಧರರಿಗೂ ಸನ್ಮಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ನಗರಪಾಲಿಕೆ ಮಾಜಿ ಸದಸ್ಯರಾದ ಸಿದ್ದಪ್ಪ, ಡಾ.ಅಶ್ವಿನಿ ಶರತ್, ಮೈಸೂರು ಮಹಾನಗರಪಾಲಿಕೆ ಗುತ್ತಿಗೆದಾರರ ಸಂಘದ ಅಧ್ಯಕ್ಷ ಉದಯ್, ಕಾಂಗ್ರೆಸ್ ಮುಖಂಡ ಇರ್ಫಾನ್, ಕುಮಾರ್ ಸಿ. ಮತ್ತು ನರಸಿಂಹರಾಜ ಪೊಲೀಸ್ ಠಾಣೆ ಸಬ್‌ಇನ್ಸ್‌ಪೆಕ್ಟರ್ ರಾಜು, ಗರಡಿ ಮನೆ ಯಜಮಾನರಾದ ನಾಗಣ್ಣ, ರೈಲ್ವೆ ಇಲಾಖೆಯ ನಿವೃತ್ತ ನೌಕರ ಈಶ್ವರ್ ಎಸ್, ಕರ್ನಾಟಕ ಭೀಮ್ ಸೇನೆ ರಾಜ್ಯ ಸಂಘಟನಾ ಕಾರ್ಯದರ್ಶಿ ಎಂ.ಮಂಜುನಾಥ್, ಮೈಸೂರು ನಗರ ಯುವ ಕಾಂಗ್ರೆಸ್ ಅಧ್ಯಕ್ಷ ಅಬ್ರಾರ್, ಮೈಸೂರು ನಗರ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರತಾಪ್, ಜೈ ಭೀಮ್ ಜನಸ್ಪಂದನಾ ವೇದಿಕೆ ಅಧ್ಯಕ್ಷ ಚೇತನ್ ಕಾಂತರಾಜ್, ಗಾಂಧಿನಗರದ ಯುವ ಬಳಗದ ಸದಸ್ಯರಾದ ಮಯೂರ್, ಆಕಾಶ್, ಮಂಜೇಶ್, ಭೈರವ್, ಲೋಹಿತ್, ಸುಹಾಸ್, ಪ್ರಜ್ವಲ್ ಹಾಗೂ ಗಾಂಧಿನಗರದ ನಿವಾಸಿಗಳು ಉಪಸ್ಥಿತರಿದ್ದರು.

ದೇವರ ದರ್ಶನ ಮುಗಿಸಿ ವಾಪಸ್ಸಾಗುತ್ತಿದ್ದಾಗ ಕಾರು ಪಲ್ಟಿ; ತುಮಕೂರಿನ ಮೂವರು ಸಾವು



ತುಮಕೂರು: ಆಂಧ್ರ ಪ್ರದೇಶದ ಪ್ರಸಿದ್ಧ ದೇವಾಲಯಗಳಿಗೆ ತೆರಳಿ ವಾಪಸ್ಸಾಗುತ್ತಿದ್ದಾಗ ಸಂಭವಿಸಿದ ರಸ್ತೆ ಅಪಘಾತದಲ್ಲಿ ತುಮಕೂರಿನ ಮೂವರು ಸಾವನ್ನಪ್ಪಿದ್ದು, ಇತರ ಮೂವರು ಗಾಯಗೊಂಡಿರುವ ಘಟನೆ ಭಾನುವಾರ ನಡೆದಿದೆ. ನಂದ್ಯಾಲ್ ಜಿಲ್ಲೆಯ ಪಯಾಪಿಲಿ ಮಂಡಲದ ಪೊದೊಡ್ಡಿ ಬಳಿ ಇನ್ನೋವಾ ಪಲ್ಟಿಯಾಗಿ ಅಪಘಾತ ಸಂಭವಿಸಿದೆ.

ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಆರು ಜನರು ಸ್ನೇಹಿತರಾಗಿದ್ದು, ತುಮಕೂರು ಮೂಲದವರು. ಅವರು ಪ್ರಸಿದ್ಧ ಶ್ರೀ ಶೈಲಂ ಮಲ್ಲಿಕಾರ್ಜುನ ಸ್ವಾಮಿ, ಮಹಾನಂದಿ ದೇವಸ್ಥಾನಗಳಿಗೆ ಭೇಟಿ ನೀಡಿ ದೇವರ ದರ್ಶನ ಪಡೆದು ತುಮಕೂರಿಗೆ ವಾಪಸ್ಸಾಗುತ್ತಿದ್ದಾಗ ಕಾರು ನಿಯಂತ್ರಣ ತಪ್ಪಿ ಪಲ್ಟಿಯಾಗಿದೆ. ಪರಿಣಾಮ ಕಾರಿನಲ್ಲಿದ್ದ ಮೂವರು ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ಮೃತರನ್ನು ಸಂತೋಷ್, ಲೋಕೇಶ್ ಮತ್ತು ನವೀನ್ ಎಂದು ಗುರುತಿಸಲಾಗಿದೆ. ಗಾಯಗೊಂಡ ಇತರ ಮೂವರು ಪ್ರಯಾಣಿಕರನ್ನು ಚಿಕಿತ್ಸೆಗಾಗಿ ಕರ್ನೂಲ್ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಈ ತಿಂಗಳ ಆರಂಭದಲ್ಲಿ ಅದೋನಿ ಜಿಲ್ಲೆಯಲ್ಲಿ ಸಂಭವಿಸಿದ್ದ ಇದೇ ರೀತಿಯ ಘಟನೆಯಲ್ಲಿ, ನಾಲ್ವರು ಪ್ರಾಣ ಕಳೆದುಕೊಂಡಿದ್ದರು. ಶ್ರೀಶೈಲದಲ್ಲಿ ಪೂಜೆ ಸಲ್ಲಿಸಿ ಮನೆಗೆ ವಾಪಸ್ಸಾಗುತ್ತಿದ್ದ ಅಪಘಾತ ಸಂಭವಿಸಿತ್ತು. ಈ ಕುರಿತು ತೀವ್ರ ಆಘಾತ ವ್ಯಕ್ತಪಡಿಸಿರುವ ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ವೈಎಸ್ ಜಗನ್ ಮೋಹನ್ ರೆಡ್ಡಿ, ಗಾಯಗೊಂಡವರಿಗೆ ಸಾಧ್ಯವಾದಷ್ಟು ಉತ್ತಮ ವೈದ್ಯಕೀಯ ಸೇವೆ ಒದಗಿಸಬೇಕು, ಮೃತರ ಕುಟುಂಬಗಳಿಗೆ ಅಗತ್ಯವಿರುವ ಎಲ್ಲ ಬೆಂಬಲವನ್ನು ಒದಗಿಸುವಂತೆ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ಶವಸಂಸ್ಕಾರಕ್ಕೆ ಜೈವಿಕ ಅನಿಲ ಘಟಕ ಸ್ಥಾಪನೆ

ಮೈಸೂರು, ಮೇ19(ಬಿಎಲ್‌ಯು)– ಚಾಮುಂಡಿಬೆಟ್ಟದ ತಪ್ಪಲಿನ ಸ್ಮಶಾನದಲ್ಲಿ ಶವಸಂಸ್ಕಾರಕ್ಕೆ ಮಾಲಿನ್ಯ ಮುಕ್ತ ಬಯೋಗ್ಯಾಸ್ ಸ್ಥಾವರವನ್ನು ನಿರ್ಮಾಣ ಮಾಡಲಾಗುತ್ತಿದೆ.

ಈ ಘಟಕ ನಿರ್ಮಾಣಕ್ಕೆ 98 ಲಕ್ಷ ರೂಪಾಯಿ ವೆಚ್ಚ ಮಾಡಲಾಗುತ್ತಿದ್ದು, ನಗರದಲ್ಲಿ ಉತ್ಪತ್ತಿಯಾಗುವ ಕಸವನ್ನು ಜೈವಿಕ ಅನಿಲವಾಗಿ ಪರಿವರ್ತಿಸಲಾಗುತ್ತಿದೆ. ಬೆಂಗಳೂರಿನ ಗ್ರೀನಿಯಾ ಎಂಬ ಕಂಪನಿ ಇಲ್ಲಿ ಜೈವಿಕ ಅನಿಲ ಘಟಕ ನಿರ್ಮಾಣ ಮಾಡುವ ಹೊಣೆ ಹೊತ್ತಿದೆ.

ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಪ್ರತಿದಿನ ಹತ್ತಾರು ಶವಗಳ ಸಂಸ್ಕಾರ ನಡೆಯುತ್ತದೆ. ಅಲ್ಲಿ ಹೊರ ಸೂಸುವ ದಟ್ಟ ಹೊಗೆ ಮತ್ತು ವಾಸನೆಯಿಂದ ಸುತ್ತಮುತ್ತಲಿನ ಜನರು ತೊಂದರೆ ಅನುಭವಿಸುತ್ತಿದ್ದರು. ಈ ಸಮಸ್ಯೆಯಿಂದ ಮುಕ್ತ ಮಾಡುವಂತೆ ಅಲ್ಲಿನ ಜನ ದಶಕಗಳಿಂದ ಮನವಿ ಮಾಡುತ್ತಿದ್ದರು. ಈಗ ಜೈವಿಕ ಅನಿಲ ಘಟಕ ನಿರ್ಮಾಣ ಮಾಡುತ್ತಿರುವ ಹಿನ್ನೆಲೆ ಹೊಗೆ ಹೊರಸೂಸುವಿಕೆ ಕಡಿಮೆಯಾಗುತ್ತದೆ.

ಈ ಮೊದಲು ಶವ ಸಂಸ್ಕಾರಕ್ಕೆ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳನ್ನು ಬಳಸಲಾಗುತ್ತಿತ್ತು. ಹಾಗಾಗಿ ನಗರ ಪಾಲಿಕೆಗೆ ವೆಚ್ಚವೂ ಹೆಚ್ಚಾಗುತ್ತಿತ್ತು. ಆದರೆ ಈಗ ಬಯೋಗ್ಯಾಸ್ ಘಟಕ ನಿರ್ಮಾಣದಿಂದ ವೆಚ್ಚವು ಕಡಿಮೆಯಾಗಲಿದೆ.

ಪ್ರಸ್ತುತ ಒಂದು ದಿನಕ್ಕೆ 40 ರಿಂದ 50 ಎಲ್‌ಪಿಜಿ ಸಿಲಿಂಡರ್ ಬೇಕಾಗುತ್ತದೆ. ಅದೇ ಸಾವಯವ ತ್ಯಾಜ್ಯದಿಂದ ಜೈವಿಕ ಅನಿಲ ಉತ್ಪಾದಿಸಿದರೆ ಎಲ್‌ಪಿಜಿ ಸಿಲಿಂಡರ್ ಅವಶ್ಯಕತೆ ಇರುವುದಿಲ್ಲ. 2 ಟನ್ ತ್ಯಾಜ್ಯದಿಂದ ಉತ್ಪಾದನೆಯಾಗುವ ಜೈವಿಕ ಅನಿಲ 55 ಕೆ.ಜಿ ಎಲ್‌ಪಿಜಿ ಸಿಲಿಂಡರ್‌ಗೆ ಸಮನಾಗಿರುತ್ತದೆ. ಇದರಿಂದ ಎಲ್‌ಪಿಜಿ ಸಿಲಿಂಡರ್‌ಗೆ ಅಧಿಕ ವೆಚ್ಚ ಮಾಡುವುದು ತಪ್ಪುತ್ತದೆ.



"ಚಾಮುಂಡಿಬೆಟ್ಟದ ತಪ್ಪಲಿನ ಜೈವಿಕ ಅನಿಲ ಘಟಕ ನಿರ್ಮಾಣ ಮಾಡಲು ಕಳೆದ ನಾಲ್ಕು ವರ್ಷದಿಂದ ನಗರಪಾಲಿಕೆಯ ಮುಂದೆ ಪ್ರಸ್ತಾವನೆ ಇತ್ತು. ಕೌನ್ಸಿಲ್ ಸಭೆ ಒಪ್ಪಿಗೆ ಪಡೆದ ನಂತರ ಪ್ರಕ್ರಿಯೆ ಆರಂಭಿಸಲಾಗಿತ್ತು. ಈಗ ಜೈವಿಕ ಅನಿಲ ಘಟಕ ನಿರ್ಮಾಣ ಕಾರ್ಯ ಬಹುತೇಕ ಪೂರ್ಣಗೊಂಡಿದೆ. ಟೆಂಡರ್ ಮೂಲಕ ಬೆಂಗಳೂರಿನ 'ಗ್ರೀನಿಯಾ' ಕಂಪನಿಗೆ ಅನಿಲ ಘಟಕ ಸ್ಥಾಪನೆ ಗುತ್ತಿಗೆ ನೀಡಲಾಗಿದೆ. 98 ಲಕ್ಷ ರೂಪಾಯಿಗೆ ಟೆಂಡರ್ ನೀಡಲಾಗಿದೆ. ಜೈವಿಕ ಅನಿಲ ಘಟಕ ನಿರ್ಮಾಣವಾದ ಮೇಲೆ 250 ಕೆ.ಜಿ. ಕಸ, 500 ಕೆ.ಜಿ. ಕಸ, 1 ಟನ್ ಕಸವನ್ನು ಹಂತ ಹಂತವಾಗಿ ಒದಗಿಸಿ ಜೈವಿಕ ಅನಿಲ ಉತ್ಪತ್ತಿ ಮಾಡಲಾಗುವುದು. ಹೀಗೆ ಉತ್ಪತ್ತಿಯಾದ ಅನಿಲ ಟ್ಯಾಂಕರ್‌ನಲ್ಲಿ ಶೇಖರಣೆಯಾಗುತ್ತದೆ. ಇಲ್ಲಿ ಶೇಖರಣೆಯಾದ ಅನಿಲವನ್ನು ಶವಸಂಸ್ಕಾರಕ್ಕೆ ಬಳಸಲಾಗುತ್ತದೆ.

–ಜ್ಯೋತಿ, ಎಕ್ಸಿಕ್ಯೂಟಿವ್ ಇಂಜಿನಿಯರ್, ಮೈಸೂರು ಮಹಾ ನಗರಪಾಲಿಕೆ

ಕನಕಪುರ ರಸ್ತೆಯಲ್ಲಿ ಸಾರಿಗೆ ಬಸ್ ಪಲ್ಟಿ: ಎಲೆಕ್ಟ್ರಾನಿಕ್ ಸಿಟಿ ಎಸ್‌ಐ ಸೇರಿ ಇಬ್ಬರು ಸಾವು

ಕನಕಪುರ: ಬೆಂಗಳೂರು– ಕನಕಪುರ ರಸ್ತೆಯಲ್ಲಿ ಸೋಮವಾರ ಬೆಳಿಗ್ಗೆ ಕೆ.ಎಸ್.ಆರ್.ಟಿ ಬಸ್ ಮೋರಿಗೆ ಪಲ್ಟಿಯಾಗಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಸೇರಿ ಇಬ್ಬರು ಮೃತಪಟ್ಟಿದ್ದು, ನಾಲ್ವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸ್ ಠಾಣೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪಿಎಸ್‌ಐ ನಾಗರಾಜ್ ಹಾಗೂ ಮತ್ತೊಬ್ಬ ನಾಗರಿಕರು ಸಾವನ್ನಪ್ಪಿದ್ದಾರೆ. ಗಾಯಾಳುಗಳ ಪೈಕಿ ಒಬ್ಬರನ್ನು ನಿಮ್ಹಾನ್ಸ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಮೂವರನ್ನು ದಯಾನಂದ ಸಾಗರ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಬಸ್ಸು ಬೆಳಿಗ್ಗೆ ಕನಕಪುರದಿಂದ ಬೆಂಗಳೂರಿಗೆ ಹೋಗುತ್ತಿತ್ತು. ಕಗ್ಗಲೀಪುರ ಠಾಣೆ ಸಮೀಪ ನಿಯಂತ್ರಣ ಕಳೆದುಕೊಂಡ ಚಾಲಕ, ರಸ್ತೆ ವಿಭಜಕದ ಮೇಲೆ ಹತ್ತಿಸಿದ್ದಾನೆ. ಪಕ್ಕದ ರಸ್ತೆಗೆ ನುಗ್ಗಿದ ಬಸ್, ಎದುರಿಗೆ ಬಂದ ನಾಗರಾಜ್ ಮತ್ತು ಮತ್ತೊಬ್ಬರು ಇದ್ದ ಬೈಕ್‌ಗೆ ಡಿಕ್ಕಿ ಹೊಡೆದು, ಪಕ್ಕದ ಹಳ್ಳಕ್ಕೆ ಬಿದ್ದಿದೆ. ಈ ಸಂಬಂಧ ಕಗ್ಗಲೀಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕಾರ್ಯನಿಮಿತ್ತ ಮೈಸೂರಿಗೆ ಆಗಮಿಸಿದ ಸಹಕಾರ ಸಚಿವ ಕೆ.ರಾಜಣ್ಣ ಅವರನ್ನು ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ ನಿಕಟಪೂರ್ವ ನಿರ್ದೇಶಕ ಎಸ್.ಆರ್.ರವಿಕುಮಾರ್ ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು. ಈ ವೇಳೆ ರಾಜ್ಯ ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಮಾಜಿ ಕಾರ್ಪೋರೇಟರ್ ಲೋಕೇಶ್ ಪಿಯಾ, ನಾಗೇಶ್ ನಾಯಕ ಇನ್ನಿತರರಿದ್ದರು.



ಮೈಸೂರು ಹಿನಕಲ್‌ನ ಡಾ.ಬಿ.ಆರ್.ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಸಂಘದ ಉಪಾಧ್ಯಕ್ಷ ಗಣೇಶ್, ಪ್ರಧಾನ ಕಾರ್ಯದರ್ಶಿ ಹಿನಕಲ್ ನಂಜುಂಡ, ಸಂಘಟನಾ ಕಾರ್ಯದರ್ಶಿ ಹಿನಕಲ್ ಮಂಜು, ನಿರ್ದೇಶಕರಾದ ರೇವಣ್ಣ, ಚೆಲುವರಾಜ್, ಕೃಷ್ಣಪ್ಪ, ಇಂದ್ರೇಶ್, ರಾಜು, ಯುವ ಮುಖಂಡರಾದ ಶಾಮ, ಮಧು ಇನ್ನಿತರರು ಉಪಸ್ಥಿತರಿದ್ದರು.

ಬೆಂಗಳೂರಲ್ಲಿ ಭಾರಿ ಮಳೆ: 10 ಕಿ.ಮೀ ಟ್ರಾಫಿಕ್ ಜಾಮ್!

ಬೆಂಗಳೂರು: ಬೆಂಗಳೂರಿನಲ್ಲಿ ವರುಣಾರ್ಭಟ ಮುಂದುವರೆದಿದ್ದು, ಕೇವಲ 24 ಗಂಟೆಗಳಲ್ಲಿ ಬರೊಬ್ಬರಿ 103 ಮಿ.ಮೀ ಮಳೆಯಾಗಿದ್ದು, ಮಳೆಯ ರೌದ್ರಾವತಾರದಿಂದ 10 ಕಿಲೋ ಮೀಟರ್‌ವರೆಗೂ ಟ್ರಾಫಿಕ್ ಜಾಮ್ ಉಂಟಾಗಿರುವ ಘಟನೆ ನಡೆದಿದೆ.

ಸೋಮವಾರ ಸುರಿದ ಭಾರಿ ಮಳೆಯಿಂದಾಗಿ ಬೆಂಗಳೂರು ನಗರದ ಹಲವು ಭಾಗಗಳು ಜಲಾವೃತವಾಗಿದ್ದು, ರಸ್ತೆಗಳಲ್ಲಿ ನೀರು ನಿಂತು ಸವಾರರು ಪರದಾಡಿದರು. ಜನ ವಸತಿ ಪ್ರದೇಶಗಳು ಜಲಾವೃತಗೊಂಡಿದ್ದು, ಸಂಚಾರ ಅಸ್ತವ್ಯಸ್ತವಾಗಿದೆ.

ಈ ಕುರಿತು ಮಾಹಿತಿ ನೀಡಿರುವ ಹವಾಮಾನ ಇಲಾಖೆ ಬೆಂಗಳೂರಿನಲ್ಲಿ ಕಳೆದ 24 ಗಂಟೆಗಳಲ್ಲಿ ದಾಖಲೆಯ 103 ಮಿಮೀ ಮಳೆಯಾಗಿದೆ. ಮುಂಬರುವ ದಿನಗಳಲ್ಲಿ ನಗರದಲ್ಲಿ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದೆ ಎಂದು ಹೇಳಿದೆ. ನಗರದ ಹವ್ಯಾಸಿ ಹವಾಮಾನ ವೀಕ್ಷಕರ ಪ್ರಕಾರ, ಬೆಂಗಳೂರಿನಲ್ಲಿ ಈ ಪೂರ್ವ ಮಾನ್ಸೂನ್ ಋತುವಿನಲ್ಲಿ, ಕಳೆದ 2 ದಿನಗಳಿಂದ 15ರಿಂದ 20 ಸೆಂ.ಮೀ. ಮಳೆಯಾಗುತ್ತಿದೆ ಎಂದು ಹೇಳಿದ್ದಾರೆ.



ಬೆಂಗಳೂರಿನಲ್ಲಿ ನಿನ್ನೆ ರಾತ್ರಿ ಭಾರಿ ಮಳೆಯಾಗಿದ್ದು, ಕೆಂಗೇರಿಯಲ್ಲಿ 132 ಮಿಮೀ, ಕೋರಮಂಗಲದಲ್ಲಿ 96.5 ಮಿಮೀ ಮತ್ತು ಎಚ್‌ಎಎಲ್‌ನಲ್ಲಿ 93 ಮಿಮೀ ಮಳೆಯಾಗಿದ್ದು, ವ್ಯಾಪಕ ಪ್ರವಾಹ ಉಂಟಾಗಿದೆ. ಗುರುವಾರದವರೆಗೆ ಹೆಚ್ಚಿನ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಗೃಹ ಸಚಿವ ಜಿ ಪರಮೇಶ್ವರ ಅವರು ಈ ಬಗ್ಗೆ ಮಾಹಿತಿ ನೀಡಿದ್ದು, ಕಳೆದ 3 ದಿನಗಳಿಂದ ಬೆಂಗಳೂರಿನಲ್ಲಿ ಭಾರಿ ಮಳೆಯಾಗುತ್ತಿದೆ. ಮುಂಗಾರು ಪೂರ್ವದಲ್ಲಿ, ನಾವು ಸಾಮಾನ್ಯವಾಗಿ ಪ್ರವಾಹ ನೋಡುತ್ತೇವೆ. ಬಿಬಿಎಂಪಿ (ಬೃಹತ್ ಬೆಂಗಳೂರು ಮಹಾನಗರಪಾಲಿಕೆ) ನೀರು ನಿಂತಿರುವುದನ್ನು ಮತ್ತು ರಸ್ತೆಗಳಿಂದ ಉರುಳಿದ ಮರಗಳು ಮತ್ತು ಕೊಂಬೆಗಳನ್ನು ತೆರವುಗೊಳಿಸುವ ಕೆಲಸದಲ್ಲಿದೆ. ಅಧಿಕಾರಿಗಳು ಕಾರ್ಯಪ್ರವೃತ್ತರಾಗಿದ್ದಾರೆ ಎಂದರು.

24 ಗಂಟೆಗಳಲ್ಲಿ 103 ಮಿಮೀ ಮಳೆ

ಬೆಂಗಳೂರಿನಲ್ಲಿ ಇದುವರೆಗೆ ಮಳೆಯಿಂದ ಹೆಚ್ಚು ಹಾನಿಗೊಳಗಾದ ಪ್ರದೇಶಗಳಲ್ಲಿ ಮಹದೇವಪುರ ವಲಯದಲ್ಲಿ ಬರುವ ಹೊರಮಾವುವಿನ ಸಾಯಿ ಲೇಔಟ್ ಒಂದಾಗಿದೆ. ಇದಕ್ಕೂ ಮೊದಲು, ಮಾನ್ಸೂನ್ ಪೂರ್ವ ಮಳೆಯು ಲೇಔಟ್ ಅನ್ನು 4–5 ಅಡಿ ನೀರಿನಿಂದ ಮುಳುಗಿಸಿ, ಬೀದಿಗಳು ಮೊಣಕಾಲು ಮಟ್ಟದವರೆಗೆ ಜಲಾವೃತಗೊಂಡಿತ್ತು.

10 ಕಿ.ಮೀ ಟ್ರಾಫಿಕ್ ಜಾಮ್! ಬೆಂಗಳೂರಿನಲ್ಲಿ ಸುರಿದ ದಾಖಲೆಯ ಮಳೆಯಿಂದಾಗಿ ಬೆಂಗಳೂರಿನಲ್ಲಿ ಭಾರಿ ಉದ್ದದ ಟ್ರಾಫಿಕ್ ಜಾಮ್ ಉಂಟಾಗಿತ್ತು. ಬೆಂಗಳೂರಿನಲ್ಲಿ ಟ್ರಾಫಿಕ್ ಜಾಮ್‌ಗೆ ಕುಖ್ಯಾತಿ ಪಡೆದಿರುವ ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ನಿನ್ನೆ ರಾತ್ರಿ ಮಳೆಯಿಂದಾಗಿ ಬರೊಬ್ಬರಿ 10ಕಿಮೀವರೆಗೂ ಟ್ರಾಫಿಕ್ ಜಾಮ್ ಉಂಟಾಗಿತ್ತು ಎನ್ನಲಾಗಿದೆ. ಈ ಕುರಿತ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿವೆ.

ಭಾರಿ ಮಳೆಯಿಂದಾಗಿ ಒಳಚರಂಡಿಗಳು ಭರ್ತಿಯಾಗಿ ನೀರು ರಸ್ತೆ ಮೇಲೆ ಹರಿದಿದ್ದರಿಂದ ವಾಹನ ಸವಾರರು ಪರದಾಡಿದರು. ಈ ಬಗ್ಗೆ ಆಕ್ರೋಶ ವ್ಯಕ್ತಪಡಿಸಿರುವ ಸವಾರರು, ಮುಚ್ಚಿಹೋಗಿರುವ ಚರಂಡಿಗಳೇ ಇದಕ್ಕೆ ಕಾರಣ ಎಂದು ಆರೋಪಿಸಿದ್ದಾರೆ ಮತ್ತು ಅಧಿಕಾರಿಗಳಿಗೆ ಪದೇ ಪದೆ ದೂರು ನೀಡಿದರೂ ಅವುಗಳನ್ನು ಸ್ವಚ್ಛಗೊಳಿಸಿಲ್ಲ ಎಂದು ಆರೋಪಿಸಿದ್ದಾರೆ.

ಕೆ.ಆರ್.ಪೇಟೆಯಲ್ಲಿ ಉಪಲೋಕಾಯುಕ್ತರ ಮಿಂಚಿನ ಸಂಚಾರ

ಕೆಎಸ್‌ಆರ್‌ಟಿಸಿ, ಪುರಸಭೆ ಅಧಿಕಾರಿಗಳಿಗೆ ತರಾಟೆ

ಬಸ್ ನಿಲ್ದಾಣ ಮೇಲ್ದರ್ಜೆಗೇರಿಸುವಂತೆ ಸೂಚನೆ



ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಕೆ.ಆರ್.ಪೇಟೆ ಪಟ್ಟಣದಲ್ಲಿ ಮಿಂಚಿನ ಸಂಚಾರ ನಡೆಸಿ ಸಾರ್ವಜನಿಕರಿಂದ ಕುಂದುಕೊರತೆಗಳನ್ನು ಆಲಿಸಿದರು.

ಕೆ.ಆರ್.ಪೇಟೆ, ಮೇ 19– ಬಸ್ ನಿಲ್ದಾಣವನ್ನು ಮೇಲ್ದರ್ಜೆಗೇರಿಸಿ ಮಳೆನೀರು ತುಂಬಿಕೊಳ್ಳದಂತೆ ಸೂಕ್ತ ಕ್ರಮ ವಹಿಸಬೇಕು. ಇದುವರೆಗೂ ಮಳೆಯಿಂದ ಹಾನಿಗೀಡಾಗಿರುವ ಎಲ್ಲಾ ಸಂತ್ರಸ್ತರಿಗೂ ಪರಿಹಾರ ನೀಡುವ ಜವಾಬ್ದಾರಿಯನ್ನು ಸಾರಿಗೆ ಇಲಾಖೆ ಮತ್ತು ಪುರಸಭೆಯ ಅಧಿಕಾರಿಗಳನ್ನು ತೆಗೆದುಕೊಳ್ಳಬೇಕು ಎಂದು ರಾಜ್ಯದ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಸೂಚಿಸಿದರು.

ಅವರು ಕೆ.ಆರ್.ಪೇಟೆ ಪಟ್ಟಣದಲ್ಲಿ ಮಿಂಚಿನ ಸಂಚಾರ ನಡೆಸಿ, ಅವ್ಯವಸ್ಥೆಗಳ ಅವಲೋಕನ ನಡೆಸಿ ಸಾರ್ವಜನಿಕರಿಂದ ಕುಂದುಕೊರತೆಗಳನ್ನು ಆಲಿಸಿ ಮಾತನಾಡಿದರು. ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣವನ್ನು ಕಂಡು ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಅವರು, ಕೆ.ಆರ್.ಪೇಟೆ ಪಟ್ಟಣದಲ್ಲಿ ಶುಚಿತ್ವ ಕಾಪಾಡದ ಪುರಸಭೆಯ ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡು ಕೂಡಲೇ ಪಟ್ಟಣದ ಸ್ವಚ್ಛತೆಗೆ ಪ್ರಥಮ ಆದ್ಯತೆ ನೀಡಬೇಕು ಎಂದು ನಿರ್ದೇಶನ ನೀಡಿದರು.

ಕೆ.ಆರ್.ಪೇಟೆಯಿಂದ ಮೈಸೂರು ನಗರಕ್ಕೆ ಬೆಳಿಗ್ಗೆ ಹಾಗೂ ಸಂಜೆ ಸಮಯದಲ್ಲಿ ಪ್ರಯಾಣಿಕರು ಸಂಚರಿಸಲು ಇರುವ ಬಸ್ಸುಗಳ ಬಗ್ಗೆ ಹಲವಾರು ಸಾರ್ವಜನಿಕರು ಲೋಕಾಯುಕ್ತರ ಗಮನ ಸೆಳೆದು ಬಸ್ ವ್ಯವಸ್ಥೆ ಮಾಡಿಸಿಕೊಡುವಂತೆ ಅಲವತ್ತುಕೊಂಡರು. ಬಸ್ ನಿಲ್ದಾಣದಲ್ಲಿ ಅಶುಚಿತ್ವ ತುಂಬಿ ತುಳುಕುತ್ತಿರುವ ಬಗ್ಗೆ ವಿಭಾಗೀಯ ಸಾರಿಗೆ ಅಧಿಕಾರಿ ರವಿ ಅವರನ್ನು ತರಾಟೆಗೆ ತೆಗೆದುಕೊಂಡರು. ಮೀನಿನ ಮಾರುಕಟ್ಟೆಯ ತ್ಯಾಜ್ಯ ನೀರು ಸೇರಿದಂತೆ ಪಟ್ಟಣದ ಒಳಚರಂಡಿಯ ತ್ಯಾಜ್ಯ ನೀರು ಚನ್ನಪ್ಪನಕಟ್ಟೆಯ ನೀರಿನ ಮೂಲಕ ಹೊಸಹೊಳಲು ಕೆರೆ ಹಾಗೂ ಪಟ್ಟಣದ ದೇವಿರಮ್ಮಣ್ಣಿ ಕೆರೆಗೆ ಸೇರುತ್ತಿರುವ ಬಗ್ಗೆ ಪಟ್ಟಣದ ನಿವಾಸಿಗಳು ದೂರು ನೀಡಿದ ಹಿನ್ನೆಲೆಯಲ್ಲಿ ಪುರಸಭೆಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ಮಲಿನ ನೀರು ಕೆರೆಗೆ ಹೋಗದಂತೆ ನೋಡಿಕೊಳ್ಳಬೇಕು ಎಂದು ಆದೇಶ ನೀಡಿದರು.

ಬಸ್ ನಿಲ್ದಾಣದ ಸ್ವಚ್ಛತೆ ಕಾಪಾಡದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸುಮೋಟೋ ಕೇಸ್ ದಾಖಲಿಸುವುದಾಗಿ ಪತ್ರಕರ್ತರಿಗೆ ತಿಳಿಸಿದರು.

ಕೆ.ಆರ್.ಪೇಟೆ ಪಟ್ಟಣದ ದುಂಡಶೆಟ್ಟಿ ಲಕ್ಷ್ಮಮ್ಮ ಸ್ಮಾರಕ ಸಾರ್ವಜನಿಕ ಆಸ್ಪತ್ರೆ, ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣ, ಸಾರ್ವಜನಿಕ ಶೌಚಾಲಯ, ಪುರಸಭೆ ವ್ಯಾಪ್ತಿಯ ವಿವಿಧ ಬಡಾವಣೆಗಳು ಸೇರಿದಂತೆ ಮೀನಿನ ಮಾರುಕಟ್ಟೆಗೆ ಭೇಟಿ ನೀಡಿ ಅಶುಚಿತ್ವ ತಾಂಡವವಾಡುತ್ತಿರುವುದನ್ನು ಕಣ್ಣಾರೆ ಕಂಡು ಪುರಸಭೆಯ ಅಧಿಕಾರಿಗಳು ಏನು ಮಾಡುತ್ತಿದ್ದೀರಿ, ತಮ್ಮ ಕರ್ತವ್ಯಲೋಪ ಇಲ್ಲಿ ಎದ್ದು ಕಾಣುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ತಮ್ಮ ಕೆ.ಆರ್.ಪೇಟೆ ಪಟ್ಟಣದ ಭೇಟಿಯ ಸಮಯದಲ್ಲಿ ಸಾರ್ವಜನಿಕರು ನೀಡಿದ ದೂರುಗಳು ಹಾಗೂ ಸಾರ್ವಜನಿಕ ಕುಂದುಕೊರತೆಗಳ ಬಗ್ಗೆ ವಿವರವಾದ ವರದಿಯನ್ನು ಕಳುಹಿಸಿಕೊಡುವಂತೆ ಸ್ಥಳದಲ್ಲಿದ್ದ ತಹಶೀಲ್ದಾರ್ ಲೆಫ್ಟಿನೆಂಟ್ ಜನರಲ್ ಡಾ.ಅಶೋಕ್ ಅವರಿಗೆ ನಿರ್ದೇಶನ ನೀಡಿದರು.

ಲೋಕಾಯುಕ್ತ ನಗರ ಸಂಚಾರದ ಸಂದರ್ಭದಲ್ಲಿ ಲೋಕಾಯುಕ್ತ ಇನ್ಸ್‌ಪೆಕ್ಟರ್ ಬಿ.ಪಿ.ಬ್ಯಾಟರಾಯಗೌಡ, ಪಾಂಡವಪುರ ಉಪವಿಭಾಗಾಧಿಕಾರಿ ಕೆಆರ್.ಶ್ರೀನಿವಾಸ್, ತಹಸೀಲ್ದಾರ್ ಡಾ.ಅಶೋಕ್, ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಮಂಜುನಾಥ್, ಪುರಸಭೆಯ ಮುಖ್ಯಾಧಿಕಾರಿ ನಟರಾಜ್, ತಾಪಂ ಕಾರ್ಯ ನಿರ್ವಾಹಕ ಅಧಿಕಾರಿ ಕೆ.ಸುಷ್ಮಾ, ತಾ.ಪಂ.ಸಹಾಯಕ ನಿರ್ದೇಶಕ ಡಾ.ನರಸಿಂಹರಾಜು, ಪೊಲೀಸ್ ಇನ್ಸ್‌ಪೆಕ್ಟರ್ ಆನಂದೇಗೌಡ, ನವೀನ್, ಕಸಬಾ ರಾಜಸ್ವ ನಿರೀಕ್ಷಕ ಜ್ಞಾನೇಶ್, ಗ್ರಾಮ ಆಡಳಿತಾಧಿಕಾರಿ ಜಗದೀಶ್, ಪಟ್ಟಣದ ಆಸರೆ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಹೆಚ್.ಬಿ.ಮಂಜುನಾಥ್ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಹೊನಗಾನಹಳ್ಳಿ ಗ್ರಾಪಂ ಉಪಾಧ್ಯಕ್ಷರ ಆಯ್ಕೆ



ಉಪಾಧ್ಯಕ್ಷರಾಗಿ ಗೆಲುವು ಸಾಧಿಸಿದ ಎ.ಟಿ.ಮಂಜು ಅವರನ್ನು ಅಭಿನಂದಿಸಲಾಯಿತು.

ಚಿನಕುರಳಿ, ಮೇ 19– ಹೊನಗಾನಹಳ್ಳಿ ಗ್ರಾಪಂ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಎ.ಟಿ.ಮಂಜು ಅವರು ಗೆಲುವು ಸಾಧಿಸುವ ಮೂಲಕ ಆಯ್ಕೆಯಾದರು.

17 ಮಂದಿ ಸದಸ್ಯರ ಸಂಖ್ಯಾಬಲ ಹೊಂದಿರುವ ಗ್ರಾಪಂನ ಹಿಂದಿನ ಉಪಾಧ್ಯಕ್ಷ ಕೆ.ಎಸ್.ರವಿ ಅವರ ರಾಜೀನಾಮೆಯಿಂದ ತೆರವಾದ ಉಪಾಧ್ಯಕ್ಷ ಸ್ಥಾನಕ್ಕೆ ಸೋಮವಾರ ಚುನಾವಣೆ ನಿಗದಿಯಾಗಿತ್ತು. ಉಪಾಧ್ಯಕ್ಷ ಸ್ಥಾನಕ್ಕೆ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಎ.ಟಿ.ಮಂಜು ಹಾಗೂ ರೈತಸಂಘ–ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ರಮೇಶ್ ನಾಮಪತ್ರ ಸಲ್ಲಿಸಿದರು.

ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಎ.ಟಿ.ಮಂಜು ಅವರಿಗೆ 10 ಹಾಗೂ ರೈತ ಸಂಘ–ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ರಮೇಶ್–6 ಮತಗಳನ್ನು ಪಡೆದರು. 4 ಮತಗಳ ಅಂತರದಿಂದ ಜೆಡಿಎಸ್‌ನ ಎ.ಟಿ.ಮಂಜು ಅವರು ಗೆಲುವು ಸಾಧಿಸಿ ಗ್ರಾಪಂ ನೂತನ ಉಪಾಧ್ಯಕ್ಷರಾಗಿ ಆಯ್ಕೆಯಾದರು.

ಎ.ಟಿ.ಮಂಜು ಅವರು ಉಪಾಧ್ಯಕ್ಷರಾಗಿ ಆಯ್ಕೆಯಾಗುತ್ತಿದ್ದಂತೆಯೇ ಹೊರಗಡೆ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿಹಂಚಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷೆ ಪುಟ್ಟಲಿಂಗಮ್ಮ, ಸದಸ್ಯರಾದ ಚಂದ್ರಶೇಖರಯ್ಯ, ರತ್ನಮ್ಮ, ಸಿದ್ದರಾಜು, ಕೆ.ಎಸ್. ರವಿ, ಮಹದೇವಸ್ವಾಮಿ, ಬಿ.ಎಸ್.ಶಿವಣ್ಣ, ಮಂಗಳಮ್ಮ, ಶಾಂತಮ್ಮ, ಶಂಕರ, ಛಾಯ, ಜವರಯ್ಯ, ಇಂದ್ರ, ಎಸ್.ದಿವ್ಯ, ಭಾಗ್ಯಲಕ್ಷ್ಮಿ, ಮುಖಂಡರಾದ ಅಲ್ಲಳ್ಳಿ ಗೋವಿಂದಯ್ಯ, ಗ್ರಾಪಂ ಮಾಜಿ ಅಧ್ಯಕ್ಷ ಶಿಂಢಭೋಗನಹಳ್ಳಿ ನಾಗಣ್ಣ, ಸ್ವಾಮೀಗೌಡ, ಮಹದೇವಪ್ಪ, ಗಣೇಶ್, ನಾಗರಾಜು, ಯೋಗೇಶ್, ನಾಗೇಶ್, ಬಿ.ಸಿ.ತಮ್ಮಯ್ಯ, ಶಿವಸ್ವಾಮಿ ಸೇರಿದಂತೆ ಹಲವರು ಹಾಜರಿದ್ದರು.

ರಾಜ್ಯದಲ್ಲಿ ಬದಲಾವಣೆಗಾಗಿ ಹೊಸ ಪ್ರಾದೇಶಿಕ ಪಕ್ಷ ಸ್ಥಾಪನೆ

ಕೇಂದ್ರ ಮಾಜಿ ಸಚಿವ ಸಿ.ಎಂ.ಇಬ್ರಾಹಿಂ ಸುಳಿವು



ಸ್ವಾಭಿಮಾನಿ ಸ್ವಾವಲಂಬಿ ನವಕರ್ನಾಟಕ ನಿರ್ಮಾಣ ಆಂದೋಲನ ಆಯೋಜಿಸಿದ್ದ ಜನತೆಯ ನಡುವೆ ಜನತಾ ಪ್ರಣಾಳಿಕೆಯ ಚರ್ಚೆ ಸಮಾರಂಭವನ್ನು ಉದ್ಘಾಟಿಸುತ್ತಿರುವ ಗಣ್ಯರು

ಮಂಡ್ಯ,ಮೇ 19– ರಾಜ್ಯದಲ್ಲಿ ಹೊಸ ಬದಲಾವಣೆಗಾಗಿ ಪ್ರಾದೇಶಿಕ ಪಕ್ಷವೊಂದು ಸ್ಥಾಪನೆಯಾಗಲಿದೆ ಎಂದು ಕೇಂದ್ರದ ಮಾಜಿ ಸಚಿವ ಸಿ.ಎಂ.ಇಬ್ರಾಹಿಂ ಹೇಳಿದರು.

ನಗರದಲ್ಲಿರುವ ಕರ್ನಾಟಕ ಸಂಘದ ಕೆವಿಎಸ್‌ಎಸ್ ಭವನದಲ್ಲಿ ಸ್ವಾಭಿಮಾನಿ ಸ್ವಾವಲಂಬಿ ನವಕರ್ನಾಟಕ ನಿರ್ಮಾಣ ಆಂದೋಲನ ಮಂಡ್ಯ ಜಿಲ್ಲೆ ಸೋಮವಾರ ಆಯೋಜಿಸಿದ್ದ "ಜನತೆಯ ನಡುವೆ ಜನತಾ ಪ್ರಣಾಳಿಕೆಯ ಚರ್ಚೆ" ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಧರ್ಮ ಮತ್ತು ಜಾತಿಯ ಹೆಸರಿನಲ್ಲಿ ರಾಜಕೀಯ–ಅಧಿಕಾರ, ಸ್ಥಾನಮಾನಗಳು ಲಭ್ಯವಾಗುತ್ತಿವೆ, ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರ ಆಶಯಗಳ ಈಡೇರಿಕೆಗಾಗಿ ಮತ್ತು ರಾಜ್ಯದಲ್ಲಿ ಹೊಸ ಬದಲಾವಣೆಗಾಗಿ ಪ್ರಾದೇಶಿಕ ಪಕ್ಷವೊಂದು ಸ್ಥಾಪನೆಯಾಗಲಿದೆ ಎಂದು ನುಡಿದರು.

ರಾಜ್ಯದಲ್ಲಿ 2 ಲಕ್ಷ ಉದ್ಯೋಗಗಳು ಖಾಲಿ ಬಿದ್ದಿವೆ, ಸರ್ಕಾರಗಳು ಭರ್ತಿ ಮಾಡಿಕೊಳ್ಳುತ್ತಿಲ್ಲ, ನಿರುದ್ಯೋಗಿಗಳು ಏನು ಆಗಬೇಕು, ಮಹಿಳೆಯರಿಗೆ 2 ಸಾವಿರ ಹಣ ನೀಡುವ ಬದಲು ಸ್ತ್ರೀಶಕ್ತಿ ಗುಂಪುಗಳಿಗೆ ತಲಾ 10 ಕೋಟಿ ರೂ. ಹಣ ನೀಡಿ, ಉದ್ಯೋಗ–ಉದ್ಯಮ ಸೃಷ್ಟಿಯಾಗುತ್ತವೆ ಎಂದು ಸಲಹೆ ನೀಡಿದರು.

ಬಳಿಕ ಮಾತನಾಡಿದ ಕದಂಸ ಸಮಿತಿ ರಾಜ್ಯಾಧ್ಯಕ್ಷ ವೆಂಕಟಗಿರಿಯಯ್ಯ, ರಾಜ್ಯ ಸರ್ಕಾರ ನೀಡುತ್ತಿರುವ 5 ಗ್ಯಾರಂಟಿಗಳು ಶಾಶ್ವತ ಅಲ್ಲ, ಅದರ ಬದಲು ಭೂ ರಹಿತ ಕುಟುಂಬಕ್ಕೆ ತಲಾ 2 ಎಕರೆ ಭೂಮಿ ನೀಡಲಿ, ರೈತರೇ ಅಕ್ಕಿ–ರಾಗಿ ನೀಡುತ್ತಾರೆ, ಇಂತಹ ಎದೆಗಾರಿಕೆ ತೋರುವ ಧೈರ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಇಲ್ಲ ಎಂದು ಛೇಡಿಸಿದರು.

ಇಂದಿನ ದಿನಗಳಲ್ಲಿ ಜನತೆ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳನ್ನು ತಿರಸ್ಕರಿಸಿ, ಹೊಸ ಬದಲಾವಣೆ ತರುವ ನಿಟ್ಟಿನಲ್ಲಿ ಹೊಸ ಪ್ರಾದೇಶಿಕ ಪಕ್ಷಕ್ಕೆ ಶಕ್ತಿ ತುಂಬುವ ಸಂಕಲ್ಪ ಮಾಡಬೇಕು, ಜನತಾ ಪ್ರಣಾಳಿಕೆಯ ಚರ್ಚೆ ರಾಜ್ಯಾದ್ಯಂತ ನಡೆಯಲಿದೆ ಎಂದು ತಿಳಿಸಿದರು.

ನಂತರ ಮಾತನಾಡಿದ ರಾಜ್ಯ ರೈತಸಂಘದ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, 2028ಕ್ಕೆ ಹೊಸ ಪ್ರಾದೇಶಿಕ ಪಕ್ಷ ಅಧಿಕಾರ ಹಿಡಿಯುವ ಸಾಮರ್ಥ್ಯಕ್ಕೆ ಜನತೆ ಬಂಬಲ ನೀಡಬೇಕು, ಕಾಂಗ್ರೆಸ್, ಜೆಡಿಎಸ್, ಬಿಜೆಪಿ ತೊಲಗಿಸಿ, ನಾವು ನೀವು ಅಧಿಕಾರ ಹಿಡಿಯಬೇಕಿದೆ ಎಂದರು.

ಸಮಾರಂಭದಲ್ಲಿ ಎಐಐಎಸ್‌ಪಿ ರಾಷ್ಟ್ರೀಯ ಸಂಯೋಜಕ ಎಂ.ಗೋಪಿನಾಥ್, ಜಿಲ್ಲಾಧ್ಯಕ್ಷ ಕೆ.ಎಂ.ಅನಿಲ್‌ಕುಮಾರ್, ಉಪಾಧ್ಯಕ್ಷ ಬಿ.ಆನಂದ್ ಮದ್ದೂರು, ಮಹಿಳಾ ಘಟಕ ಅಧ್ಯಕ್ಷೆ ಸಿಶ್ಮಿತಾ, ದಸಂಸ ಮುಖಂಡ ಬ್ಯಾಡರಹಳ್ಳಿ ಪ್ರಕಾಶ್, ಆರ್‌ಪಿಐ ರಾಷ್ಟ್ರೀಯ ಅಧ್ಯಕ್ಷ ಎನ್.ಮೂರ್ತಿ, ರಾಜ್ಯಾಧ್ಯಕ್ಷ ಮೋಹನ್ ರಾಜ್, ಶ್ರೀನಿವಾಸ್ ಮತ್ತಿತರರಿದ್ದರು.

ಅನ್ನದಾನಿ ಅವಧಿಯಲ್ಲಿ ಅಭಿವೃದ್ಧಿ ಶೂನ್ಯ ಆರೋಪ ನಿರಾಧಾರ

ಕಾಂಗ್ರೆಸ್‌ಗೆ ಜೆಡಿಎಸ್ ಮುಖಂಡರ ತಿರುಗೇಟು



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಎಸ್ಸಿ, ಎಸ್ಟಿ ಘಟಕದ ಅಧ್ಯಕ್ಷ ಕಾಂತರಾಜು.

ಮಂಡ್ಯ, ಮೇ 19– ಮಾಜಿ ಶಾಸಕ ಅನ್ನದಾನಿಯವರು 2 ಬಾರಿ ಶಾಸಕರಾಗಿದ್ದ ಸಂದರ್ಭದಲ್ಲಿ ನಾಲ್ಕು ಸಾವಿರ ಕೋಟಿಗೂ ಮಿಗಿಲಾದ ಅನುದಾನದಲ್ಲಿ ತಾಲೂಕಿನ ಅಭಿವೃದ್ಧಿಗೆ ಶ್ರಮಿಸಿದ್ದು, ಅಭಿವೃದ್ಧಿ ಶೂನ್ಯವೆಂಬ ಕಾಂಗ್ರೆಸ್ ಮುಖಂಡರ ಆರೋಪ ಸತ್ಯಕ್ಕೆ ದೂರವಾಗಿದೆ ಎಂದು ಮಳವಳ್ಳಿ ತಾಲೂಕಿನ ಜೆಡಿಎಸ್ ಮುಖಂಡರು ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜೆಡಿಎಸ್ ಎಸ್ಸಿ ಎಸ್ಟಿ ಘಟಕದ ಅಧ್ಯಕ್ಷ ಕಾಂತರಾಜು, ಶಾಸಕ ನರೇಂದ್ರಸ್ವಾಮಿ ಅವರು ತಾವೊಬ್ಬರೇ ಅಭಿವೃದ್ಧಿಯ ಹರಿಕಾರರೆಂದು ಹೇಳಿಕೊಳ್ಳುತ್ತಾರೆ. ಪ್ರತಿಯೊಬ್ಬ ಶಾಸಕರು ತಮ್ಮ ಅಧಿಕಾರಾವಧಿಯಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುವ ಇಚ್ಛಾಶಕ್ತಿ ಹೊಂದಿರುತ್ತಾರೆ, ಇದನ್ನು ಶಾಸಕರು ಅರಿಯಬೇಕೆಂದರು.

ಮಳವಳ್ಳಿ ಪಟ್ಟಣದಲ್ಲಿ ಅಂಬೇಡ್ಕರ್ ಪ್ರತಿಮೆ ಅನಾವರಣ, ಕನಕಭವನ, ಬಸವ ಭವನ ಹಾಗೂ ಬಾಬು ಜಗಜೀವನ ರಾಂ ಭವನಗಳ ನಿರ್ಮಾಣಕ್ಕೆ ಚಾಲನೆ ನೀಡಲಾಗಿದ್ದು, ಹಾಲಿ ಶಾಸಕರು ಇಚ್ಛಾಶಕ್ತಿ ಮೆರೆದು ಅಪೂರ್ಣಗೊಂಡಿರುವ ಭವನಗಳನ್ನು ಪೂರ್ಣಗೊಳಿಸಬೇಕೆಂದು ಆಗ್ರಹಿಸಿದರು.

ಶಾಸಕ ನರೇಂದ್ರಸ್ವಾಮಿ ಅವರು ಎಸ್ಸಿ, ಎಸ್ಟಿ ಸದನ ಸಮಿತಿಯ ಅಧ್ಯಕ್ಷರಾಗಿದ್ದು ಮೈಸೂರು ತಾಲೂಕಿನ ವಾಜಮಂಗಲದಲ್ಲಿ ಅಂಬೇಡ್ಕರ್ ಫಲಕಕ್ಕೆ ಅವಮಾನವೆಸಗಿರುವ ದುಷ್ಕರ್ಮಿಗಳ ಬಗ್ಗೆ ಚಕಾರವೆತ್ತದೇ ಮೌನವಾಗಿರುವ ಗುಟ್ಟೇನು ಎಂದು ಪ್ರಶ್ನಿಸಿದರು.

ಮುಖಂಡ ಸದಾನಂದ ಮಾತನಾಡಿ, ಬಿ.ಜಿ.ಪುರ ಬರಡು ಭೂಮಿಯಾಗಿತ್ತು. ಆ ಪ್ರದೇಶಕ್ಕೆ ನಾನು ನೀರಾವರಿ ಯೋಜನೆಯನ್ನು ಸಾಕಾರಗೊಳಿಸಿದ್ದೇನೆಂದು ಶಾಸಕ ನರೇಂದ್ರಸ್ವಾಮಿ ಹೇಳಿಕೊಳ್ಳುತ್ತಾರೆ. ಆ ಭಾಗದ ರೈತರಾದ ನಾವು ಈಗಾಗಲೇ ಹನಿ ನೀರಾವರಿ ಯೋಜನೆಗೆ ಒಗ್ಗಿಕೊಂಡಿದ್ದು, ಕುಸಿದಿರುವ ತರಕಾರಿ ಬೆಳೆಗೆ ಸೂಕ್ತ ಬೆಲೆ ಕೊಡಿಸಲು ಶಾಸಕರು ಮುಂದಾಗಲಿ ಎಂದರು.

ಮಾಜಿ ಶಾಸಕ ಅನ್ನದಾನಿ ಅವರ ಕಾಲದಲ್ಲಿ ದೊಡ್ಡಭೂವಳ್ಳಿ ಗ್ರಾಮದಲ್ಲಿ ಆರಂಭವಾಗಿರುವ ಆಸ್ಪತ್ರೆ, ಆ ಭಾಗದ ಜನ ಸಾಮಾನ್ಯರಿಗೆ ಉತ್ತಮ ಚಿಕಿತ್ಸೆ ನೀಡುತ್ತಿರುವುದು ಕಾಂಗ್ರೆಸ್ಸಿಗರಿಗೆ ತಿಳಿದಿಲ್ಲವೇ ಎಂದು ಪ್ರಶ್ನಿಸಿದರು.

ಯುವ ಘಟಕದ ಅಧ್ಯಕ್ಷ ಶ್ರೀಧರ್ ಮಾತನಾಡಿದರು. ಗೋಷ್ಠಿಯಲ್ಲಿ ಜಿಲ್ಲಾ ಎಸ್ಸಿ,ಎಸ್ಟಿ ಘಟಕದ ಅಧ್ಯಕ್ಷ ಸಾತನೂರು ಜಯರಾಂ, ಕುಂತೂರು ಸೋಮಣ್ಣ ಉಪಸ್ಥಿತರಿದ್ದರು.

ಮೂರನೇ ಪುಟದಿಂದ

ಇನ್ನು ರಾಜ್ಯಕ್ಕೆ ನೀಡುವರೆ...!?

ಕಾಂಗ್ರೆಸ್‌ನವರಿಗೂ ಇದೇ ಗತಿ ಬರುತ್ತದೆ ಎಂದು ಎಚ್ಚರಿಸಿದರು. ನೀರಾವರಿ ಯೋಜನೆಗಳು ಕುಂಟುತ್ತಾ ಸಾಗುತ್ತಿದ್ದು, ಯಾವುದೇ ಅಭಿವೃದ್ಧಿ ಯೋಜನೆಗಳು ಅನುಷ್ಠಾನಗೊಳ್ಳುತ್ತಿಲ್ಲ. ಕಿಕ್ ಬ್ಯಾಕ್ ಪಡೆಯಲು ನೀರಾವರಿ ಇಲಾಖೆ ಇಟ್ಟುಕೊಂಡಿದ್ದಾರಷ್ಟೆ, ಯಾವುದೇ ಮಾನದಂಡವಿಲ್ಲದೆ ಗ್ಯಾರಂಟಿ ಯೋಜನೆಯಲ್ಲಿ ಶ್ರೀಮಂತರಿಗೂ 2 ಸಾವಿರ ರೂಪಾಯಿ ನೀಡುತ್ತಿರುವ ಹುಚ್ಚರ ಸರ್ಕಾರ ಇದು ಎಂದು ಟೀಕಿಸಿದರು.

ಜಾತಿ ಗಣತಿ ವರದಿ ಟೋಪಿ!: ಜಾತಿ ಗಣತಿ ಮುಂದಿಟ್ಟುಕೊಂಡು ಜನರಿಗೆ ಟೋಪಿ ಹಾಕುತ್ತಾ ಬರುತ್ತಿದ್ದಾರೆ. ಈ ಬಗ್ಗೆ ವಿಧಾನಸಭಾ ಅಧಿವೇಶನ ದಲ್ಲಿಯೂ ಉತ್ತರ ನೀಡಲಿಲ್ಲ ಎಂದು ಹೇಳಿದರು. ಪಾಕಿಸ್ತಾನದ ಮೇಲೆ ಭಾರತ ದಾಳಿ ಮಾಡಿದ ಬಗ್ಗೆ ಸಾಕ್ಷ್ಯ ಕೇಳುತ್ತಿರುವ ಕಾಂಗ್ರೆಸ್ ನಾಯಕರ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ವಿಶ್ವನಾಥ್ ಅವರು, ಒಂದು ದಿನ ಸಿದ್ದರಾಮಯ್ಯ ಯುದ್ಧ ಬೇಡವೆಂದರೆ, ಮತ್ತೊಂದು ದಿನ ಯುದ್ಧ ಬೇಕು ಎನ್ನುತ್ತಾರೆ. ಇಲ್ಲಿ ವ್ಯಕ್ತಿಗಿಂತ ದೇಶ ಮುಖ್ಯ ಎಂಬುದನ್ನು ಇವರು ಅರಿಯ ಬೇಕು ಎಂದು ವಿಶ್ವನಾಥ್ ಸಲಹೆ ನೀಡಿದರು.

ಸಿದ್ದರಾಮಯ್ಯ ಕುರುಬ ಸಮು ದಾಯಕ್ಕೂ ಏನು ಮಾಡಿಲ್ಲ. ಎಲ್ಲರನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ. ಗಂಭೀರವಾಗಿ ಆಡಳಿತ ನಡೆಸದೆ ರಾಜ್ಯವನ್ನು ಅಧೋಗತಿಗೆ ತಂದಿಟ್ಟಿದ್ದಾರೆ ಎಂದು ಕಿಡಿಕಾರಿದರು.

ರಾಜ್ಯವನ್ನು ರಿಯಲ್ ಎಸ್ಟೇಟ್ ಕೈಗೆ ಕೊಟ್ಟಿದ್ದಾರೆ: ಗ್ರೇಟರ್ ಬೆಂಗಳೂರು ಮಾಡಿದ್ದು, ನಿವೇಶನಗಳ ಬೆಲೆ ಮೂರು ಪಟ್ಟು ಹೆಚ್ಚಾಗಿದೆ. ಇಡೀ ಕರ್ನಾಟಕವನ್ನು ರಿಯಲ್ ಎಸ್ಟೇಟ್ ಕೈಗೆ ಕೊಟ್ಟಿದ್ದಾರೆ. ಮಂತ್ರಿಗಳು ರಿಯಲ್ ಎಸ್ಟೇಟ್ ಗಿರಾಕಿಗಳಾಗಿದ್ದಾರೆ. ಇಷ್ಟೆಲ್ಲಾ ಲೋಪವಿದ್ದರೂ ಭಾರೀ ಸಾಧನೆ ಮಾಡಿದ್ದೇವೆ ಎಂದು ಸಾಧನಾ ಸಮಾವೇಶ ಮಾಡುತ್ತಿದ್ದಾರೆ ಎಂದು ವಿಶ್ವನಾಥ್ ಆಕ್ರೋಶ ವ್ಯಕ್ತಪಡಿಸಿದರು.

ಹೆಲಿಕಾಪ್ಟರ್‌ನಲ್ಲಿ ಆಕಾಶದಲ್ಲೇ ಹಾರಾಡುತ್ತಾರೆ

ಸರ್ಕಾರದ ಖರ್ಚಿನಲ್ಲಿ ಪ್ರತಿ ದಿನ ಹೆಲಿಕಾಪ್ಟರ್‌ನಲ್ಲೇ ಹಾರಾಟ ಮಾಡುತ್ತಿರುವ ಸಿದ್ದರಾಮಯ್ಯ, ಹೆಲಿಕಾಪ್ಟರ್‌ಗಾಗಿ ಎರಡು ವರ್ಷದಲ್ಲಿ ಎಷ್ಟು ವೆಚ್ಚ ಮಾಡಲಾಗಿದೆ ಎಂಬ ಮಾಹಿತಿಯನ್ನು ರಾಜ್ಯದ ಜನತೆಗೆ ನೀಡಬೇಕು ಎಂದು ವಿಧಾನ ಪರಿಷತ್ ಸದಸ್ಯ ವಿಶ್ವನಾಥ್ ಆಗ್ರಹಿಸಿದರು.

ಬೆಂಗಳೂರಿನಿಂದ ಮೈಸೂರಿಗೆ ಬರಲು ಅಲ್ಲಿನ ಹೆಲಿಪ್ಯಾಡ್‌ಗೆ ಹೋಗಿ ಮೈಸೂರಿನ ವಿಮಾನ ನಿಲ್ದಾಣಕ್ಕೆ ಬರಲು ಮೂರು ಗಂಟೆ ಬೇಕು. ಈಗ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಮೂಲಕ ಮೈಸೂರಿಗೆ ಕೇವಲ ಎರಡು ಗಂಟೆಯೊಳಗೆ ಬರಬಹುದು. ಆದರೆ ವಿಳಂಬವಾದರೂ ಸರಿ ನಾನು ಹೆಲಿಕಾಪ್ಟರ್‌ನಲ್ಲೇ ಬರುತ್ತೇನೆ ಎಂದು ಸಿದ್ದರಾಮಯ್ಯ ಆಕಾಶದಲ್ಲಿ ಹಾರಾಡುತ್ತಿದ್ದಾರೆ ಎಂದು ಟೀಕಿಸಿದರು. ಹೆಲಿಕಾಪ್ಟರ್‌ನಲ್ಲಿ ಮೈಸೂರಿಗೆ ಬರುವ ಸಿದ್ದರಾಮಯ್ಯ ಜನರ ಅಹವಾಲು ಸ್ವೀಕರಿಸುವುದಿಲ್ಲ. ಮುಂಜಾನೆಯಿಂದ ಅರ್ಜಿ ಹಿಡಿದು ಕಾದ ಜನರಿಗೆ ನಿರಾಸೆ. ಹೀಗೆ ಬಂದು ಹಾಗೆ ಹೋಗಲು ಹೆಲಿಕಾಪ್ಟರ್‌ಗೆ ಕೋಟ್ಯಾಂತರ ರೂಪಾಯಿ ವೆಚ್ಚ ಮಾಡಿದ್ದಾರೆ. ಈ ಮೂಲಕ ಜನರ ತೆರಿಗೆ ಹಣವನ್ನು ಸಿದ್ದರಾಮಯ್ಯ ಪೋಲು ಮಾಡುತ್ತಿದ್ದಾರೆ ಎಂದು ವಿಶ್ವನಾಥ್ ಆರೋಪಿಸಿದರು.

ಸಮಾವೇಶದಲ್ಲಿ ಮುಡಾ ಲೂಟಿ ಹೇಳಲಿ: ಸಿದ್ದರಾಮಯ್ಯ ಈಗ ಸಾಧನಾ ಸಮಾವೇಶ ಮಾಡುತ್ತಿದ್ದು, ಮುಡಾದಲ್ಲಿ ತಾವು ಮಾಡಿರುವ ಲೂಟಿ ಎಷ್ಟು, ತಮ್ಮ ಪಟಾಲಂ ಮಾಡಿರುವ ಲೂಟಿ ಎಷ್ಟು ಎಂದು ಸಾಧನಾ ಸಮಾವೇಶದಲ್ಲಿ ಹೇಳಲಿ. ಒಂದು ವೇಳೆ ನೀವು ಹೇಳಲಿಲ್ಲ ಅಂದರೆ ನಾವೇ ಹೇಳುತ್ತೇವೆ ಎಂದು ಎಚ್ಚರಿಸಿದರು. ಸಾಧನಾ ಸಮಾವೇಶದಲ್ಲಿ ಸಿದ್ದರಾಮಯ್ಯ ಸೇರಿದಂತೆ ಅವರ ಸಚಿವ ಸಂಪುಟದ ಎಲ್ಲಾ ಸಚಿವರ ಆಸ್ತಿ ಘೋಷಣೆ ಮಾಡಬೇಕು. ಲೋಕಾಯುಕ್ತಕ್ಕೆ ಸುಳ್ಳು ಲೆಕ್ಕ ಕೊಟ್ಟಂತೆ ಜನರಿಗೆ ಕಳ್ಳ ಲೆಕ್ಕ ನೀಡಬಾರದು ಎಂದು ವಿಶ್ವನಾಥ್ ತಾಕೀತು ಮಾಡಿದರು.

ಮತ್ತೆ 'ನಾಯಕತ್ವ' ಬದಲಾವಣೆ ಹೊಗೆ...!

ನಿರ್ಧಾರಗಳನ್ನು ಕೈಗೊಳ್ಳುವ ಕೇಂದ್ರ ಸಚಿವರು ಮತ್ತು ಬಿಜೆಪಿ ನಾಯಕರನ್ನೂ ಸಾರ್ವಜನಿಕ ಕಾರ್ಯಕ್ರಮ ಹಾಗೂ ರಾಜ್ಯ ಸರ್ಕಾರಿ ಕೆಲಸದ ಹೆಸರಿನಲ್ಲಿ ಭೇಟಿ ಮಾಡಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ರಾಜನಾಥ್ ಸಿಂಗ್ ಅವರೊಂದಿಗೆ ಇತ್ತೀಚೆಗೆ ಪ್ರತ್ಯೇಕವಾಗಿ ಧಾರ್ಮಿಕ ಕಾರ್ಯಕ್ರಮಗಳ ನೆಪದಲ್ಲಿ ಶಿವಕುಮಾರ್ ಒಬ್ಬರೇ ವೇದಿಕೆ ಹಂಚಿಕೊಂಡಿದ್ದರು. ಇತ್ತೀಚೆಗೆ ದೆಹಲಿ ಭೇಟಿ ವೇಳೆ ಸರ್ಕಾರಿ ಕಾರ್ಯಕ್ರಮ ನೆಪದಲ್ಲಿ ಕೇಂದ್ರ ಸಚಿವರಾದ ನಿತಿನ್ ಗಡ್ಕರಿ, ಭೂಪೇಂದ್ರ ಯಾದವ್ ಅವರನ್ನು ಭೇಟಿ ಮಾಡಿದ್ದರು. ಈ ಭೇಟಿ ನಂತರ ರಾಜನಾಥ್ ಸಿಂಗ್ ಅವರನ್ನು ಶಿವಕುಮಾರ್ ಮುಖಾಮುಖಿ ಭೇಟಿ ಮಾಡುವ ಮೂಲಕ ಕಾಂಗ್ರೆಸ್ ವರಿಷ್ಠರಿಗೆ ಪರೋಕ್ಷವಾಗಿ ಎಚ್ಚರಿಕೆ ಸಂದೇಶವನ್ನೂ ನೀಡಿದ್ದಾರೆ.

ಬಿಜೆಪಿಯಲ್ಲಿ ಕೆಲವು ಪ್ರಮುಖ ನಿರ್ಧಾರ ಕೈಗೊಳ್ಳುವಾಗ ಭೂಪೇಂದ್ರ ಯಾದವ್ ಪಾತ್ರ ದೊಡ್ಡದಿರುತ್ತದೆ, ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರಗೃಹ ಸಚಿವರಿಗೆ ಇವರು ತುಂಬಾ ಆಪ್ತರು ಎಂಬುದು ಎಲ್ಲರಿಗೂ ತಿಳಿದ ವಿಚಾರ ಅದೇ ರೀತಿ ಗಡ್ಕರಿ ಹಾಗೂ ರಾಜನಾಥ್ ಸಿಂಗ್ ಬಿಜೆಪಿ ಮತ್ತು ಸರ್ಕಾರದ ಮಟ್ಟದಲ್ಲಿ ರಾಜಕೀಯ ನಿರ್ಧಾರ ಕೈಗೊಳ್ಳುವ ವೇಳೆ ಪ್ರಮುಖ ಪಾತ್ರ ವಹಿಸುತ್ತಾರೆ. ಇವರುಗಳನ್ನೇ ಭೇಟಿ ಮಾಡಿ ಮಾತನಾಡುವ ಮೂಲಕ ಶಿವಕುಮಾರ್, ತಮಗೆ ಮುಖ್ಯಮಂತ್ರಿಗಾದಿ ನೀಡದಿದ್ದರೆ, ಯಾವುದೇ ನಿರ್ಧಾರಕ್ಕೂ ಸಿದ್ಧ ಎಂಬ ಸಂದೇಶವನ್ನು ಕಾಂಗ್ರೆಸ್ ವರಿಷ್ಠರಿಗೆ ರವಾನಿಸಿದ್ದಾರೆ.

ಹೊಸಪೇಟೆಯಲ್ಲಿಂದು ಸಾಧನಾ ಸಮಾವೇಶ



ಸಾವಿರ ಕೋಟಿ ರೂ ನೇರವಾಗಿ ಜಮಾ ಮಾಡಿದೆ. ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಮಾದರಿಯನ್ನು ಕೇಂದ್ರದ ಬಿಜೆಪಿ ಯಥಾವತ್ ನಕಲು ಮಾಡಿದೆ. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧ್ಯಕ್ಷ ಫಿಲೆಮಾನ್ ಯಾಂಗ್ ಕರ್ನಾಟಕ ಕಾಂಗ್ರೆಸ್ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳನ್ನು ಪ್ರಶಂಸಿಸಿದ್ದಾರೆ ಎಂದಿದಾರೆ.

ಉದ್ಯೋಗ ಸೃಷ್ಟಿಯಲ್ಲಿ ದೇಶದಲೇ ಮೊದಲ ಸ್ಥಾನ: ದೇಶದಲ್ಲಿ ಉದ್ಯೋಗ ಸೃಷ್ಟಿಯಲ್ಲಿ ಕರ್ನಾಟಕ ಮುಂಚೂಣಿಯಲ್ಲಿರುವಂತೆ ಕಾಂಗ್ರೆಸ್ ಸರ್ಕಾರ ಮಾಡಿದೆ. 2024ರಲ್ಲಿ ಉದ್ಯೋಗ ವಿಷಯದಲ್ಲಿ ಭಾರತದಲ್ಲಿ ಮುಂಚೂಣಿಯಲ್ಲಿರುವ ಕರ್ನಾಟಕದಲ್ಲಿ ಶೆ. 63.93ರಷ್ಟು ಉದ್ಯೋಗವಕಾಶವನ್ನು ಹೊಂದಿದ್ದು, ಉದ್ಯೋಗ ಪಡೆಯಲು ಅರ್ಹರಾಗಿರುವ ಪದವೀಧರರಲ್ಲಿ 7ನೇ ಸ್ಥಾನದಲ್ಲಿದೆ.

ವಿಶ್ವದ ಅತ್ಯುನ್ನತ ವಿಶ್ವವಿದ್ಯಾಲಯಗಳು, ಆಸ್ಪತ್ರೆಗಳು, ಶೈಕ್ಷಣಿಕ ಸಂಸ್ಥೆಗಳನ್ನು ದೊಡ್ಡಬಳ್ಳಾಪುರ ಮತ್ತು ದಾಬಸ್‌ಪೇಟೆ ಮಧ್ಯೆ 2 ಸಾವಿರ ಎಕರೆ ಪ್ರದೇಶದಲ್ಲಿ 'ಕ್ವಿನ್' ಸಿಟಿಯನ್ನು ಅಂತಾರಾಷ್ಟ್ರೀಯ ಗುಣಮಟ್ಟದ ಮೂಲಸೌಕರ್ಯದೊಂದಿಗೆ ನಿರ್ಮಿಸುತ್ತಿದೆ. ಈ ಯೋಜನೆಯಿಂದ 40 ಸಾವಿರ ಕೋಟಿ ರೂ. ಬಂಡವಾಳ ಹೂಡಿಕೆ ಹಾಗೂ 80 ಸಾವಿರಕ್ಕೂ ಹೆಚ್ಚು ಉದ್ಯೋಗಾವಕಾಶಗಳು ಸೃಷ್ಟಿಯಾಗಲಿದೆ.

ಕಲಬುರಗಿ ಜಿಲ್ಲೆಯಲ್ಲಿ 1 ಸಾವಿರ ಎಕರೆ ಪ್ರದೇಶದಲ್ಲಿ ಪಿಪಿಪಿ ಮಾದರಿಯಲ್ಲಿ ಮೆಗಾ ಜವಳಿ ಪಾರ್ಕ್ ಸ್ಥಾಪಿಸುವ ಯೋಜನೆ ಕೈಗೊಂಡಿರುವ ಕಾಂಗ್ರೆಸ್ ಸರ್ಕಾರ 1 ಲಕ್ಷ ಜನರಿಗೆ ನೇರ ಉದ್ಯೋಗ ಹಾಗೂ 2 ಲಕ್ಷ ಜನರಿಗೆ ಪರೋಕ್ಷ ಉದ್ಯೋಗ ಸೃಷ್ಟಿಸಲು ಪಣತೊಟ್ಟಿದೆ.

ಅನಿಮೇಷನ್, ವಿಶುವಲ್, ಎಫೆಕ್ಟ್, ಗೇಮಿಂಗ್ ಮತ್ತು ಕಾಮಿಕ್ ವಲಯದಲ್ಲಿ 30 ಸಾವಿರ ಉದ್ಯೋಗಗಳನ್ನು ಸೃಷ್ಟಿಸುವ ಗುರಿ ಹೊಂದಿದೆ. ಕಾಂಗ್ರೆಸ್ ಸರ್ಕಾರ 2024–29 ಕೈಗಾರಿಕಾ ನೀತಿ ಪ್ರಾರಂಭಿಸಿದ್ದು, 2029ರ ವೇಳೆಗೆ 20 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಿ 7.5 ಲಕ್ಷ ಕೋಟಿ ರೂ. ಹೂಡಿಕೆಯನ್ನು ಆಕರ್ಷಿಸುವ ಗುರಿಯನ್ನು ಹೊಂದಿದೆ.

ಸ್ಟಾರ್ಟಪ್‌ಗಳಿಗೆ ಅನುದಾನ: ದೇಶದಲ್ಲೇ ಮೊದಲ ಬಾರಿಗೆ ಕಾಂಗ್ರೆಸ್ ಸರ್ಕಾರ 100ಕ್ಕೂ ಹೆಚ್ಚು ಸ್ಟಾರ್ಟಪ್‌ಗಳಿಗೆ ಈಕ್ವಿಟಿಯನ್ನು ತೆಗೆದುಕೊಳ್ಳದೇ ಅನುದಾನ ನೀಡಿದೆ. ಬೆಂಗಳೂರಿನ ಸರ್ಜಾಪುರ ಬಳಿ SWIFT (Startups, Workspaces, Innovation, Finance and Tecnology) ನಗರವನ್ನು 1 ಸಾವಿರ ಎಕರೆ ಪ್ರದೇಶದಲ್ಲಿ ಅಭಿವೃದ್ಧಿಪಡಿಸಿ ಸ್ಟಾರ್ಟ್ ಅಪ್ ವ್ಯವಸ್ಥೆಯನ್ನು ಹೆಚ್ಚಿಸಿ ಟೆಕ್ ಕ್ಯಾಪಿಟಲ್‌ನ ಪ್ರಮುಖ ಕೈಗಾರಿಕಾ ಕೇಂದ್ರಗಳಲ್ಲಿ ಒಂದಾಗಲಿದೆ. ಕಾಂಗ್ರೆಸ್ ಸರ್ಕಾರದ ಎಲಿವೇಟ್ ಪ್ರೋಗ್ರಾಂ ಪರಿಕಲ್ಪನೆಯಿಂದ 980ಕ್ಕೂ ಹೆಚ್ಚು ಸ್ಟಾರ್ಟಪ್‌ಗಳಿಗೆ 224.06 ಕೋಟಿ ರೂ. ಅನುದಾನ ನೀಡಿ ಉತ್ತೇಜನ ನೀಡಲಾಗುತ್ತಿದೆ.

ಬಂಡವಾಳ ಹರಿವು: ಕಳೆದ ಒಂದು ವರ್ಷದಲ್ಲಿ 48 ಲಕ್ಷ ಕೋಟಿ ರೂ. ಹೂಡಿಕೆಗೆ ಅನುಮೋದನೆ ನೀಡಲಾಗಿದೆ. 34,115 ಕೋಟಿ ರೂ. ಮೊತ್ತದ ಬಂಡವಾಳ ಹೂಡಿಕೆಯ 14 ಉದ್ಯಮಗಳ ಸ್ಥಾಪನೆಗೆ ಒತ್ತು ನೀಡಿದ್ದು ಇದರಿಂದ 13,308 ಜನರಿಗೆ ಉದ್ಯೋಗ ದೊರತಿದೆ. ಇನ್ವೆಸ್ಟ್ ಕರ್ನಾಟಕ ಕಾರ್ಯಕ್ರಮದಲ್ಲಿ 10 ಲಕ್ಷ ಕೋಟಿ ರೂ. ಹೂಡಿಕೆಯ ಗುರಿಯನ್ನು ಶೆ.100ರಷ್ಟು ಸಾಧಿಸಿ 10.27 ಲಕ್ಷ ಕೋಟಿ ರೂ. ಹೂಡಿಕೆಯನ್ನು ರಾಜ್ಯಕ್ಕೆ ತರಲಾಗಿದ್ದು ಇದರಿಂದ 6 ಲಕ್ಷ ಉದ್ಯೋಗಗಳು ಸೃಷ್ಟಿಯಾಗಲಿದೆ. ಸೆಮಿ ಕಂಡಕ್ಟರ್ ಉದ್ಯಮದಲ್ಲಿ ಹೂಡಿಕೆಯನ್ನು ಆಕರ್ಷಿಸಲು 714.49 ಕೋಟಿ ರೂ. ವೆಚ್ಚದ 901 ಎಕರೆಯಲ್ಲಿ ನಾಲ್ಕು ಸೆಮಿಕಂಡಕ್ಟರ್‌ಗಳನ್ನು ಅಭಿವೃದ್ಧಿಪಡಿಸಿದೆ. ಕಳೆದೊಂದು ವರ್ಷದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ 6.57 ಬಿಲಿಯನ್ ಡಾಲರ್ ವಿದೇಶ ನೇರ ಬಂಡವಾಳ ರಾಜ್ಯಕ್ಕೆ ಹರಿದುಬಂದಿದ್ದು ಇದು ದೇಶದ ಒಟ್ಟು ಎಫ್‌ಡಿಐ ಒಳಹರಿವಿನಲ್ಲಿ ಕರ್ನಾಟಕವನ್ನು 2ನೇ ಸ್ಥಾನಕ್ಕೆ ತಲುಪಿಸಿದೆ.

ಕೌಶಲ್ಯ ತರಬೇತಿ: ದೊಡ್ಡ ದೊಡ್ಡ ಕಂಪನಿಗಳ ಜೊತೆಗೂಡಿ ಲಕ್ಷ ಯುವ ಜನತೆಗೆ ತರಬೇತಿ ನೀಡಲಾಗುತ್ತಿದೆ. 100 ಕೇಂದ್ರದಲ್ಲಿ 30 ಸಾವಿರ ಮಹಿಳೆಯರಿಗೆ ಉದ್ಯೋಗಾಧಾರಿತ ಕೌಶಲ್ಯ ತರಬೇತಿ ನೀಡಲು ಸ್ವಉದ್ಯೋಗ ಯೋಜನೆ ಜಾರಿ ಮಾಡುವ ಮೂಲಕ ಮಹಿಳೆಯರ ಸಬಲೀಕರಣಕ್ಕೆ ಕಾಂಗ್ರೆಸ್ ಸರ್ಕಾರ ಮುಂದಾಗಿದೆ.

ಬೆಂಗಳೂರಲ್ಲಿ ಅಭಿವೃದ್ಧಿ ಪರ್ವ: ವೇಗವಾಗಿ ಬೆಳೆಯುತ್ತಿರುವ ದೇಶದ ಐಟಿ ಹಬ್ ಆಗಿರುವ ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಕಾಂಗ್ರೆಸ್ ಸರ್ಕಾರ ಹತ್ತು ಹಲವು ಯೋಜನೆಗಳನ್ನು ಜಾರಿಗೆ ತರುತ್ತಿದೆ. ಬ್ರಾಂಡ್ ಬೆಂಗಳೂರು ಯೋಜನೆಗೆ 1580 ಕೋಟಿ ರೂ. ಮೀಸಲಿಡಲಾಗಿದೆ. 14 ಮೇಲ್ಸೇತುವೆ, ಸುರಂಗ ಮಾರ್ಗ, ಎಕನಾಮಿಕ್ ಕಾರಿಡಾರ್ ಸೇರಿದಂತೆ ಸುಮಾರು 1.50 ಲಕ್ಷ ಕೋಟಿ ರೂ. ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿರುವ ವಿಶ್ವದ ಏಕೈಕ ನಗರ ಬೆಂಗಳೂರು. 1800 ಕೋಟಿ ರೂ. ವೆಚ್ಚದಲ್ಲಿ ವೈಟ್ ಟಾಪಿಂಗ್ ಕಾಮಗಾರಿ, 12690 ಕೋಟಿ ರೂ. ವೆಚ್ಚದಲ್ಲಿ ಹೊಸೂರು ರಸ್ತೆ – ಸಿಲ್ಕ್ ಬೋರ್ಡ್ ಜಂಕ್ಷನ್ ಸುರಂಗ ಮಾರ್ಗ, 500 ಕೋಟಿ ರೂ. ವೆಚ್ಚದಲ್ಲಿ 250 ಮೀಟರ್ ಸ್ಕೈಡೆಕ್ ನಿರ್ಮಿಸಲಾಗುತ್ತಿದೆ. ಮಳೆ ಹಾನಿಯನ್ನು ಶಾಶ್ವತವಾಗಿ ತಡೆಯಲು 5 ಸಾವಿರ ಕೋಟಿ ರೂ. ಮೀಸಲಿಡಲಾಗಿದೆ. ನಮ್ಮ ಮೆಟ್ರೋ ಯೋಜನೆಗೆ 2025ನೇ ಬಜೆಟ್‌ನಲ್ಲಿ 2190 ಕೋಟಿ ರೂ. ಅನುದಾನ ನೀಡಲಾಗಿದ್ದರೆ, 2026ಕ್ಕೆ ನಮ್ಮ ಮೆಟ್ರೋ ಹೊಸ 175 ಕಿ.ಮೀ. ವಿಸ್ತರಣೆಯ ಗುರಿ ಹೊಂದಿದೆ. ಬಿಬಿಎಂಪಿಗೆ ಸೇರ್ಪಡೆಗೊಂಡ 110 ಹಳ್ಳಿಗಳ ಕಾವೇರಿ ಕುಡಿಯುವ ನೀರಿನ 5ನೇ ಹಂತದ ಯೋಜನೆಯನ್ನು 4336 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಕೇಂದ್ರ ಸರ್ಕಾರದ ತೆರಿಗೆ ಹಂಚಿಕೆ ಮತ್ತು ಅನುದಾನದ ಅನ್ಯಾಯದ ನಡುವೆಯೂ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ಎರಡು ವರ್ಷದಲ್ಲಿ ಕರ್ನಾಟಕದ ಮಾಡೆಲ್ ಅನ್ನು ರಾಷ್ಟ್ರಕ್ಕೆ ತೋರಿಸಿಕೊಟ್ಟಿದೆವೆ ಎಂದು ದಿನೇಶ್ ಗೂಳಿಗೌಡ ಹೇಳಿದ್ದಾರೆ.

ಪೊಲೀಸರು ಮಫ್ತಿಯಲ್ಲಿ ಗಸ್ತು ಇದ್ದಾರೆ!!

ಅಜಾಗರೂಕತೆಯಡಿ ಪ್ರಕರಣ ದಾಖಲಿಸಿದರೆ ಅವು ಜಾಮೀನು ಅಪರಾಧ (Bailable Offences) ಗಳಾಗುತ್ತವೆ ಎಂದು ತಿಳಿಸಿದ್ದಾರೆ. ಈ ಕಾನೂನಿನಡಿ ಪ್ರಕರಣ ದಾಖಲಾದರೆ ವ್ಹೀಲಿಂಗ್‌ನಂತಹ ಕೆಟ್ಟ ಹಾವಳಿ ಯನ್ನು ನಿಗ್ರಹಿಸಲಾಗದು. ಇದು ಕೇವಲ ವಾಹನ ಚಾಲನೆ ಮಾಡುವವರು ಹಾಗೂ ಹಿಂಬದಿ ಸವಾರರ ಅಪಾಯ ಮಾತ್ರವಲ್ಲದೇ, ಸಾರ್ವಜನಿಕರ ಸುರಕ್ಷತೆಗೂ ಅಪಾಯ ಕಾರಿ ಎಂದು ಅಭಿಪ್ರಾಯಪಟ್ಟಿದ್ದಾರೆ. ಮೋಟಾರು ವಾಹನ ಕಾಯ್ದೆಯಲ್ಲಿ ದ್ವಿಚಕ್ರ ವಾಹನವನ್ನು ಈ ರೀತಿ ಕೇವಲ ಹಿಂದಿನ ಚಕ್ರದಲ್ಲಿ ಓಡಿಸುವುದಕ್ಕೆ ಅವಕಾಶವಿಲ್ಲ. ದಿನೇ ದಿನೆ ವ್ಹೀಲಿಂಗ್‌ನಂತಹ ಪ್ರಕರಣಗಳು ಹೆಚ್ಚಾಗುತ್ತಿದ್ದು, ಅದನ್ನು ನಿಗ್ರಹಿಸಲು ವಿಶೇಷ ಕಾನೂನನ್ನು ಜಾರಿಗೊಳಿಸುವ ಅಗತ್ಯವಿದೆ ಎಂದು ನ್ಯಾಯಮೂರ್ತಿ ಶ್ರೀಶಾನಂದ ಅಭಿಪ್ರಾಯಪಟ್ಟಿದ್ದಾರೆ.

ಲಲಿತಮಹಲ್ ರಸ್ತೆಯಲ್ಲಿ ಮರ ಬಿದ್ದು, ಬೈಕ್ ಜಖಂ

ಸವಾರ ಪಾರು, ಕೆಲಕಾಲ ಟ್ರಾಫಿಕ್ ಜಾಮ್

ಮೈಸೂರು, ಮೇ 19(ಎಂಕೆ)– ಮೈಸೂರಿನ ಲಲಿತಮಹಲ್ ರಸ್ತೆಯಲ್ಲಿ ಬೃಹತ್ ಮರವೊಂದು ಬುಡಸಮೇತ ಧರೆಗುರುಳಿದ್ದು, ಬೈಕ್ ಜಖಂಗೊಂಡಿರುವ ಘಟನೆ ಸೋಮವಾರ ರಾತ್ರಿ ನಡೆದಿದೆ. ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ.



ಕಳೆದ ಎರಡ್ಮೂರು ದಿನಗಳಿಂದ ಮೈಸೂರಿನಲ್ಲಿ ನಿರಂತರ ಮಳೆಯಾಗುತ್ತಿರುವ ಹಿನ್ನಲೆ ಮಣ್ಣಿನ ತೇವಾಂಶ ಹೆಚ್ಚಾಗಿದ್ದು, ಸೋಮವಾರ ರಾತ್ರಿ 11.30ರ ಸುಮಾರಿಗೆ ಬೀಸಿದ ಗಾಳಿಗೆ ಬೃಹತ್ ಗುಲ್ಮೊಹರ್ ಮರ ಬುಡಸಮೇತ ನೆಲಕ್ಕುರುಳಿದೆ. ಅದೇ ವೇಳೆ ಬರುತ್ತಿದ್ದ ಬೈಕ್ ಮೇಲೆ ಮರ ಬಿದ್ದಿದ್ದು, ಕ್ಷಣಾರ್ಧದಲ್ಲಿಯೇ ಬೈಕ್ ಸವಾರ ಜಿಗಿದು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ರಸ್ತೆ ಮಧ್ಯದಲ್ಲಿ ಮರ ಬಿದ್ದಿದ್ದರಿಂದ ಅರ್ಧ ಗಂಟೆಗೂ ಹೆಚ್ಚು ಕಾಲ ಸಂಚಾರಕ್ಕೆ ತೊಂದರೆ ಉಂಟಾಯಿತು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಗರಪಾಲಿಕೆ ಅಭಯ ತಂಡ–3ರ ಅವಿನಾಶ್, ನಾಗೇಂದ್ರ, ಪ್ರವೀಣ್, ದೀಪಕ್ ನೆಲಕ್ಕುರುಳಿದ್ದ ಮರವನ್ನು ತೆರವುಗೊಳಿಸಿ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಯಾವ ಪುರುಷಾರ್ಥಕ್ಕೆ ಸಾಧನಾ ಸಮಾವೇಶ



ಬೆಂಗಳೂರು, ಮೇ 19(ಕೆಎಂಶಿ)– ಯಾವ ಪುರುಷಾರ್ಥಕ್ಕೆ ಸಾಧನಾ ಸಮಾವೇಶ ಮಾಡುತ್ತಿದ್ದೀರಿ ಮುಖ್ಯಮಂತ್ರಿಗಳೇ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಶ್ನಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರದ ಎರಡು ವರ್ಷಗಳ ಸಾಧನಾ ಸಮಾವೇಶವನ್ನು ಮುಖ್ಯಮಂತ್ರಿಗಳು ನಾಳೆ ಆಚರಿಸುತ್ತಿದ್ದು, ಜನಸಾಮಾನ್ಯರು ಬಳಸುವ ಸಾಮಗ್ರಿಗಳ ಬೆಲೆ ಏರಿಕೆ, ನಿರಂತರ ಭ್ರಷ್ಟಾಚಾರ, ಹಿಂದೂ ಕಾರ್ಯಕರ್ತರ ಸತತ ಹತ್ಯೆ ಹಿನ್ನೆಲೆಯಲ್ಲಿ ಯಾವ ಪುರುಷಾರ್ಥಕ್ಕಾಗಿ ಈ ಆಚರಣೆ ಎಂದರು. ಕಾಂಗ್ರೆಸ್ ಸರ್ಕಾರ ರೈತರಿಗೆ ಯಾವುದೇ ಹೊಸ ಯೋಜನೆ ನೀಡಲು ಸಾಧ್ಯವಾಗಿಲ್ಲ, ಮಹಿಳೆಯರಿಗೆ ಯಾವುದೇ ಅಭಿವೃದ್ಧಿ ಯೋಜನೆ ಪ್ರಕಟಿಸಿಲ್ಲ, ಯುವಜನರಿಗೆ ಉದ್ಯೋಗ ಸೃಷ್ಟಿಸಿ ಸ್ವಾಭಿಮಾನದ ಬದುಕು ನೀಡಿಲ್ಲ.

ಗ್ರೇಟರ್ ಬೆಂಗಳೂರು ಭಾರೀ ಮಳೆಯಿಂದ 'ವಾಟರ್ ಬೆಂಗಳೂರು' ಆಗಿದೆ, ಸ್ವಲ್ಪ ಮಳೆ ಬಂದರೂ ಮಹಾನಗರ ನೀರಿನಲ್ಲಿ ಮುಳುಗುತ್ತದೆ, ಬೆಂಗಳೂರು ನಗರಾಭಿವೃದ್ಧಿ ಖಾತೆ ಹೊಂದಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೊಡ್ಡ ದೊಡ್ಡ ಯೋಜನೆಗಳ ಬಗ್ಗೆ ಮಾತನಾಡುತ್ತಾರೆ. ನಗರ ವ್ಯಾಪ್ತಿಯಲ್ಲಿ ಸಕಾಲಕ್ಕೆ ಮೆಟ್ರೊ ಕಾಮಗಾರಿ ನಡೆಯುತ್ತಿಲ್ಲ, ಆದರೆ ತುಮಕೂರಿಗೆ ಮೆಟ್ರೊ ಓಡಿಸುತ್ತೇವೆ ಎನ್ನುತ್ತಾರೆ ಎಂದು ವ್ಯಂಗ್ಯವಾಡಿದ್ದಾರೆ.

ಸರ್ಕಾರದಿಂದ ಜನರಿಗೆ 'ಭೂ ಗ್ಯಾರಂಟಿ'

ಹಿಂದುಳಿದವರು ಹಾಗೂ ಭೂರಹಿತವಾಗಿರುವವರು ಕಳೆದ ಹಲವು ವರ್ಷಗಳಿಂದ ದಾಖಲೆ ಇಲ್ಲದೆ ಮನೆ ಕಟ್ಟಿಕೊಂಡು ಪರದಾಡುತ್ತಿದ್ದರು. ಹೀಗಾಗಿ ನಮ್ಮ ಸರ್ಕಾರ ಇದಕ್ಕೆ ಪರಿಹಾರ ನೀಡಿದೆ ಎಂದರು.

1.11 ಕೋಟಿ ಆಸ್ತಿ ದಾಖಲೆ ಸಿದ್ಧ: ಬಿಜೆಪಿ ಸರ್ಕಾರ ಕಲಬುರ್ಗಿಯಲ್ಲಿ 20 ಕೋಟಿ ಖರ್ಚು ಮಾಡಿ ದಾಖಲೆ ನೀಡುತ್ತೇವೆ ಎಂದು ಕಾರ್ಯಕ್ರಮ ಮಾಡಿತ್ತಾದರೂ ಇದನ್ನು ಕಾರ್ಯರೂಪಕ್ಕೆ ಹೇಗೆ ತರಬೇಕು ಎಂದು ತಿಳಿಯದೇ ಯೋಜನೆ ಕೈಬಿಟ್ಟಿತ್ತು. ಆದರೆ, ಕಂದಾಯ ಸಚಿವ ಕೃಷ್ಣ ಬೈರೇಗೌಡರು ಹಾಗೂ ಅವರ ಅಧಿಕಾರಿಗಳ ತಂಡ ಅಧ್ಯಯನ ಮಾಡಿ ಇದಕ್ಕೆ ಶಾಶ್ವತ ಪರಿಹಾರ ನೀಡಿದ್ದಾರೆ. 4 ಸಾವಿರ ಚದುರ ಅಡಿವರೆಗಿನ ಕಂದಾಯ ಅಥವಾ ಖಾಸಗಿ ಭೂಮಿಯಲ್ಲಿ ಅನೇಕ ವರ್ಷಗಳಿಂದ ವಾಸವಿರುವ ಜಾಗವನ್ನು ಸರ್ಕಾರದ ವಶಕ್ಕೆ ಪಡೆದು, ತಹಶೀಲ್ದಾರ್ ಅದರ ಮಾಲೀಕತ್ವರಾಗಿ, ನಂತರ ಅವರ ಮೂಲಕ ಉಪ ನೋಂದಣಿ ಕಚೇರಿಯಲ್ಲಿ ಕ್ರಯದ ರೂಪದಲ್ಲಿ ಜನರಿಗೆ ಈ ಭೂಮಿಯನ್ನು ಉಚಿತವಾಗಿ ನೀಡುವ ವ್ಯವಸ್ಥೆ ತರಲಾಗಿದೆ. 1,11,11,111 ಆಸ್ತಿ ದಾಖಲೆ ಸಿದ್ಧವಾಗಿದ್ದು, ಆಯಾ ತಾಲೂಕುಗಳಲ್ಲಿ ತಹಶೀಲ್ದಾರ್ ಅವರು ಆಸ್ತಿಯ ದಾಖಲೆ ನೀಡಲಿದ್ದಾರೆ ಎಂದು ಮಾಹಿತಿ ನೀಡಿದರು.

15 ವರ್ಷ ಮಾರಾಟ ಮಾಡುವಂತಿಲ್ಲ: ಈ ರೀತಿ ದಾಖಲೆ ಪಡೆದ ಆಸ್ತಿಯನ್ನು ಯಾರೂ 15 ವರ್ಷಗಳ ಕಾಲ ಮಾರಾಟ ಮಾಡುವಂತಿಲ್ಲ. ಈ ದಾಖಲೆಗಳನ್ನು ತಹಶೀಲ್ದಾರ್ ಅವರು ನೋಂದಣಿ ಮಾಡಿ ಆಸ್ತಿ ಮಾಲೀಕರಿಗೆ ನೀಡುತ್ತಿದ್ದಾರೆ. ಪಿಡಿಒ ಇಲಾಖೆ ಜತೆಗೂಡಿ ಖಾತೆ ಮಾಡಿಸಿ ಕೊಡಲಾಗುವುದು. ಇದಕ್ಕೆ ನೀಡಬೇಕಾದ ಶುಲ್ಕ ಪಾವತಿಯನ್ನು ಮುಂದಕ್ಕೆ ಹಾಕಲಾಗಿದೆ ಎಂದು ತಿಳಿಸಿದರು.

ಸತ್ಕಾರ್ಯದಿಂದ ಬದುಕು ಸಾರ್ಥಕ

ಹಿರಿಯ ವಿದ್ವಾಂಸ ಶ್ರೀ ಹಿರೇಮಗಳೂರು ಕಣ್ಣನ್ ಅಭಿಮತ



ಜೀವನೋತ್ಸಾಹ ಶಿಬಿರದಲ್ಲಿ ಹಿರಿಯ ವಿದ್ವಾಂಸ ಹಿರೇಮಗಳೂರು ಕಣ್ಣನ್ ಮಾತನಾಡುತ್ತಿರುವುದು.

ಮೈಸೂರು, ಮೇ 19– ಸದ್ಭಾವನೆ, ಸತ್ಕಾರ್ಯಗಳಿಂದ ಸಾರ್ಥಕ ಜೀವನ ಸಾಧ್ಯ ಎಂದು ಚಿಂತಕ, ಹಿರಿಯ ವಿದ್ವಾಂಸ ಹಿರೇಮಗಳೂರು ಕಣ್ಣನ್ ತಿಳಿಸಿದ್ದಾರೆ.


ಊಟಿಯ ತೀಟಕಲ್‌ನ ಜೆಎಸ್‌ಎಸ್ ಪಬ್ಲಿಕ್ ಶಾಲಾ ಆವರಣದಲ್ಲಿ ನಡೆದ ಜೀವನೋತ್ಸಾಹ ಶಿಬಿರದಲ್ಲಿ ಮಾತನಾಡಿದ ಅವರು, ಬದುಕು ಆದರ್ಶ ಹಾಗೂ ತ್ಯಾಗದಿಂದ ಕೂಡಿರಬೇಕು. ಮನುಷ್ಯ ಉತ್ತಮ ಜೀವನ ಹೊಂದಲು ಸಮದರ್ಶಿತ್ವ, ಸಚ್ಚಾರಿತ್ರ್ಯ ಗುಣಗಳನ್ನು ಬೆಳೆಸಿಕೊಳ್ಳಬೇಕು. ಸಂತನ ಗುಣ, ವಿಜ್ಞಾನಿಯ ಬುದ್ಧಿ ಬೆಳೆಸಿಕೊಂಡು ಸಮಷ್ಟಿ ಹಿತ ಬಯಸುವ ವ್ಯಕ್ತಿಯೇ ಶ್ರೇಷ್ಠ ಮಾನವನಾಗುತ್ತಾನೆ.

ಬೇಡುವ ಕೈಗಳಿಗಿಂತ ನೀಡುವ ಕೈಗಳೇ ದಿವ್ಯ ಎನ್ನುವ ಸುತ್ತೂರು ಶ್ರೀ ಮಠದ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳ ಬದುಕು ನಮಗೆಲ್ಲ ಆದರ್ಶವಾಗಬೇಕು. ತನಗಾಗಿ ಬದುಕದೇ ಸಮಾಜದ ಹಿತಕ್ಕಾಗಿ ಬದುಕುವ ವ್ಯಕ್ತಿಗಳನ್ನು ಲೋಕ ನಿರಂತರವಾಗಿ ಸ್ಮರಣೆಗೈಯ್ಯುತ್ತದೆ. ನಾವು ಆದರ್ಶ ಗುಣಗಳನ್ನು ಮೈಗೂಡಿಸಿಕೊಳ್ಳುವ ಮೂಲಕ ಬದುಕನ್ನು ಸಾರ್ಥಕಪಡಿಸಿಕೊಳ್ಳಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಅಧ್ಯಾಪಕರಾದ ಶ್ರೀಮತಿ ನಾಗಶ್ರೀ ತ್ಯಾಗರಾಜ್ ಉಪಸ್ಥಿತರಿದ್ದು ಮುದ್ದುರಾಮನ ಚೌಪದಿಗಳನ್ನು ಹಾಡಿದರು.

ಸಂಸ್ಕೃತಿ ಚಿಂತಕ ಡಾ.ವಿ.ಬಿ. ಆರತಿ, ಹಿರಿಯ ಜೀವಗಳ ಸ್ಮರಣೆ ಮತ್ತು ಆರೈಕೆ ಅತೀ ಅಗತ್ಯ. ನಮ್ಮ ಪೂರ್ವಿಕರ ಸ್ಮರಣೆಯೊಂದಿಗೆ ಮನೆಯಲ್ಲಿರುವ ಹಿರಿಯರಿಗೆ ಸ್ವಲ್ಪವಾದರೂ ಸಮಯ ಕೊಡಬೇಕು. ಹಿರಿಯ ಜೀವಗಳಿಗೆ ಮುಖ್ಯವಾಗಿ ಬೇಕಿರುವುದು ಮನೆಯವರ ಪ್ರೀತಿ ಮತ್ತು ಕಾಳಜಿ. ಹಿರಿಯರ ಭಾವನೆಯನ್ನು ಅರಿತು ಅವರಲ್ಲಿ ಜೀವನೋತ್ಸಾಹ ತುಂಬಲು ಪ್ರಯತ್ನಿಸಬೇಕು. ಭಾರತೀಯ ಸಂಸ್ಕೃತಿಯಲ್ಲಿ ಋಣಕ್ಕೆ ಹೆಚ್ಚಿನ ಮಹತ್ವವಿದೆ. ನಮಗೆ ವಿವೇಕ ಸೋಪಾನ ನೀಡಿರುವ ನಮ್ಮ ಹಿರಿಯರ ಋಣ ತೀರಿಸಬೇಕಾದ ಹೊಣೆಗಾರಿಕೆ ನಮ್ಮದಾಗಿದೆ ಎಂದರು.

ಕುಲಪತಿ ಡಾ.ನಿರಂಜನ ವಾನಳ್ಳಿ, ಬದುಕಿನಲ್ಲಿ ಸುಖ ದುಃಖಗಳು ಬಂದಾಗ ಮನಸ್ಸಿನಲ್ಲಿ ಸಮತೋಲನ ಕಾಪಾಡಿಕೊಳ್ಳುವುದು ಸ್ಥಿತಪ್ರಜ್ಞತೆಯ ಲಕ್ಷಣ. ಮನುಷ್ಯನಿಗೆ ಸ್ಥಿತ ಪ್ರಜ್ಞತೆಯಷ್ಟೇ ಸ್ಥಿತಿ ಪ್ರಜ್ಞತೆಯೂ ಮುಖ್ಯ. ನಿಶ್ಚಿತ ಬುದ್ಧಿ ಮತ್ತು ಶಾಂತ ಮನಸ್ಥಿತಿ ಹೊಂದಿರುವ ವ್ಯಕ್ತಿ ಘನ ವ್ಯಕ್ತಿತ್ವ ಪಡೆದುಕೊಳ್ಳುತ್ತಾನೆ. ನಾವು ಪೂರ್ವಗ್ರಹ ಪೀಡಿತರಾಗದೆ ಎಲ್ಲ ವ್ಯಕ್ತಿಗಳ ಬಗ್ಗೆ ಪ್ರೀತಿ, ಕರುಣೆ, ವಾತ್ಸಲ್ಯ ಹೊಂದಿರಬೇಕು. ಸ್ಥಿತ ಪ್ರಜ್ಞತೆ ಎನ್ನುವುದೊಂದು ಆಂತರಿಕ ಶಕ್ತಿ. ನಮ್ಮೊಳಗಿನ ನಿಲುವಿಗೆ ಬದ್ಧರಾಗಿ ಬದುಕುವ ಮೂಲಕ ನೆಮ್ಮದಿಯನ್ನು ಕಾಣಬೇಕು ಎಂದು ತಿಳಿಸಿದರು.

ಯಶಸ್ವಿ ಸೋಮಶೇಖರ್ ಹುಟ್ಟುಹಬ್ಬ...



ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಪದಾಧಿಕಾರಿಗಳು ಶುಭಾಶಯ ಕೋರಿದರು. ಮೈಸೂರು ಮಹಾನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಂ. ರಘು, ಚಾಮುಂಡೇಶ್ವರಿ ಕ್ಷೇತ್ರದ ನಗರ ಮಂಡಲದ ಅಧ್ಯಕ್ಷ ರಾಕೇಶ್ ಭಟ್, ಪ್ರಧಾನ ಕಾರ್ಯದರ್ಶಿ ಈರೇಗೌಡ, ಉಪಾಧ್ಯಕ್ಷ ಶಿವಕುಮಾರ್, ಕಾರ್ಯದರ್ಶಿ ಶ್ರೀನಿವಾಸ್ ಪ್ರಸಾದ್, ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಎ.ರಾಘವೇಂದ್ರ, ಚಾಮುಂಡೇಶ್ವರಿ ಗ್ರಾಮಾಂತರ ಮಂಡಲದ ಉಪಾಧ್ಯಕ್ಷ ದಾರಿಪುರ ಸುನಿಲ್ ಇನ್ನಿತರರು ಈ ವೇಳೆ ಉಪಸ್ಥಿತರಿದ್ದರು.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 19–ಶಾಲಾ ಶಿಕ್ಷಣವನ್ನು ಪೂರೈಸಿದ ನಂತರ ಉನ್ನತ ಶಿಕ್ಷಣ ಪಡೆಯಲು ಬಯಸುವ ಹೆಣ್ಣು ಮಕ್ಕಳಿಗೆ ನೆರವಾಗುವ ಉದ್ದೇಶದಿಂದ ಅಜೀಂ ಪ್ರೇಮ್‌ಜೀ ಫೌಂಡೇಷನ್‌ನಿಂದ ವಿದ್ಯಾರ್ಥಿವೇತನವನ್ನು ಘೋಷಿಸಿದೆ.

ಮುನಿಸಿಪಲ್ ಶಾಲೆಗಳನ್ನು ಒಳಗೊಂಡಂತೆ ಸರ್ಕಾರಿ ಶಾಲೆಗಳಲ್ಲಿ ತಮ್ಮ 10 ಮತ್ತು 12ನೇ ತರಗತಿ ಶಿಕ್ಷಣವನ್ನು ಪೂರೈಸಿರುವ ಹೆಣ್ಣು ಮಕ್ಕಳು, ಪದವಿ ಅಥವಾ ಡಿಪ್ಲೊಮಾ ಕೋರ್ಸ್ ಮಾಡಲು ಮಾನ್ಯತೆ ಪಡೆದ ಉನ್ನತ ಶಿಕ್ಷಣ ಸಂಸ್ಥೆಯಲ್ಲಿ ದಾಖಲಾತಿ ಪಡೆದವರು ಅರ್ಹತೆ ಹೊಂದಿರುತ್ತಾರೆ. ವಿದ್ಯಾರ್ಥಿನಿ ಪದವಿ, ಡಿಪ್ಲೊಮಾ ಕೋರ್ಸ್ ಮುಗಿಸುವವರೆಗೆ ಯಶಸ್ವಿಯಾಗಿ ಓದಿನಲ್ಲಿ ಮುಂದುವರೆಯುತ್ತಿದ್ದಲ್ಲಿ, ಪ್ರತಿ ವರ್ಷ ರೂ.30,000 ನೀಡಲಾಗುವುದು. 2025–26ನೇ ಶೈಕ್ಷಣಿಕ ವರ್ಷದಲ್ಲಿ 2.5 ಲಕ್ಷ ಹೆಣ್ಣುಮಕ್ಕಳಿಗೆ ಅಜೀಂ ಪ್ರೇಮ್‌ಜೀ ವಿದ್ಯಾರ್ಥಿವೇತನ ನೀಡಲಾಗುವುದು ಎಂದು ಫೌಂಡೇಷನ್ ಅಂದಾಜಿಸಿದೆ ಎಂದು ಅಜೀಂ ಪ್ರೇಮ್ ಜೀ ಫೌಂಡೇಷನ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅನುರಾಗ್ ಬೆಹರ್ ತಿಳಿಸಿದ್ದಾರೆ. 2025–26ನೇ ಸಾಲಿನ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಕೆಯ ಪ್ರಕ್ರಿಯೆ ಸೆಪ್ಟೆಂಬರ್ 2025ರಲ್ಲಿ ಪ್ರಾರಂಭವಾಗಲಿದೆ.

ವೈಜಿಗುಡ್ಡ ಡ್ಯಾಮ್‌ನಲ್ಲಿ ಮುಳುಗಿ ಬೆಂಗಳೂರಿನ 3 ಯುವತಿಯರ ಸಾವು

ಮಾಗಡಿ: ರಾಮನಗರ ಜಿಲ್ಲೆಯ ಮಾಗಡಿ ತಾಲೂಕಿನ ವೈಜಿಗುಡ್ಡ ಜಲಾಶಯದಲ್ಲಿ ಮುಳುಗಿ ಮೂವರು ಯುವತಿಯರು ಸಾವನ್ನಪ್ಪಿರುವ ಘಟನೆ ನಡೆದಿದೆ. ಮೃತ ಯುವತಿಯರನ್ನು ಬೆಂಗಳೂರು ಮೂಲದ 18 ವರ್ಷದ ರಾಘವಿ, 20 ವರ್ಷದ ಮಧುಮಿತ, 22 ವರ್ಷದ ರಮ್ಯಾ ಎಂದು ಗುರುತಿಸಲಾಗಿದೆ.



ಏಳು ಯುವತಿಯರ ತಂಡ ಜಲಾಶಯ ವೀಕ್ಷಣೆಗೆಂದು ತೆರಳಿತ್ತು. ಈ ಪೈಕಿ ಓರ್ವ ಯುವತಿ ನೀರಿಗೆ ಬಿದ್ದಿದ್ದು ಆಕೆಯನ್ನು ರಕ್ಷಿಸಲು ಯುವತಿಯರು ಮುಂದಾಗಿದ್ದಾರೆ. ದುರದೃಷ್ಟವಶಾತ್ ಮೂವರು ಯುವತಿಯರು ನೀರುಪಾಲಾಗಿದ್ದು ನಾಲ್ವರು ಯುವತಿಯರನ್ನು ಯುವಕನೋರ್ವ ರಕ್ಷಿಸಿದ್ದಾನೆ. ಸದ್ಯ ಮೃತದೇಹಗಳನ್ನು ಮಾಗಡಿ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಲಾಗಿದೆ.

ಮದ್ಯದ ಅಂಗಡಿ ಲೈಸೆನ್ಸ್ ಶುಲ್ಕ ಶೇ.100ರಷ್ಟು ಹೆಚ್ಚಳ

ನಾಳೆ ಸಿಎಂ ಜೊತೆ ಸಭೆ ನಂತರ ಹೋರಾಟದ ರೂಪುರೇಷೆ ನಿರ್ಧಾರ: ಗುರುಸ್ವಾಮಿ



ಮದ್ಯದ ಅಂಗಡಿ ಲೈಸೆನ್ಸ್ ಶುಲ್ಕ

- ಬ್ರೆವರೀಸ್ ವಾರ್ಷಿಕ ಲೈಸೆನ್ಸ್ ನವೀಕರಣ ಶುಲ್ಕ 27 ಲಕ್ಷ ರೂ.ಗಳಿಂದ 54 ಲಕ್ಷ ರೂ.
- ಬಾಟ್ಲಿಂಗ್ ಯೂನಿಟ್ಸ್ (ಡಿಸ್ಟಿಲರೀಸ್ ಅಂಡ್ ಬ್ರೆವರೀಸ್): 1 ಲಕ್ಷದಿಂದ 2 ಲಕ್ಷ ರೂ.
- ರೀಟೇಲ್ ವೆಂಡರ್ (ಬಲ್ಕ್ ಬೀರ್): ವಾರ್ಷಿಕ ಲೀಸ್ ಮೊತ್ತವನ್ನು 3 ಲಕ್ಷ ರೂ.ಗಳಿಗೇರಿಸಿದೆ
- ಸಿಎಲ್–4 ಕ್ಲಬ್, ಬಾರ್ ಅಂಡ್ ರೆಸ್ಟೋರೆಂಟ್ಸ್: ವಾರ್ಷಿಕ ಲೀಸ್ ಮೊತ್ತವನ್ನು 2 ಲಕ್ಷಕ್ಕೆ ಹೆಚ್ಚಿಸಿದೆ
- ಲೈಸೆನ್ಸ್ ವರ್ಗಾವಣೆ ಶುಲ್ಕ: ಎರಡರಷ್ಟಿರುವ ಶುಲ್ಕವನ್ನು 3ರಷ್ಟು ಹೆಚ್ಚಿಸಲಾಗಿದೆ
- ಸಿಎಲ್–9 ಲೈಸೆನ್ಸ್ (ಬಾರ್ ಅಂಡ್ ರೆಸ್ಟೋರೆಂಟ್ಸ್): 8.62 ಲಕ್ಷದಿಂದ 17.25 ಲಕ್ಷ ರೂ.
- ಸಿಎಲ್–7 ಬೋರ್ಡಿಂಗ್ ಲೈಸೆನ್ಸ್: ಪ್ರಸ್ತುತ ಇರುವ 9.75 ಲಕ್ಷದಿಂದ 19.55 ಲಕ್ಷ ರೂ.ಗೆ ಏರಿಸಲಾಗಿದೆ
- ಸಿಎಲ್–5 ರೀಟೇಲ್ ಔಟ್‌ಲೆಟ್ ಲೈಸೆನ್ಸ್: 11.5 ಲಕ್ಷದಿಂದ 23 ಲಕ್ಷ ರೂ. ದ್ವಿಗುಣಗೊಂಡಿದೆ

ಮೈಸೂರು, ಮೇ 19 (ಆರ್‌ಕೆ)– ಮದ್ಯದ ಅಂಗಡಿ ಲೈಸೆನ್ಸ್ ಶುಲ್ಕವನ್ನು ಸರ್ಕಾರ ದುಪ್ಪಟ್ಟು ಹೆಚ್ಚಿಸಿದೆ.

ರಾಜ್ಯದಲ್ಲಿ ನೀಡುತ್ತಿರುವ ಉಚಿತ ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಜನರು ಬಳಸುವ ಅಗತ್ಯ ವಸ್ತು, ಸೇವೆಗಳ ದರ ಹೆಚ್ಚಿಸಿರುವ ಸರ್ಕಾರ ಈಗ ಮದ್ಯದ ಮೇಲೆ ದುಪ್ಪಟ್ಟು ಶುಲ್ಕ ಹೆಚ್ಚಳ ಮಾಡಿದೆ.

ಬ್ರೆವರೀಸ್ ವಾರ್ಷಿಕ ಲೈಸೆನ್ಸ್ ಶುಲ್ಕ 27 ಲಕ್ಷದಿಂದ 54 ಲಕ್ಷ ರೂ., ಡಿಸ್ಟಿಲರೀಸ್‌ಗೆ 45 ಲಕ್ಷದಿಂದ 90 ಲಕ್ಷ ರೂ., ಡಿಸ್ಟಿಲರೀಸ್ ಮತ್ತು ಬ್ರೆವರೀಸ್ ಆರಂಭಿಸಲು ಎರಡು ಲಕ್ಷ ರೂ. ಶುಲ್ಕ ವಿಧಿಸಿ ಅಧಿಸೂಚನೆ ಹೊರಡಿಸಿರುವ ಸರ್ಕಾರವು, ಪರಿಷ್ಕೃತ ದರವು ಜುಲೈ 1ರಿಂದ ಜಾರಿಯಾಗುವುದಾಗಿ ತಿಳಿಸಿದೆ.

ಬಹುತೇಕ ದುಪ್ಪಟ್ಟು ಶುಲ್ಕ ವಿಧಿಸುತ್ತಿರುವ ಸರ್ಕಾರದ ಕ್ರಮದಿಂದ ಬೇಸತ್ತು ರಾಜ್ಯಾದ್ಯಂತ ಸಾವಿರಾರು ಡಿಸ್ಟಿಲರೀಸ್ ಮತ್ತು ವೈನ್ ಶಾಪ್ ಮಾಲೀಕರು, ಮೇ 20 (ಮಂಗಳವಾರ) ಪ್ರತಿಭಟನೆ ಮಾಡಿ, ಮೇ 21ರಂದು ಎಲ್ಲಾ ಮದ್ಯ ಮಾರಾಟ ಅಂಗಡಿಗಳನ್ನು ಬಂದ್ ಮಾಡಲು ನಿರ್ಧರಿಸಿದ್ದರಾದರೂ, ಮೇ 21ರಂದು ಮುಖ್ಯಮಂತ್ರಿಗಳು ಮಾತುಕತೆಗೆ ಕರೆದಿರುವುದರಿಂದ ಮುಂದಿನ ಕ್ರಮವನ್ನು ನಂತರ ತಿಳಿಸಲಾಗುವುದು ಎಂದು ಮೈಸೂರು ಜಿಲ್ಲಾ ಮದ್ಯ ಮಾರಾಟಗಾರರ ಸಂಘದ ಅಧ್ಯಕ್ಷ ಗುರುಸ್ವಾಮಿ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಎಕ್ಸೈಸ್ ಡ್ಯೂಟಿ ಮತ್ತು ಪರವಾನಗಿ ಶುಲ್ಕವನ್ನು ಕಳೆದ 2 ವರ್ಷದಿಂದಲೂ ಪದೇ ಪದೇ ಹೆಚ್ಚಿಸುತ್ತಾ ಬಂದಿರುವ ಕಾಂಗ್ರೆಸ್ ಸರ್ಕಾರ, ಇದೀಗ ಡಿಸ್ಟಿಲರೀಸ್, ಬ್ರೆವರೀಸ್ ಮತ್ತು ಮದ್ಯದಂಗಡಿ ಲೈಸೆನ್ಸ್ ಶುಲ್ಕವನ್ನು ಶೇ.100ರಷ್ಟು ಹೆಚ್ಚಿಸಿ ಅಧಿಸೂಚನೆ ಹೊರಡಿಸಿದೆ ಎಂದು ಆರೋಪಿಸಿದರು.

ಪರಿಷ್ಕರಣೆ ಬಗ್ಗೆ ಆಕ್ಷೇಪಣೆಗಳನ್ನು 7 ದಿನದೊಳಗಾಗಿ ಹಣಕಾಸು ಇಲಾಖೆ ಕಾರ್ಯದರ್ಶಿಗಳಿಗೆ ಸಲ್ಲಿಸುವಂತೆ ಕೋರಲಾಗಿದೆ. ದರ ಪರಿಷ್ಕರಣೆಯಿಂದ ಸರ್ಕಾರಕ್ಕೆ ವಾರ್ಷಿಕ 600 ಕೋಟಿ ರೂ. ಹೆಚ್ಚುವರಿ ವರಮಾನ ಬರಲಿದೆ ಎಂದ ಅವರು, ಈ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಸಭೆ ನಿಗದಿ ಮಾಡಿರುವುದರಿಂದ ಅಲ್ಲಿ ಮದ್ಯ ವರ್ತಕರು ಪ್ರಸ್ತಾಪ ಮಾಡುವರು ಎಂದರು.

ಪರಿಷ್ಕೃತ ದರವು 3,999 ಲಿಕ್ಕರ್ ರೀಟೇಲ್ ಔಟ್‌ಲೆಟ್‌ಗಳು, 3,642 ಸಿಎಲ್–9, ರೆಸ್ಟೋರೆಂಟ್ ಲೈಸೆನ್ಸ್ 3,030 ಸಿಎಲ್–7 ಮತ್ತು 303 ಸಿಎಲ್–4 ಕ್ಲಬ್ ಲೈಸೆನ್ಸ್ ಸೇರಿದಂತೆ ರಾಜ್ಯದ 13,567 ಅಬಕಾರಿ ಪರವಾನಗಿಗಳಿಗೆ ಅನ್ವಯವಾಗಲಿದೆ. 20 ಲಕ್ಷ ಜನಸಂಖ್ಯೆ ಹೊಂದಿರುವ ನಗರ ಮುನಿಸಿಪಲ್ ವಲಯಗಳ ಲೈಸೆನ್ಸ್ ನವೀಕರಣ ಶುಲ್ಕವನ್ನು 12 ಲಕ್ಷ ರೂ.ಗೆ ಹೆಚ್ಚಿಸಲಾಗಿದೆ. ಇತರ ವಲಯಗಳಲ್ಲಿ 10 ಲಕ್ಷ ರೂ. ಹೆಚ್ಚಿಸಿದ್ದು, ಸಣ್ಣಮಟ್ಟ ಪಟ್ಟಣ, ಪಂಚಾಯ್ತಿ ಪ್ರದೇಶಗಳಲ್ಲಿ 8 ಲಕ್ಷ ರೂ. ಏರಿಸಲಾಗಿದೆ.

ಹೆಚ್ಚಿನ ಪ್ರಮಾಣದ ರೀಟೇಲ್ ಬಿಯರ್ ಮಾರುವವರ ಲೀಸ್ ಮೊತ್ತ 3 ಲಕ್ಷ ರೂ. ಲಿಕ್ಕರ್ ಪೂರೈಸುವ ಕ್ಲಬ್, ಬಾರ್ ಅಂಡ್ ರೆಸ್ಟೋರೆಂಟ್‌ಗಳಿಗೆ 2 ಲಕ್ಷ ರೂ., ಲೈಸೆನ್ಸ್ ವರ್ಗಾವಣೆಗೂ ಅಧಿಕ ಶುಲ್ಕ ನಿಗದಿಪಡಿಸಲಾಗಿದೆ. ಬಾರ್ ಅಂಡ್ ರೆಸ್ಟೋರೆಂಟ್ (ಸಿಎಲ್–9)ಗಳಿಗೆ 8.62 ಲಕ್ಷದಿಂದ 17.25 ಲಕ್ಷ ರೂ., ಸಿಎಲ್–7 ಬೋರ್ಡಿಂಗ್ ಲೈಸೆನ್ಸ್ 19.55 ಲಕ್ಷ ರೂ. ಸಿಎಲ್–7 ರೀಟೇಲ್ ಔಟ್‌ಲೆಟ್ ಲೈಸೆನ್ಸ್ ಅನ್ನು 11.5 ಲಕ್ಷ ರೂ.ನಿಂದ 23 ಲಕ್ಷರೂ.ಗಳಿಗೆ ಹೆಚ್ಚಿಸಲಾಗಿದೆ.

ಕನ್ನಡವೇ ಪ್ರಧಾನವಾದಾಗ ನಾವು ಬದುಕುವ ಸಮಾಜವೇ ಕನ್ನಡಮಯ

ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ನಾಡೋಜ ಡಾ.ಮಲ್ಲೇಪುರಂ ಜಿ.ವೆಂಕಟೇಶ್



ಮೈಸೂರಿನ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ನಡೆದ ಸಾಂಸ್ಕೃತಿಕ ಉತ್ಸವದಲ್ಲಿ ಶಿಕ್ಷಕ ಟಿ.ಸತೀಶ್ ಜವರೇಗೌಡರಿಗೆ 'ಶಿಕ್ಷಣ ರತ್ನ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಮೈಸೂರು,ಮೇ 19–ಕನ್ನಡವೇ ಪ್ರಧಾನವಾದಾಗ, ನಾವು ಬದುಕುವ ಇಡೀ ಸಮಾಜವೇ ಕನ್ನಡಮಯವಾಗುತ್ತದೆ. ಜೊತೆಗೆ ಕನ್ನಡ ಪ್ರಾಧ್ಯಾನತೆ ಪಡೆದು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಲಲಿತ ಕಲೆ, ಆಟೋಟಗಳಲ್ಲಿ ಕನ್ನಡಮಯತೆ ಎದ್ದು ಕಾಣುತ್ತದೆ ಎಂದು ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ನಾಡೋಜ ಡಾ.ಮಲ್ಲೇಪುರಂ ಜಿ.ವೆಂಕಟೇಶ್ ಹೇಳಿದರು.

ಆತ್ಮಶ್ರೀ ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನ ಹಾಗೂ ಕನ್ನಡಾಂಬೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘದ ಸಂಯುಕ್ತ ಆಶ್ರಯದಲ್ಲಿ ನಗರದ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ನಡೆದ 'ಮೈಸೂರು ಸಾಂಸ್ಕೃತಿಕ ಉತ್ಸವ'ದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ವಿವಿಧ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಕನ್ನಡ ಒಬ್ಬೊಬ್ಬರ ಬಾಯಲ್ಲೂ ಒಂದೊಂದು ರೀತಿಯಲ್ಲಿ ನುಡಿಯಲ್ಪಡುತ್ತದೆ. ಎಷ್ಟೋ ಸಿನಿಮಾ ನಟ–ನಟಿಯರು ಕನ್ನಡದಲ್ಲಿ ಆಗಿಹೋಗಿದ್ದಾರೆ. ಆದರೆ, ಡಾ.ರಾಜಕುಮಾರ್ ಅವರು ಕನ್ನಡ ನುಡಿಯುತ್ತಿದ್ದ ರೀತಿ ಮಾತ್ರ ಅನನ್ಯ. ಈ ರೀತಿ ನುಡಿಯಲು ಇನ್ನಾವ ನಟರಿಗೂ ಸಾಧ್ಯವಿಲ್ಲ. ಸಾಹಿತಿಗಳಲ್ಲೂ ಅನಕೃ ಅವರ ರೀತಿಯಲ್ಲಿ ಕನ್ನಡ ಭಾಷಣ ಮಾಡಿದವರು ಅಪರೂಪ. ಇವರೆಲ್ಲ ಕನ್ನಡ ಸಾಂಸ್ಕೃತಿಕ ಪರಂಪರೆಯನ್ನು ಬೆಳಗಿಸಿದವರು ಎಂದರು.

ಸರ್ಕಾರ ಎಲ್ಲರನ್ನೂ, ಎಲ್ಲಾ ಕ್ಷೇತ್ರದವರನ್ನು ಗುರುತಿಸಲು ಖಂಡಿತವಾಗಿ ಸಾಧ್ಯವಿಲ್ಲ. ಆದರೆ, ಯಾರನ್ನು ಸರ್ಕಾರ ಗುರುತಿಸಲು ವಿಫಲವಾಗುತ್ತದೋ, ಅಂತಹ ಎಲೆಮರೆಯ ವಿವಿಧ ಕ್ಷೇತ್ರದ ಸಾಧಕರನ್ನು ಸಂಘ–ಸಂಸ್ಥೆಗಳು ಗುರುತಿಸಿ ಗೌರವಿಸುತ್ತವೆ. ಇದು ಶ್ಲಾಘನೀಯ ಕಾರ್ಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಾಡನ್ನು, ಭಾಷೆಯನ್ನು ಕಟ್ಟುವ ಕೆಲಸ, ಸಂಸ್ಕೃತಿಯನ್ನು ನಿರ್ಮಾಣ ಮಾಡುವ ಕಾರ್ಯ ಸಮಾಜಕ್ಕೆ ಒಂದು ಧೈರ್ಯ ಸ್ಥೈರ್ಯ ನೀಡುತ್ತದೆ. ಆಗ ಕುವೆಂಪು ಹೇಳಿದಂತೆ ಆತ್ಮಶ್ರೀಗಾಗಿ ನಿರಂಕುಶಮತಿಗಳಾಗುತ್ತೇವೆ. ಜೊತೆಗೆ ಆತ್ಮಶಕ್ತಿ ಬೆಳೆಯುತ್ತದೆ. ಆತ್ಮಶ್ರೀಯೆಂದರೆ ತನ್ನನ್ನೇ ತಾನು ಜಯಿಸಿಕೊಳ್ಳುವುದು. ತನ್ನಲ್ಲಿ ತಾನೇ ಧೀರತ್ವವನ್ನು ರೂಪಿಸಿಕೊಳ್ಳುವುದು ಎಂದು ನುಡಿದರು.

ಸಮಾರಂಭ ಉದ್ಘಾಟಿಸಿದ ದಕ್ಷ ಕಾಲೇಜಿನ ಅಧ್ಯಕ್ಷ ಪಿ.ಜಯಚಂದ್ರ ರಾಜು ಮಾತನಾಡಿ ಶಿಕ್ಷಣ, ಸಂಘಟನೆ ಮತ್ತು ಸೇವೆ ನಿರಂತರವಾಗಿ ನಡೆಯಬೇಕು. ಪ್ರತಿಯೊಬ್ಬರೂ ಇದರಲ್ಲಿ ಭಾಗಿಯಾಗಬೇಕು ಎಂದು ಸಲಹೆ ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ವಹಿಸಿದ್ದರು. ವೇದಿಕೆಯಲ್ಲಿ ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಉಪಾಧ್ಯಕ್ಷ ಕೆ.ಎಸ್.ಸತೀಶ್‌ಕುಮಾರ್, ಚಿತ್ರನಟಿ ಭೂಮಿಕಾ, ಗಾಯಕಿ ಜಯಂತಿ ಭಟ್, ಆತ್ಮಶ್ರೀ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷೆ ವರಲಕ್ಷ್ಮಿ, ಪ್ರಧಾನ ಕಾರ್ಯದರ್ಶಿ ಡಾ.ಗುಣವಂತ ಮಂಜು ಉಪಸ್ಥಿತರಿದ್ದರು. ನಾಡೋಜ ಮಲ್ಲೇಪುರಂ ಜಿ.ವೆಂಕಟೇಶ್ ಅವರು, ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಜಿಲ್ಲಾ ಅಧ್ಯಕ್ಷ ನಾಗರಾಜ್ ವಿ.ಬೈರಿ ಅವರಿಗೆ 'ಕರ್ನಾಟಕ ಸುಪುತ್ರ ರಾಜ್ಯ ಪ್ರಶಸ್ತಿ', ಶಿಕ್ಷಕ ಮತ್ತು ಸಾಹಿತಿ ಟಿ. ಸತೀಶ್ ಜವರೇಗೌಡ ಅವರಿಗೆ 'ಶಿಕ್ಷಣ ರತ್ನ ಪ್ರಶಸ್ತಿ'ಯನ್ನು ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರತಿಷ್ಠಾನದ ಡಾ.ಗುಣವಂತ ಮಂಜು, ಲಯನ್ ನಾಗರಾಜ್ ವಿ.ಬೈರಿ ಇದ್ದರು.

ಖಾಸಗಿ ಶಾಲೆಗಳ ಶುಲ್ಕ ಕಡಿವಾಣಕ್ಕೆ ಕರ್ನಾಟಕ ಹಿತರಕ್ಷಣಾ ವೇದಿಕೆ ಆಗ್ರಹ



ಖಾಸಗಿ ಶಾಲೆಗಳ ಶುಲ್ಕಕ್ಕೆ ಕಡಿವಾಣ ಹಾಕುವಂತೆ ಆಗ್ರಹಿಸಿ ಕರ್ನಾಟಕ ಹಿತ ರಕ್ಷಣಾ ವೇದಿಕೆ ವತಿಯಿಂದ ಎಡಿಸಿ ಡಾ.ಶಿವರಾಜು ಅವರಿಗೆ ಮನವಿ ಸಲ್ಲಿಸಲಾಯಿತು.

ಮೈಸೂರು, ಮೇ 19– ಖಾಸಗಿ ಶಾಲೆಗಳಲ್ಲಿ ಪೋಷಕರಿಂದ ಹೆಚ್ಚುವರಿಯಾಗಿ ಶುಲ್ಕ ಸಂಗ್ರಹಿಸಲಾಗುತ್ತಿದೆ. ಅವರು ಸಂಗ್ರಹಿಸುವ ಶುಲ್ಕವನ್ನು ಸೂಚನಾ ಫಲಕ ಹಾಗೂ ಶಾಲೆ ವೆಬ್‌ಸೈಟ್‌ನಲ್ಲಿ ಮೊದಲೇ ಪ್ರಕಟಿಸಬೇಕು ಎಂದು ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್‌ಕುಮಾರ್ ನೇತೃತ್ವದಲ್ಲಿ ಅಪರ ಜಿಲ್ಲಾಧಿಕಾರಿ ಶಿವರಾಜು ಅವರಿಗೆ ಮನವಿ ಪತ್ರ ನೀಡಿ ಸಲ್ಲಿಸಲಾಯಿತು.

ಕೆಲವು ಖಾಸಗಿ ಶಾಲೆಗಳು ಅನಧಿಕೃತವಾಗಿ ಶುಲ್ಕ ಪಡೆಯುತ್ತಿದ್ದು, ಇದಕ್ಕೆ ಕಡಿವಾಣ ಹಾಕಬೇಕು ಎಂದರು.

ಶಾಸಗಿ ಶಾಲೆಗಳಿಗೆ ಶುಲ್ಕ ನಿಗದಿಪಡಿಸುವ ಸಂಪೂರ್ಣ ಅಧಿಕಾರವಿದ್ದು, ಅದನ್ನು ಪ್ರಶ್ನಿಸುವುದಿಲ್ಲ. ಆದರೆ ಅದನ್ನು ಮೊದಲೇ ಪ್ರಕಟಿಸಬೇಕು. ಅದಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿಯ ಅನುಮತಿ ಪಡೆದುಕೊಳ್ಳಬೇಕು ಎಂಬ ನಿಯಮವನ್ನು ಯಾವ ಶಾಲೆಗಳೂ ಪಾಲಿಸುತ್ತಿಲ್ಲ. ಆದ್ದರಿಂದ ಎಲ್ಲಾ ಶಾಲೆಗಳೂ ಈ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಒತ್ತಾಯಿಸಿದರು.

ಕೆಲವು ಖಾಸಗಿ ಶಾಲೆಗಳಲ್ಲಿ ನಿಗದಿಪಡಿಸಿದಂತಹ ವಾರ್ಷಿಕ ಶುಲ್ಕವನ್ನು ಒಂದೇ ಬಾರಿ ಕಟ್ಟುವಂತೆ ಪೋಷಕರಿಗೆ ಒತ್ತಡ ಹೇರಲಾಗುತ್ತಿದೆ. ಇದರಿಂದ ಪೋಷಕರು ಶುಲ್ಕವನ್ನು ಕಟ್ಟಲು ಸಾಲ ಮಾಡುವ ಪರಿಸ್ಥಿತಿ ಎದುರಾಗುತ್ತಿದೆ ಎಂದು ಆರೋಪಿಸಿದ್ದಾರೆ.

ಕೆಲವು ಶಾಲೆಗಳಲ್ಲಿ ಶುಲ್ಕ ಪಡೆದು ಎರಡು ರಸೀದಿ ನೀಡಲಾಗುತ್ತಿದೆ. ಒಂದು ಶಾಲೆಯ ಹೆಸರಿನಲ್ಲಿದ್ದರೆ, ಮತ್ತೊಂದು ಸಂಸ್ಥೆಯ ಹೆಸರಿನಲ್ಲಿರುತ್ತದೆ. ಈ ರೀತಿ ಎರಡು ರಸೀದಿ ನೀಡುವುದರ ಬದಲು ಅವರು ನಿಗದಿಪಡಿಸಿದ ಶುಲ್ಕಕ್ಕೆ ಒಂದೇ ರಸೀದಿ ನೀಡಬೇಕು. ಕೆಲವು ಶಾಲೆಗಳಲ್ಲಿ ಹಲವು ವರ್ಷದ ಶುಲ್ಕವನ್ನು ರಿಯಾಯಿತಿ ಮೇಲೆ ಒಂದೇ ಬಾರಿಗೆ ಪಡೆದುಕೊಳ್ಳುತ್ತವೆ. ಇದು ತಪ್ಪಬೇಕು ಎಂದು ವೇದಿಕೆ ಸದಸ್ಯರು ಆಗ್ರಹಿಸಿದರು. ಈ ವೇಳೆ ವೇದಿಕೆ ಸದಸ್ಯರಾದ ಮಂಜುನಾಥ್, ರಾಜೇಶ್, ರವಿಚಂದ್ರ, ಗುರುರಾಜ್ ಶೆಟ್ಟಿ, ಪ್ರಮೋದ್‌ಗೌಡ ಇನ್ನಿತರರಿದ್ದರು.

ರಾಜ್ಯಮಟ್ಟದ ಮಹಿಳಾ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ



ಮೈಸೂರಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ರಾಜ್ಯಮಟ್ಟದ ಮಹಿಳಾ ಕ್ರಿಕೆಟ್ ಪಂದ್ಯಾವಳಿ ನಡೆಯಿತು.

ಮೈಸೂರು, ಮೇ19(ಜಿಎ)–ಮೈಸೂರಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರಿಡಾಂಗಣದಲ್ಲಿ ಮಹಿಳಾ ಕ್ರಿಕೆಟ್ ಆಟಗಾರ್ತಿಯರು ಬೌಂಡರಿ ಬಾರಿಸುವ ಮೂಲಕ ಪರಾಕ್ರಮ ತೋರಿದರು.

ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗ ಹಾಗೂ ಬಾಲ್ ಔಟ್ ಕ್ರಿಕೆಟ್ ಅಕಾಡೆಮಿ ವತಿಯಿಂದ ಮೇ 19ರಿಂದ 23ರವರೆಗೆ ರಾಜ್ಯಮಟ್ಟದ ಮಹಿಳಾ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಿದ್ದು, ಪಂದ್ಯಾವಳಿಯಲ್ಲಿ ಮಹಿಳಾ ಕ್ರಿಕೆಟ್ ಆಟಗಾರ್ತಿಯರ ನಡುವೆ ರೋಚಕ ಪಂದ್ಯಗಳು ನಡೆಯಿತು.

ಟಿ20 ಪಂದ್ಯವಾಗಿದೆ. ಆದರೆ, ಬೆಳಗ್ಗೆ ಜಿಟಿ ಜಿಟಿ ಮಳೆ ಸುರಿದ ಹಿನ್ನೆಲೆಯಲ್ಲಿ ಮೊದಲ ಪಂದ್ಯವನ್ನು ಕೇವಲ 10 ಓವರ್‌ಗೆ ಮೀಸಲಾಯಿತು. ಮುಂದಿನ ಪಂದ್ಯಗಳನ್ನು 15 ಓವರ್‌ಗೆ ವಿಸ್ತರಿಸಲಾಯಿತು. ಮೇ19ರಿಂದ 23ರವರೆಗೆ ನಡೆಯವ ಪಂದ್ಯಾವಳಿಯಲ್ಲಿ ನೈಸ್ ಡೆವಿಲ್, ಬಾಲ್ ಔಟ್ ಕ್ರಿಕೆಟ್ ಅಕಾಡೆಮಿ ಮೈಸೂರು, ಕೇಂಬ್ರಿಡ್ಜ್ ಬೆಂಗಳೂರು, ಕೊಹಿನೂರು ವಿಜಯಪುರ, 22 ಯಾರ್ಡ್ ಎಕ್ಸಲೆನ್ಸ್, ಕಿಯೋಕ್ ಬೆಂಗಳೂರು, ರಾಜಾಜಿನಗರ ಬೆಂಗಳೂರು, ಜವಾನ್ಸ್ ಬೆಂಗಳೂರು, ಎಸ್‌ಎಂಎಸ್ ಮಂಗಳೂರು ಮತ್ತು ಕ್ರೀಡಾ ಕ್ಷೇತ್ರ ಮಕುಶ್ಲಾ ತಂಡಗಳು ಸೆಣಸಾಟ ನಡೆಸಲಿವೆ.

ಮೊದಲ ಪಂದ್ಯದಲ್ಲಿ ನೈಸ್ ಡೆವಿಲ್ ಮತ್ತು ಕೊಹಿನೂರು ವಿಜಯಪುರ ತಂಡಗಳು ಪರಸ್ಪರ ಮುಖಾಮುಖಿಯಾಗಿ ನೈಸ್ ಡೆವಿಲ್ ಜಯ ತನ್ನದಾಗಿಸಿಕೊಂಡಿತ್ತು. ಮೊದಲು ಬ್ಯಾಟಿಂಗ್ ಮಾಡಿದ ಕೊಹಿನೂರು ತಂಡವು 10 ಓವರ್‌ನಲ್ಲಿ 6 ವಿಕೆಟ್ ನಷ್ಟಕ್ಕೆ 48 ರನ್ ಪಡೆದುಕೊಂಡಿತು. ನಂತರ ಬ್ಯಾಟಿಂಗ್ ಮಾಡಿದ ಡೆವಿಲ್ ತಂಡವು 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿತು.

2ನೇ ಪಂದ್ಯದಲ್ಲಿ ಬಾಲ್ ಔಟ್ ಕ್ರಿಕೆಟ್ ಅಕಾಡೆಮಿ ಮೈಸೂರು ಮತ್ತು 22 ಯಾರ್ಡ್ ಎಕ್ಸಲೆನ್ಸ್ ಆಡಿದ ಪಂದ್ಯದಲ್ಲಿ ಟಾಸ್ ಗೆದ್ದ 22 ಯಾರ್ಡ್ ಎಕ್ಸಲೆನ್ಸ್ ತಂಡವು 15 ಓವರ್‌ಗಳಿಗೆ 6 ವಿಕೆಟ್ ನಷ್ಟಕ್ಕೆ 59 ರನ್ ಗಳಿಸಿತ್ತು. ನಂತರ ಬ್ಯಾಟಿಂಗ್ ಮಾಡಿದ ಬಾಲ್ ಔಟ್ ಕ್ರಿಕೆಟ್ ಅಕಾಡೆಮಿ ಮೈಸೂರು 15 ಓವರ್‌ನಲ್ಲಿ 63 ರನ್ ಬಾರಿಸಿ ಕೇವಲ ಒಂದು ವಿಕೆಟ್ ಕಳೆದುಕೊಂಡು 9 ವಿಕೆಟ್‌ಗಳ ಜಯ ತನ್ನದಾಗಿಸಿಕೊಂಡಿತ್ತು.

ದೇಶ – ವಿದೇಶ

ಅಮೆರಿಕದ ಮಾಜಿ ಅಧ್ಯಕ್ಷ ಜೋ ಬೈಡನ್‌ಗೆ ಪ್ರಾಸ್ಟೇಟ್ ಕ್ಯಾನ್ಸರ್



ನ್ಯೂಯಾರ್ಕ್: ಅಮೆರಿಕದ ಮಾಜಿ ಅಧ್ಯಕ್ಷ 82 ವರ್ಷದ ಜೋ ಬೈಡನ್ ಅವರಿಗೆ ಪ್ರಾಸ್ಟೇಟ್ ಕ್ಯಾನ್ಸರ್ ಬಾಧಿಸುತ್ತಿರುವುದನ್ನು ಅವರ ಕಚೇರಿ ಅಧಿಕೃತವಾಗಿ ಪ್ರಕಟಿಸಿದೆ. ಅವರ ವೈದ್ಯಕೀಯ ತಪಾಸಣೆಗಳು ಭಯಾನಕ ಬೆಳವಣಿಗೆಯನ್ನು ಬಹಿರಂಗಪಡಿಸಿದ ಬೆನ್ನಲ್ಲೇ ಕ್ಯಾನ್ಸರ್ ರೋಗಲಕ್ಷಣ ಪತ್ತೆಯಾಗಿದೆ. ಮೂತ್ರನಾಳದ ರೋಗಲಕ್ಷಣಗಳು ಕಳೆದ ವಾರ ಪತ್ತೆಯಾದ ಬೆನ್ನಲ್ಲೇ ವೈದ್ಯರು ತೀವ್ರ ವೈದ್ಯಕೀಯ ಪರೀಕ್ಷೆಗಳನ್ನು ನಡೆಸಿದ್ದರು. ಅವರ ಜನನೇಂದ್ರಿಯ ಗ್ರಂಥಿಯಲ್ಲಿ ಸಣ್ಣ ಗಂಟು ದೈಹಿಕ ತಪಾಸಣೆ ವೇಳೆ ಕಂಡುಬಂದಿತ್ತು. ಇದರಿಂದಾಗಿ ಹೆಚ್ಚಿನ ವೈದ್ಯಕೀಯ ಪರೀಕ್ಷೆ ನಡೆಸಲಾಗಿತ್ತು. ಪ್ರಾಸ್ಟೇಟ್ ಕ್ಯಾನ್ಸರ್ ಇರುವುದನ್ನು ವೈದ್ಯರ ಪತ್ತೆ ಮಾಡಿದ್ದು, ಇದರ ಕಣಗಳು ಈಗಾಗಲೇ ಎಲುಬುಗಳಿಗೂ ಹರಡಿವೆ. ಇದು ಹೆಚ್ಚಿನ ಆಕ್ರಮಣಕಾರಿ ವಿಧಾನದ ರೋಗವಾಗಿದ್ದು, ಇದು ಹಾರ್ಮೋನ್ ಸೂಕ್ಷ್ಮ ಕ್ಯಾನ್ಸರ್ ಆಗಿದೆ. ಲಭ್ಯವಿರುವ ಚಿಕಿತ್ಸೆ ಬಗ್ಗೆ ಬೈಡನ್ ಹಾಗೂ ಅವರ ಕುಟುಂಬ ಸದಸ್ಯರು ವೈದ್ಯರ ಜತೆ ಸಮಾಲೋಚಿಸುತ್ತಿದ್ದಾರೆ. ಪ್ರಾಸ್ಟೇಟ್ ಕ್ಯಾನ್ಸರ್ ತೀವ್ರತೆಯನ್ನು ಗ್ಲೇಸನ್ ಸ್ಕೋರ್‌ನಿಂದ ರೇಟಿಂಗ್ ಮಾಡಲಾಗುತ್ತದೆ.

ಪಾಕ್‌ನ ಐಎಸ್‌ಐಗೆ ರಕ್ಷಣಾ ಮಾಹಿತಿ ರವಾನಿಸಿದ್ದ ಇಬ್ಬರು ಗೂಢಚಾರಿಗಳ ಬಂಧನ



ನವದೆಹಲಿ: ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಪೊಲೀಸ್ ಆಡಳಿತವು ಜಾಗರೂಕ ಸ್ಥಿತಿಯಲ್ಲಿದ್ದು, ಪಾಕಿಸ್ತಾನಿ ಗೂಢಚಾರರ ಮೇಲೆ ನಿರಂತರವಾಗಿ ನಿಗಾವಹಿಸಿವೆ. ಏತನ್ಮಧ್ಯೆ, ಪಂಜಾಬ್ ಪೊಲೀಸರು ಇಬ್ಬರು ಪಾಕಿಸ್ತಾನಿ ಗೂಢಚಾರರನ್ನು ಬಂಧಿಸಿದ್ದಾರೆ. ಈ ಬಗ್ಗೆ ಪಂಜಾಬ್ ಡಿಜಿಪಿ ಗೌರವ್ ಯಾದವ್ ಮಾಹಿತಿ ನೀಡಿದ್ದಾರೆ. ಸೂಕ್ಷ್ಮ ಮಿಲಿಟರಿ ಮಾಹಿತಿ ಸೋರಿಕೆ ಮಾಡುವಲ್ಲಿ ಭಾಗಿಯಾಗಿರುವ ಇಬ್ಬರು ವ್ಯಕ್ತಿಗಳನ್ನು ಬಂಧಿಸುವ ಮೂಲಕ ಗುರುದಾಸ್ಪುರ ಪೊಲೀಸರು ರಾಷ್ಟ್ರೀಯ ಭದ್ರತೆಯನ್ನು ರಾಜಿ ಮಾಡಿಕೊಳ್ಳುವ ಪ್ರಯತ್ನವನ್ನು ವಿಫಲಗೊಳಿಸಿದ್ದಾರೆ ಎಂದು ಟ್ವೀಟ್ ಮಾಡಿದ್ದಾರೆ. ಮೇ 15ರಂದು ಸುಖ್‌ಪ್ರೀತ್ ಸಿಂಗ್ ಮತ್ತು ಕರಣ್‌ಬೀರ್ ಸಿಂಗ್ ಎಂಬುವರು ಪಂಜಾಬ್, ಹಿಮಾಚಲ ಪ್ರದೇಶ ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿನ ಸೈನಿಕರ ಚಲನವಲನಗಳು ಮತ್ತು ಪ್ರಮುಖ ಕಾರ್ಯತಂತ್ರದ ಸ್ಥಳಗಳು ಸೇರಿದಂತೆ ಆಪರೇಷನ್ ಸಿಂಧೂರ್‌ಗೆ ಸಂಬಂಧಿಸಿದ ಮಾಹಿತಿಯನ್ನು ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಜೊತೆ ಹಂಚಿಕೊಳ್ಳುವಲ್ಲಿ ನಿರತರಾಗಿದ್ದಾರೆ ಎಂದು ವಿಶ್ವಾಸಾರ್ಹ ಗುಪ್ತಚರ ಮಾಹಿತಿಗಳು ಸಿಕ್ಕಿದ್ದವು ಎಂದರು.

ಬಲೂಚಿಸ್ತಾನದ ಕಿಲಾ ಅಬ್ದುಲ್ಲಾ ಮಾರುಕಟ್ಟೆಯಲ್ಲಿ ಸ್ಫೋಟ: 2 ಸಾವು



ಬಲೂಚಿಸ್ತಾನ: ಬಲೂಚಿಸ್ತಾನದ ಕಿಲಾ ಅಬ್ದುಲ್ಲಾ ಜಿಲ್ಲೆಯ ಮಾರುಕಟ್ಟೆಯಲ್ಲಿ ಭಾನುವಾರ ಸಂಜೆ ಸ್ಫೋಟ ಸಂಭವಿಸಿದ್ದು, ಇಬ್ಬರು ಸಾವನ್ನಪ್ಪಿದ್ದು, 11 ಮಂದಿ ಗಾಯಗೊಂಡಿರುವ ಘಟನೆ ವರದಿಯಾಗಿದೆ. ಪ್ರಾಥಮಿಕ ತನಿಖೆಯ ಪ್ರಕಾರ ಸ್ಫೋಟಕಗಳನ್ನು ವಾಹನದಲ್ಲಿ ಇಡಲಾಗಿತ್ತು ಎಂದು ಡಿಸಿ ಖಾನ್ ಹೇಳಿದರು. ಕಿಲಾ ಅಬ್ದುಲ್ಲಾದಲ್ಲಿರುವ ಜಿಲ್ಲಾ ಆರೋಗ್ಯ ಕೇಂದ್ರ ಕಚೇರಿಯಲ್ಲಿ ತುರ್ತು ಪರಿಸ್ಥಿತಿ ಘೋಷಿಸಲಾಗಿದ್ದು, ಗಾಯಾಳುಗಳಿಗೆ ವೈದ್ಯಕೀಯ ನೆರವು ನೀಡಲಾಗುತ್ತಿದೆ ಎಂದು ಅವರು ಹೇಳಿದರು. ಕಿಲಾ ಅಬ್ದುಲ್ಲಾ ಲೆವೀಸ್ ರಿಸಲ್ದಾರ್ ಗುಲಾಬ್ ಖಾನ್, ಕಿಲಾ ಅಬ್ದುಲ್ಲಾ ಜಿಲ್ಲೆಯ ಗುಲಿಸ್ತಾನ್ ಪ್ರದೇಶದ ಅಬ್ದುಲ್ ಜಬ್ಬಾರ್ ಮಾರುಕಟ್ಟೆ ಬಳಿ ಸ್ಫೋಟ ಸಂಭವಿಸಿದೆ.


ಸ್ಫೋಟದ ನಂತರ ಲೆವೀಸ್ ಸಿಬ್ಬಂದಿ ಮತ್ತು ಸ್ಥಳದಲ್ಲಿದ್ದ ಜನರು ಗಾಯಾಳುಗಳನ್ನು ರಕ್ಷಿಸಿ ನಂತರ ಜಿಲ್ಲಾ ಆರೋಗ್ಯ ಕೇಂದ್ರ ಚಮನ್‌ಗೆ ಸ್ಥಳಾಂತರಿಸಲಾಯಿತು. ಸ್ಥಳದಿಂದ ಸಾಕ್ಷ್ಯಗಳನ್ನು ಸಂಗ್ರಹಿಸಿದ ಅಧಿಕಾರಿಗಳು ನಂತರ ತನಿಖೆ ಪ್ರಾರಂಭಿಸಿದರು. ಸ್ಫೋಟವನ್ನು ಖಂಡಿಸಿದ ಬಲೂಚಿಸ್ತಾನ ಮುಖ್ಯಮಂತ್ರಿ ಸರ್ಫ್ರಾಜ್ ಬುಗ್ತಿ, ಮೃತರ ಕುಟುಂಬಗಳ ದುಃಖವನ್ನು ಹಂಚಿಕೊಂಡಿದ್ದಾರೆ.

ಶೋಪಿಯಾನ್‌ನಲ್ಲಿ ಇಬ್ಬರು ಉಗ್ರರ ಸಹಚರರ ಬಂಧನ; ಭಾರಿ ಶಸ್ತ್ರಾಸ್ತ್ರ ವಶ



ಜಮ್ಮು–ಕಾಶ್ಮೀರ: ಜಮ್ಮು ಮತ್ತು ಕಾಶ್ಮೀರದ ಶೋಪಿಯಾನ್ ಜಿಲ್ಲೆಯ ಡಿಕೆ ಪೋರಾ ಪ್ರದೇಶದಲ್ಲಿ ಭಾರತೀಯ ಸೇನೆಯ 34 ರಾಷ್ಟ್ರೀಯ ರೈಫಲ್ಸ್, ವಿಶೇಷ ಕಾರ್ಯಾಚರಣೆ ಗುಂಪು ಮತ್ತು ಸಿಆರ್‌ಪಿಎಫ್ 178 ಬೆಟಾಲಿಯನ್ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಇಬ್ಬರು ಉಗ್ರರ ಸಹಚರರನ್ನು ಬಂಧಿಸಲಾಗಿದೆ. ಬಂಧಿತರಿಂದ 2 ಪಿಸ್ತೂಲ್‌ಗಳು, 4 ಗ್ರೆನೇಡ್‌ಗಳು, 43 ಸುತ್ತಿನ ಮದ್ದು ಗುಂಡುಗಳು ಮತ್ತಿತರ ಶಸ್ತ್ರಾಸ್ತ್ರಗಳನ್ನು ಭದ್ರತಾ ಪಡೆಗಳು ವಶಕ್ಕೆ ಪಡೆದಿದ್ದಾರೆ. ಶೋಪಿಯಾನ್ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದು, ಉಗ್ರರ ಸಹಚರರ ಸಂಪರ್ಕಗಳು ಮತ್ತು ಚಟುವಟಿಕೆಗಳ ಕುರಿತು ಹೆಚ್ಚಿನ ಮಾಹಿತಿ ಪಡೆಯಲು ತನಿಖೆ ನಡೆಸುತ್ತಿದ್ದಾರೆ. ಉಗ್ರರ ಸಹಚರರ ಬಂಧನ ಈ ಭಾಗದಲ್ಲಿ ಕಾನೂನುಬಾಹಿರ ಮತ್ತು ವಿಧ್ವಂಸಕ ಚಟುವಟಿಕೆಗಳ ಕುರಿತು ನಡೆಯುತ್ತಿರುವ ತನಿಖೆಯಲ್ಲಿ ಮಹತ್ವದ ಮೈಲಿಗಲ್ಲು ಎನ್ನಲಾಗುತ್ತಿದೆ. ರಾಷ್ಟ್ರೀಯ ಭದ್ರತೆಗೆ ಬೆದರಿಕೆ ತಟಸ್ಥಗೊಳಿಸಲು ಮತ್ತು ಶಾಂತಿ–ಸುವ್ಯವಸ್ಥೆ ಕಾಪಾಡಿಕೊಳ್ಳಲು ಶೋಪಿಯಾನ್ ಪೊಲೀಸರ ದಕ್ಷತೆ ತೋರಿಸುತ್ತಿದೆ.

ಬ್ರೂಕ್ಲಿನ್ ಸೇತುವೆಗೆ ನೌಕಾಪಡೆಯ ತರಬೇತಿ ಹಡಗು ಡಿಕ್ಕಿ: ಇಬ್ಬರು ಸಾವು



ನ್ಯೂಯಾರ್ಕ್: 277 ಪ್ರಯಾಣಿಕರನ್ನು ಹೊತ್ತೊಯ್ಯುತ್ತಿದ್ದ ಮೆಕ್ಸಿಕನ್ ನೌಕಾಪಡೆಯ ಹಡಗು ವಿದ್ಯುತ್ ಕಡಿತಗೊಂಡು ಬ್ರೂಕ್ಲಿನ್ ಸೇತುವೆಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಮೃತಪಟ್ಟು, 19 ಜನರು ಗಾಯಗೊಂಡಿದ್ದಾರೆ ಎಂದು ನ್ಯೂಯಾರ್ಕ್ ನಗರದ ಮೇಯರ್ ಎರಿಕ್ ಆಡಮ್ಸ್ ತಿಳಿಸಿದ್ದಾರೆ.

ಎಕ್ಸ್ ಪೋಸ್ಟ್‌ನಲ್ಲಿ ನಡೆದ ಘಟನೆಯ ವಿವರಗಳನ್ನು ಹಂಚಿಕೊಂಡ ನ್ಯೂಯಾರ್ಕ್ ನಗರದ ಮೇಯರ್, ಸ್ಥಳೀಯ ಕಾಲಮಾನ ಇಂದು ನಸುಕಿನ ಜಾವ ಮೆಕ್ಸಿಕನ್ ನೌಕಾಪಡೆ ಎತ್ತರದ ಹಡಗು ಕ್ಯುಹ್ಟೆಮೊಕ್ ವಿದ್ಯುತ್ ಕಡಿತಗೊಂಡು ಬ್ರೂಕ್ಲಿನ್ ಸೇತುವೆಗೆ ಡಿಕ್ಕಿ ಹೊಡೆದಿದೆ. ಈ ಸಮಯದಲ್ಲಿ ಹಡಗಿನಲ್ಲಿದ್ದ 277 ಜನರಲ್ಲಿ 19 ಜನರಿಗೆ ಗಾಯಗಳಾಗಿದ್ದು, ಅವರಲ್ಲಿ ಇಬ್ಬರು ಗಂಭೀರ ಸ್ಥಿತಿಯಲ್ಲಿದ್ದಾರೆ ಮತ್ತು ಇನ್ನೂ ಇಬ್ಬರು ಮೃತಪಟ್ಟಿದ್ದಾರೆ. ಇದಕ್ಕೂ ಮೊದಲು ನ್ಯೂಯಾರ್ಕ್ ಪೊಲೀಸ್ ಇಲಾಖೆ ಮುಖ್ಯಸ್ಥ ವಿಲ್ಸನ್ ಅರಾಂಬೋಲ್ಸ್ ಗೋಷ್ಠಿಯಲ್ಲಿ ವಿವರ ನೀಡಿ, ಹಡಗು ರಾತ್ರಿ 8.20ರ ಸುಮಾರಿಗೆ ವಿದ್ಯುತ್ ಕಡಿತಗೊಂಡಿದೆ ಎಂದು ಹೇಳಿದರು, ಕ್ಯಾಪ್ಟನ್ ಹಡಗನ್ನು ಕುಶಲತೆಯಿಂದ ನಡೆಸುತ್ತಿದ್ದರು. ಇದು ಹಡಗನ್ನು ಸೇತುವೆಯ ಕಂಬದ ಕಡೆಗೆ ತಳ್ಳಿ ಹಡಗಿನ ಮಾಸ್ಟ್ ಸೇತುವೆಗೆ ಡಿಕ್ಕಿ ಹೊಡೆದಿದೆ ಎಂದು ಸಿಎನ್‌ಎನ್ ವರದಿ ಮಾಡಿದೆ.

ಸಾಧನಾ ಸಮಾವೇಶಕ್ಕೆ ಅರ್ಥವೇ ಇಲ್ಲ: ಪ್ರತಾಪ್ ಸಿಂಹ

ಮಡಿಕೇರಿ, ಮೇ 19– (ಪಿಎಸ್) ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರಕಾರ 'ಸಾಧನಾ ಸಮಾವೇಶ' ನಡೆಸುತ್ತಿರುವುದರಲ್ಲಿ ಯಾವುದೇ ಅರ್ಥವಿಲ್ಲ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಕುಹಕವಾಡಿದ್ದಾರೆ

ರಾಜ್ಯ ಸರ್ಕಾರ ಮಿತಿ ಮೀರಿ ಸಾಲ ಮಾಡಿ ರಾಜ್ಯವನ್ನು ದಿವಾಳಿ ಮಾಡಿದೆ. ರಾಜ್ಯದ ಪ್ರತಿ ವ್ಯಕ್ತಿಯ ಮೇಲೆ 12 ಸಾವಿರ ರೂ. ಸಾಲದ ಹೊರೆಯಿದೆ ರಾಜ್ಯದ ಜನತೆಗೆ ನೀಡಿರುವ ಕೊಡುಗೆ ಇದು. ಸಾಲ ಮಾಡಿ ರಾಜ್ಯವನ್ನು ದಿವಾಳಿ ಮಾಡಿರುವುದೇ ಇವರ ಸಾಧನೆಯಾಗಿದ್ದು, ಇದಕ್ಕಾಗಿಯೇ ಸಮಾವೇಶ ಆಯೋಜನೆ ಮಾಡಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ವ್ಯಂಗ್ಯವಾಡಿದರು.

ಶಕ್ತಿ ಯೋಜನೆಯಿಂದಾಗಿ ಲಾಭದಲ್ಲಿದ್ದ ಕೆ.ಎಸ್.ಆರ್.ಟಿ.ಸಿ ನಷ್ಟದಲ್ಲಿ ಮುಳುಗಿದೆ. ಬಸ್ ಡ್ರೈವರ್, ಕಂಡಕ್ಟರ್‌ಗಳಿಗೆ ವೇತನ ಕೊಡಲೂ ಸಾಧ್ಯವಾಗದ ಹೀನಾಯ ಸ್ಥಿತಿಗೆ ಸರ್ಕಾರ ತಲುಪಿದೆ. ಅನ್ನಭಾಗ್ಯ ಯೋಜನೆಗೆ ಅಕ್ಕಿಯನ್ನು ಕೇಂದ್ರದಿಂದ ಖರೀದಿಸಲೂ ಕೂಡ ರಾಜ್ಯ ಸರ್ಕಾರದ ಬಳಿ ಹಣವಿಲ್ಲ. ಉಚಿತ ಕರೆಂಟ್ ಕೊಡುತ್ತೇವೆ ಎಂದು ಹೇಳಿಕೊಂಡ ಸರ್ಕಾರ ಸರಿಯಾಗಿ ಕರೆಂಟ್ ಕೂಡ ಕೊಡುತ್ತಿಲ್ಲ. ವಿದ್ಯುತ್ ನಿಗಮಗಳು ಕೂಡ ನಷ್ಟದಲ್ಲಿ ಮುಳುಗಿ ದಿವಾಳಿಯಾಗಿವೆ ಎಂದು ಅವರು ಆಕ್ರೋಷ ವ್ಯಕ್ತಪಡಿಸಿದರು.


ಕಾಂಗ್ರೆಸ್ ಸರಕಾರದ ವೈಫಲ್ಯಗಳ ಬಗೆಗಿನ ಪೋಸ್ಟರನ್ನು ಜಿಲ್ಲಾ ಬಿಜೆಪಿ ಸೋಮವಾರ ಬಿಡುಗಡೆಗೊಳಿಸಿತು.

ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಮಾತನಾಡಿ, ಎರಡು ವರ್ಷಗಳಲ್ಲಿ ಕೊಡಗಿನ ಅಭಿವೃದ್ಧಿಗೆ ಕಾಂಗ್ರೆಸ್‌ನ ಇಬ್ಬರೂ ಶಾಸಕರು ತಂದಿರುವ ಅನುದಾನಗಳ ಬಗ್ಗೆ ಶ್ವೇತ ಪತ್ರ ಹೊರಡಿಸಲಿ ಎಂದು ಸವಾಲು ಹಾಕಿದರು. ಬಿಜೆಪಿ ಸರಕಾರ ಜಾರಿಗೆ ತಂದಿದ್ದ ಯೋಜನೆಗಳನ್ನು ರದ್ದು ಮಾಡಿರುವ ರಾಜ್ಯ ಕಾಂಗ್ರೆಸ್ ಸರಕಾರ ರೈತ ಮತ್ತು ಜನ ವಿರೋಧಿ ಸರಕಾರವಾಗಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಮಾಜಿ ಶಾಸಕ ಕೆ.ಜಿ.ಬೋಪಯ್ಯ ಮಾತನಾಡಿ, ಕಾಂಗ್ರೆಸ್ ಸರ್ಕಾರ ಯಾವುದೇ ಸಾಧನೆ ಮಾಡದೇ ಹೋದರೂ ಸಾಧನೆ ಮಾಡಿದ್ದೇವೆ ಎಂದು ಬೊಗಳೆ ಬಿಡಲು ಸಾಧನಾ ಸಮಾವೇಶ ಆಯೋಜಿಸಿದೆ ಎಂದು ಟೀಕಿಸಿದರು. ಕೊಡಗಿನ ಜನತೆಯನ್ನು ಶಾಸಕರು ಎಲ್ಲಾ ಸಂದರ್ಭದಲ್ಲಿ ಮೂರ್ಖರನ್ನಾಗಿ ಮಾಡಲು ಸಾಧ್ಯವಿಲ್ಲ. ಕೊಡಗಿನ ಜನತೆಗೂ ಸತ್ಯದ ಅರಿವಾಗುತ್ತಿದೆ ಎಂದು ಹೇಳಿದರು.

ಇದೇ ಸಂದರ್ಭ ಕಾಂಗ್ರೆಸ್ ಸರಕಾರದ ವೈಫಲ್ಯಗಳ ಬಗೆಗಿನ ಪೋಸ್ಟರನ್ನು ಬಿಡುಗಡೆಗೊಳಿಸಲಾಯಿತು. ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿಕಾಳಪ್ಪ, ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ, ನೆಲ್ಲೀರ ಚಲನ್ ಸುದ್ದಿಗೋಷ್ಠಿಯಲ್ಲಿದ್ದರು.

ಜಿಲ್ಲಾ ಮಟ್ಟದ ಅರಣ್ಯ ಹಕ್ಕು ಸಮಿತಿ ಸಭೆ


ಜಿಲ್ಲಾ ಮಟ್ಟದ ಅರಣ್ಯ ಹಕ್ಕು ಸಮಿತಿ ಸಭೆ ಸೋಮವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆಯಿತು

ಮಡಿಕೇರಿ: ಅರಣ್ಯ ಹಕ್ಕು ಕಾಯ್ದೆಯಡಿ ಇಂದು ನಡೆದ ಜಿಲ್ಲಾ ಮಟ್ಟದ ಅರಣ್ಯ ಹಕ್ಕು ಸಮಿತಿ ಸಭೆಯಲ್ಲಿ ಪರಿಶಿಷ್ಟ ಪಂಗಡದ 8 ವೈಯಕ್ತಿಕ ಹಾಗೂ 8 ಸಮುದಾಯ ಹಕ್ಕುಗಳ ಅರ್ಜಿಗಳಿಗೆ ಅನುಮೋದನೆ ದೊರೆಯಿತು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಸಭೆಯಲ್ಲಿ ಮಾತನಾಡಿದ ಐಟಿಡಿಪಿ ಇಲಾಖಾ ಅಧಿಕಾರಿ ಎಸ್.ಹೊನ್ನೇಗೌಡ ಸಮುದಾಯ ಸಂಪನ್ಮೂಲ ಅರ್ಜಿಗಳಿಗೆ ಉಪ ವಿಭಾಗ ಮಟ್ಟದಲ್ಲಿ ಅನುಮೋದನೆ ದೊರೆತಿದ್ದು, ಜಿಲ್ಲಾ ಮಟ್ಟದಲ್ಲಿ ಅನುಮೋದಿಸಬೇಕಿದೆ ಎಂದರು.

ಮರು ಪರಿಶೀಲನೆಗಾಗಿ ಬಾಕಿ ಇರುವ ಅರ್ಜಿಗಳು ನಾಲ್ಕೇರಿ ಗ್ರಾ.ಪಂ.ವ್ಯಾಪ್ತಿಯ ನಾಗರಹೊಳೆ ವ್ಯಾಪ್ತಿಯ ತುಂಡು ಮುಂಡಗೆ ಕೊಲ್ಲಿ, ನಿಟ್ಟೂರು ಗ್ರಾ.ಪಂ. ವ್ಯಾಪ್ತಿಯ ತಟ್ಟೆಕೆರೆ, ಕುಟ್ಟ ಗ್ರಾ.ಪಂ. ವ್ಯಾಪ್ತಿಯ ದೇವರಕಾಡು, ಸಿದ್ದಾಪುರ ಗ್ರಾ.ಪಂ. ವ್ಯಾಪ್ತಿಯ ಅವರೆಗುಂದ ಈ ಹಾಡಿಗಳಲ್ಲಿ ಮರು ಪರಿಶೀಲನೆಗೆ ಬಾಕಿ ಇದ್ದು, ಕಾನೂನು ರೀತ್ಯಾ ಕ್ರಮ ತೆಗೆದು ಕೊಳ್ಳುವಂತೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್, ಉಪ ವಿಭಾಗಾಧಿಕಾರಿ ವಿನಾಯಕ ನರ್ವಡೆ, ನಾಗರಹೊಳೆ ಹುಲಿ ಯೋಜನಾ ವಿಭಾಗದ ನಿರ್ದೇಶಕರಾದ ಸೀಮಾ, ಉಪ ಅರಣ್ಯ ಸಂರಕ್ಷಣಾಧಿಕಾರಿ ನೆಹರು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಾದ ಅನನ್ಯ ಕುಮಾರ್, ಲಕ್ಷ್ಮೀಕಾಂತ್, ಭೂದಾಖಲೆಗಳ ಉಪ ನಿರ್ದೇಶಕ ನಾರಾಯಣ ಸ್ವಾಮಿ, ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ಗುಂಡು ಹಾರಿಸಿಕೊಂಡು ವಿವಾಹಿತ ಯುವಕ ಆತ್ಮಹತ್ಯೆ

ಮಡಿಕೇರಿ, ಮೇ 19– ಗುಂಡು ಹಾರಿಸಿಕೊಂಡು ವಿವಾಹಿತ ಯುವಕನೊಬ್ಬ ಆತ್ಮಹತ್ಯೆ ಮಾಡಿಕೊಂಡ ಘಟನೆ ಐಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಯಡವಾರೆ ಗ್ರಾಮದಲ್ಲಿ ನಡೆದಿದೆ.

ಮಧು (ಅಶೋಕ 35) ಮೃತ ದುರ್ದೈವಿಯಾಗಿದ್ದು, ಮನೆಯಲ್ಲಿ ಯಾರೂ ಇಲ್ಲದ ಸಂದರ್ಭ ಮದ್ಯ ಸೇವಿಸಿ ತಲೆಯ ಭಾಗಕ್ಕೆ ಒಂಟಿ ನಳಿಕೆ ಬಂದೂಕಿನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಮೂರು ವರ್ಷದ ಪುತ್ರಿಯ ಅನಾರೋಗ್ಯದ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ವಾರದ ಹಿಂದೆ ಪತ್ನಿ ಮತ್ತು ಪುತ್ರಿ ಬೆಂಗಳೂರಿಗೆ ತೆರಳಿದ್ದರು. ನೆನ್ನೆ ದಿನ ಮೃತನ ತಾಯಿ ಕೂಡ ಬೆಂಗಳೂರಿಗೆ ತೆರಳಿದ್ದರು ಎನ್ನಲಾಗಿದೆ. ಘಟನೆ ಕುರಿತು ಸೋಮವಾರಪೇಟೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ.

ಗೋಲ್ಡನ್ ವಾಚ್ ಹಿಂದಿರುಗಿಸಿ ಕರ್ತವ್ಯ ನಿಷ್ಠೆ ಮೆರೆದ ಎಎಸ್‌ಐ ಎಂ.ಬಿ.ಪೆಮ್ಮಯ್ಯ



ಮಡಿಕೇರಿ: ಕಾವೇರಿಯ ಉಗಮ ಸ್ಥಾನ ತಲಕಾವೇರಿಯಲ್ಲಿ ಕಳೆದು ಹೋಗಿದ್ದ ಗೋಲ್ಡನ್ ವಾಚ್ ಮತ್ತೆ ಭಕ್ತನ ಕೈ ಸೇರಿದೆ.

ಚೆನ್ನೈ ಮೂಲದ ನಿವಾಸಿ ಜಯ ಪಾರ್ವತಿ ಎಂಬುವವರು ತಲಕಾವೇರಿ ದೇವಾಲಯದಲ್ಲಿ ರೂ.5 ಲಕ್ಷ ಮೌಲ್ಯದ ಗೋಲ್ಡನ್ ವಾಚ್ ಅನ್ನು ಕಳೆದುಕೊಂಡಿದ್ದರು. ಭಾಗಮಂಡಲ ಠಾಣೆಯ ಎಎಸ್‌ಐ ಎಂ.ಬಿ.ಪೆಮ್ಮಯ್ಯ ಅವರಿಗೆ ಈ ವಾಚ್ ಸಿಕ್ಕಿದ್ದು ಜಯ ಪಾರ್ವತಿ ಅವರಿಗೆ ಮರಳಿಸುವ ಮೂಲಕ ಕರ್ತವ್ಯ ನಿಷ್ಠೆ ತೋರಿದ್ದಾರೆ.

ಇಂದು ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು ವಾರ್ಷಿಕೋತ್ಸವ



ಮಡಿಕೇರಿ, ಮೇ 19–ಮಂಗಳೂರು ಹಾಗೂ ಕೊಡಗು ವಿಶ್ವವಿದ್ಯಾಲಯ, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ವಾರ್ಷಿಕೋತ್ಸವವು ಮೇ 20ರ ಬೆಳಗ್ಗೆ 10.30ಕ್ಕೆ ಕಾಲೇಜು ಸಭಾಂಗಣದಲ್ಲಿ ನಡೆಯಲಿದೆ.

ಕುಲಪತಿ ಅಶೋಕ ಸಂಗಪ್ಪ ಆಲೂರ, ಶಾಸಕ ಡಾ.ಮಂತರ್‌ಗೌಡ, ಕುಲಸಚಿವ ಪ್ರೊ.ಎಂ.ಸುರೇಶ, ಕಾಲೇಜಿನ ಪ್ರಾಂಶುಪಾಲ ಮೇಜರ್ ಪ್ರೊ.ರಾಘವ ಡಿ. ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಬೊಳ್ಳಜ್ಜಿರ ಬಿ.ಅಯ್ಯಪ್ಪ, ಕಾಲೇಜಿನ ಪೋಷಕ–ಶಿಕ್ಷಕ ಸಂಘದ ಉಪಾಧ್ಯಕ್ಷ ಜಯಂತಿ ರೈ, ವಿದ್ಯಾರ್ಥಿ ಸಂಘದ ಸಲಹೆಗಾರ ಪ್ರೊ ಶ್ರೀಧರ ಹೆಗಡೆ ಪಾಲ್ಗೊಳ್ಳಲಿದ್ದಾರೆ.

ಚೆಕ್ಕೇರ ಕ್ರಿಕೆಟ್ ನಮ್ಮೆ ಅರಮಣಮಡ, ನೆರವಂಡ ತಂಡಗಳಿಗೆ ಚಾಂಪಿಯನ್ ಟ್ರೋಫಿ

ಗೋಣಿಕೊಪ್ಪ (ವಸಂತ್)– ಹುದಿಕೇರಿ ಜನತಾ ಪ್ರೌಢಶಾಲಾ ಮೈದಾನ ಮತ್ತು ಕಿರಿಯ ಪ್ರಾಥಮಿಕ ಶಾಲಾ ಮೈದಾನಗಳಲ್ಲಿ ನಡೆದ ಕೊಡವ ಕೌಟುಂಬಿಕ ಚೆಕ್ಕೇರ ಕ್ರಿಕೆಟ್ ನಮ್ಮೆಯಲ್ಲಿ ಮಹಿಳೆಯರಲ್ಲಿ ಅರಮಣಮಡ, ಪುರುಷರಲ್ಲಿ ನೆರವಂಡ ತಂಡ ಚಾಂಪಿಯನ್ ಸ್ಥಾನ ಅಲಂಕರಿಸಿದೆ. ಮಹಿಳೆಯರ ಓಡಿಯಂಡ ತಂಡ ಮತ್ತು ಪುರುಷರ ಅಚ್ಚಪಂಡ ತಂಡಗಳು ರನ್ನರ್ ಅಪ್‌ಗೆ ತೃಪ್ತಿಪಟ್ಟುಕೊಂಡಿತು.

ಮಹಿಳೆಯರ ಅಂತಿಮ ಪಂದ್ಯದಲ್ಲಿ ಅರಮಣಮಡ ತಂಡವು ಓಡಿಯಂಡ ತಂಡವನ್ನು 76 ರನ್‌ಗಳಿಂದ ಮಣಿಸಿ ಚಾಂಪಿಯನ್ ಸ್ಥಾನ ಅಲಂಕರಿಸಿತು.

ಪುರುಷರ ವಿಭಾಗದಲ್ಲಿ ನೆರಮಂಡ ತಂಡವು ಅಚ್ಚಪಂಡ ತಂಡವನ್ನು 8 ವಿಕೆಟ್‌ಗಳಿಂದ ಮಣಿಸಿ ಕಪ್ ಗೆದ್ದುಕೊಂಡಿತು. ಪುರುಷರಲ್ಲಿ ಅಚ್ಚಪಂಡ ಅಯ್ಯಪ್ಪ, ಮಹಿಳೆಯರಲ್ಲಿ ಓಡಿಯಂಡ ರೋಹಿಣಿ ದೇಚಮ್ಮ ಸರಣಿ ಶ್ರೇಷ್ಠ ಪ್ರಶಸ್ತಿ ಪಡೆದುಕೊಂಡರು. ಫೈನಲ್ ಪಂದ್ಯಗಳ ಪಂದ್ಯ ಶ್ರೇಷ್ಠರಾಗಿ ನೆರವಂಡ ವರುಣ್, ಅರಮಣಮಡ ಟೀನಾ ಸುಭಾಶ್ ಪ್ರಶಸ್ತಿ ಪಡೆದುಕೊಂಡರು. ನೆರವಂಡ ವರುಣ್ ಹಾಗೂ ಚೆಕ್ಕೇರ ಮಹಿಮ ಮಾಚಮ್ಮ ಬೆಸ್ಟ್ ಬೌಲರ್, ಚಿಮ್ಮಣಮಡ ದೃತಿ ಹಾಗೂ ಹರಿಹರ ಮುಕ್ಕಾಟೀರ ಅಂಜನ ಬ್ಯಾಟರ್, ಕರವಟ್ಟೀರ ಗುರು ಹಾಗೂ ಕೆದಮುಳ್ಳೂರ್ ಮಾಳೇಟಿರ ಸಾಹಿತ್ಯ ಬೆಸ್ಟ್ ಆಲ್‌ರೌಂಡರ್, ಕೆದಮುಳ್ಳೂರ್ ಮಾಳೇಟಿರ ಅನ್ಷುಲ್ ಹಾಗೂ ಅರಮಣಮಡ ದರ್ಶಿನಿ ಎಮರ್ಜಿಂಗ್ ಪ್ಲೇಯರ್ ಗೌರವ ಪಡೆದುಕೊಂಡರು. ಶಾಸಕ ಎಸ್.ಪೊನ್ನಣ್ಣ ಉದ್ಘಾಟಿಸಿ ಶುಭಕೋರಿದರು.

ಸಮಾರೋಪ : ಮುಖ್ಯ ವಿದ್ಯುತ್ ಪರಿವೀಕ್ಷಕ ತೀತಿರ ರೋಷನ್ ಅಪ್ಪಚ್ಚು, ಕೊಡವ ಕ್ರಿಕೆಟ್ ಅಕಾಡೆಮಿ ಅಧ್ಯಕ್ಷ ಕೀತಿಯಂಡ ಕಾರ್ಸನ್ ಕಾರ್ಯಪ್ಪ, ಚೆಕ್ಕೇರ ಕ್ರಿಕೆಟ್ ನಮ್ಮೆ ಅಧ್ಯಕ್ಷ ಚೆಕ್ಕೇರ ಚಂದ್ರಪ್ರಕಾಶ್ ಮಾತನಾಡಿದರು.


ಮಹಿಳಾ ಚಾಂಪಿಯನ್ ಪ್ರಶಸ್ತಿ ಗೆದ್ದ ಅರಮಣಮಡ ಒಕ್ಕ ತಂಡ

ಮುಂದಿನ ವರ್ಷ ಮುಕ್ಕಾಟೀರ (ಬೇತ್ರಿ) ಕಪ್

ಮುಂದಿನ ವರ್ಷ ಕೊಡವ ಕ್ರಿಕೆಟ್ ಆತಿಥ್ಯ ವಹಿಸಿರುವ ಬೇತ್ರಿ ಮುಕ್ಕಾಟೀರ ಒಕ್ಕಕ್ಕೆ ಕೊಡವ ಕ್ರಿಕೆಟ್ ಅಕಾಡೆಮಿ ಧ್ವಜವನ್ನು ಕೊಡವ ಕ್ರಿಕೆಟ್ ಅಕಾಡೆಮಿ ಅಧ್ಯಕ್ಷ ಕೀತಿಯಂಡ ಕಾರ್ಸನ್ ಕಾರ್ಯಪ್ಪ, ಚೆಕ್ಕೇರ ಕ್ರಿಕೆಟ್ ನಮ್ಮೆ ಅಧ್ಯಕ್ಷ ಚೆಕ್ಕೇರ ಚಂದ್ರಪ್ರಕಾಶ್, ಮುಕ್ಕಾಟಿರ ಒಕ್ಕ ಅಧ್ಯಕ್ಷ ಮಧು ದೇವಯ್ಯ ಅವರಿಗೆ ಹಸ್ತಾಂತರ ಮಾಡಿದರು.

ನ್ಯಾಯಾಧೀಶರಿಬ್ಬರಿಗೆ ಬೀಳ್ಕೊಡುಗೆ



ವಿರಾಜಪೇಟೆ: ಬೇರೆಡೆಗೆ ವರ್ಗಾವಣೆಗೊಂಡ ಇಬ್ಬರು ನ್ಯಾಯಾಧೀಶರಿಗೆ ನ್ಯಾಯಾಲಯದ ಆವರಣದಲ್ಲಿ ಬೀಳ್ಕೊಡುಗೆ ಕಾರ್ಯಕ್ರಮವನ್ನು ವಕೀಲರ ಸಂಘ ಹಮ್ಮಿಕೊಂಡಿತ್ತು.

ಮೂರು ವರ್ಷಗಳಿಂದ ನ್ಯಾಯಾಲಯದಲ್ಲಿ ಕರ್ತವ್ಯ ನಿರ್ವಹಿಸಿದ್ದ 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಸ್. ಸುಜಾತ ಅವರು ಬೆಂಗಳೂರಿಗೆ ಹಾಗೂ ಪ್ರಧಾನ ಸಿವಿಲ್ ನ್ಯಾಯಾಧೀಶ ಸಂತೋಷ್ ಕೊಠಾರಿ ಹೆಚ್.ಡಿ.ಕೋಟೆಗೆ ವರ್ಗಾವಣೆಗೊಂಡ ಹಿನ್ನಲೆಯಲ್ಲಿ ಏರ್ಪಡಿಸಲಾಗಿತ್ತು.

ಸನ್ಮಾನ ಸ್ವೀಕರಿಸಿದ ನ್ಯಾಯಾಧೀಶರು ಮಾತನಾಡಿ ವಿರಾಜಪೇಟೆಗೆ ಬರುವ ಸಂದರ್ಭ ದೂರದ ಊರು ಎಂಬ ಭಯ ಇತ್ತು ಬಂದ ನಂತರ ಈ ಕೊಡಗಿನ ಪರಿಸರ ಸೌಂದರ್ಯದಲ್ಲಿ ಕೆಲಸಮಾಡಲು ಬಹಳ ಸಂತಸವಾಗಿ ಮೂರು ವರ್ಷ ಕಳೆದೆವು ಎಂದು ಮೆಲುಕು ಹಾಕಿದರು.

ವಕೀಲರ ಸಂಘದ ಅಧ್ಯಕ್ಷ ಸಿ.ಕೆ.ಪೊವಣ್ಣ ಅಧ್ಯಕ್ಷತೆ ವಹಿಸಿದ್ದರು, ಅತಿಥಿಗಳಾಗಿ ಹಿರಿಯ ಸಿವಿಲ್ ನ್ಯಾಯಧೀಶ ಆರ್.ಮಂಜುನಾಥ್ ಮತ್ತು ಪ್ರಧಾನ ಸಿವಿಲ್ ನ್ಯಾಯಾಧೀಶ ಪ್ರದೀಪ್ ಪೊತೆದಾರ್ ಸಭೆಯನ್ನುದ್ದೇಶಿಸಿ ಮಾತನಾಡಿದರು.

ವೇದಿಕೆಯಲ್ಲಿ ವಕೀಲರ ಸಂಘದ ಉಪಾಧ್ಯಕ್ಷ ಬಿ.ಎನ್. ಸುಬ್ಬಯ್ಯ, ಕಾರ್ಯದರ್ಶಿ ಎನ್.ಎಸ್.ಪ್ರಶಾಂತ್, ಜಂಟಿ ಕಾರ್ಯದರ್ಶಿ ಬಿ.ಎನ್.ಜಗದೀಶ್, ಖಜಾಂಚಿ ಹಜೀರಾ ಶರೀಫ್, ಸದಸ್ಯ ಕೆ.ಸಿ.ಪ್ರದ್ವೀಮ್ನಾ, ಅನುಪಮ ಕಿಶೋರ್, ವಿ.ಎಸ್. ಪ್ರೀತಮ್, ಸಿ.ವಿಜಯಲಕ್ಷ್ಮಿ, ಸಿ.ಕೆ.ಪೊನ್ನಣ್ಣ, ಬಿ.ಟಿ. ಗೀತಾ ಹಾಗೂ ವಕೀಲರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಜಿಲ್ಲೆಯಾದ್ಯಂತ ರೆಡ್ ಅಲರ್ಟ್ ಘೋಷಣೆ

ಮಡಿಕೇರಿ: ಜಿಲ್ಲೆಯಾದ್ಯಂತ ಹವಾಮಾನ ಇಲಾಖೆ 'ರೆಡ್ ಅಲರ್ಟ್' ಘೋಷಿಸಿದೆ. ಸೋಮವಾರ ಮತ್ತು ಮಂಗಳವಾರ ಜಿಲ್ಲೆಯಲ್ಲಿ ಭಾರಿ ಮಳೆ ಸುರಿಯುವ ಸಾಧ್ಯತೆ ಇದೆ ಎಂದು ಸೂಚಿಸಲಾಗಿದೆ. ಈ ಅವಧಿಯಲ್ಲಿ 204.5 ಮಿಮೀಗೂ ಅಧಿಕ ಮಳೆ ಸುರಿಯಬಹುದು ಎಂದು ಹವಾಮಾನ ಇಲಾಖೆ ಅಂದಾಜಿಸಿದೆ. ಜಿಲ್ಲೆಯ ವಿವಿಧ ಭಾಗಗಳಲ್ಲಿ ದಟ್ಟ ಮೋಡ ಕವಿದ ವಾತಾವರಣವಿದ್ದು, ಮೇ ತಿಂಗಳ ಎರಡನೇ ವಾರದಲ್ಲೇ ರೆಡ್ ಅಲರ್ಟ್ ಘೋಷಿಸುತ್ತಿರುವುದು ಉತ್ತಮ ಮುಂಗಾರಿನ ಆರಂಭ ಎಂದು ನಿರೀಕ್ಷಿಸಲಾಗಿದೆ.

2 ವರ್ಷದಲ್ಲಿ ಕಾಂಗ್ರೆಸ್ ಸರ್ಕಾರದ ಸಾಧನೆ ಶೂನ್ಯ


ಕಾಂಗ್ರೆಸ್ ಸಮಾವೇಶ ವಿರುದ್ದದ ಭಿತ್ತಿಪತ್ರವನ್ನು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಬಿಡುಗಡೆ ಮಾಡಿದರು

ಚಾಮರಾಜನಗರ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಎರಡು ವರ್ಷದಲ್ಲಿ ಶೂನ್ಯ ಸಾಧನೆ ಮಾಡಿದೆ ಎಂದು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ವ್ಯಂಗ್ಯವಾಡಿದ್ದಾರೆ.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮಿತಿಮೀರಿದ ಭ್ರಷ್ಟಾಚಾರದ ಜೊತೆಗೆ ಅಗತ್ಯ ವಸ್ತುಗಳ ಬೆಲೆಯೇರಿಕೆ ಮಾಡಿದೆ. ಚುನಾವಣೆ ಸಂದರ್ಭದಲ್ಲಿ ಅನಿವಾರ್ಯವಾಗಿ, ತುರ್ತಾಗಿ ಘೋಷಣೆ ಮಾಡಿದ 5 ಗ್ಯಾರಂಟಿಗಳು ಜನರಿಗೆ ಸಮರ್ಪಕವಾಗಿ ತಲುಪುತ್ತಿಲ್ಲ. ದಲಿತರಿಗೆ ಮೀಸಲಿಟ್ಟಿದ್ದ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಂಡಿದ್ದು, ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತವಾಗಿದ್ದರೂ, ರಾಜ್ಯ ಸರ್ಕಾರ ಮೇ 20ರಂದು ಹಂಪೆಯಲ್ಲಿ ಎರಡು ವರ್ಷದ ಸಾಧನಾ ಸಮಾವೇಶ ನಡೆಸುತ್ತಿದ್ದು, ಸಾಧನೆ ಸಮಾವೇಶದ ಬದಲೂ, ಜನತೆಯ ವೇದನಾ ಸಮಾವೇಶ ಮಾಡಬೇಕು ಎಂದು ಮೂದಲಿಸಿ ರಾಜ್ಯಸರ್ಕಾರ ಜನತೆಗೆ ಮಾಡುತ್ತಿರುವ ಮೋಸ ವಂಚನೆ ದ್ರೋಹಗಳ ಕುರಿತು ಪಕ್ಷದ ವತಿಯಿಂದ ಅರಿವು ಮೂಡಿಸುವ ಮೂಲಕ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಶ್ವೇತಪತ್ರ ಹೊರಡಿಸಿ: ರಾಜ್ಯಸರ್ಕಾರ ಎರಡುವರ್ಷದ ಅವಧಿಯಲ್ಲಿ ಸರ್ಕಾರದ ಸಾಧನೆ ಬಿಂಬಿಸುವ ಜಾಹೀರಾತುಗಳನ್ನು ಮಾಧ್ಯಮಗಳಿಗೆ ನೀಡುತ್ತಾ ಬಂದಿದೆ. ಇದಕ್ಕೆ ಎಷ್ಟುಹಣ ವೆಚ್ಚಮಾಡಲಾಗಿದೆ ಕುರಿತು ಶ್ವೇತಪತ್ರ ಹೊರಡಿಸಬೇಕು ಎಂದು ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಆಗ್ರಹಿಸಿದರು.

ಕಾಂಗ್ರೆಸ್ ಸರ್ಕಾರದ ಸಾಧನಾ ಸಮಾವೇಶ ವಿರುದ್ದದ ಭಿತ್ತಿಪತ್ರವನ್ನು ಬಿಡುಗಡೆ ಮಾಡಲಾಯಿತು.

ಗೋಷ್ಠಿಯಲ್ಲಿ ಎಸ್ಸಿ ಮೋರ್ಚಾ ಕಾರ್ಯದರ್ಶಿ ಪರಮಾನಂದ, ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನಕುಮಾರ್, ಕೇಂದ್ರ ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರು, ಕಾಡಾ ಮಾಜಿ ಅಧ್ಯಕ್ಷ ನಿಜಗುಣರಾಜು, ಜಿಲ್ಲಾ ಪ್ರದಾನ ಕಾರ್ಯದರ್ಶಿ ಹೊನ್ನೂರು ಮಹದೇವ ಸ್ವಾಮಿ, ಮೂಡ್ನಾಕೂಡು ಮಹದೇವ ಸ್ವಾಮಿ, ಪಿ.ವೃಷಭೇಂದ್ರಪ್ಪ, ಬಿಜೆಪಿ ವಕ್ತಾರ ಕಾಡಳ್ಳಿ ಕುಮಾರ್ ಹಾಜರಿದ್ದರು.

ಗುಂಡ್ಲುಪೇಟೆಯಲ್ಲಿ ಅದ್ಧೂರಿ ಬಸವ ಜಯಂತ್ಯುತ್ಸವ

ಗುಂಡ್ಲುಪೇಟೆ, ಮೇ 19– (ಸೋಮ್.ಜಿ) ಇಲ್ಲಿನ ವೀರಶೈವ ಲಿಂಗಾಯತ ಮಹಾಸಭಾ ಹಾಗೂ ಸಂಘಟನೆಗಳ ವತಿಯಿಂದ ಪಟ್ಟಣದಲ್ಲಿ ಸೋಮವಾರ ಆಯೋಜಿಸಿದ್ದ ಶ್ರೀ ಬಸವ ಜಯಂತೋತ್ಸವವು ಸಹಸ್ರಾರು ಮಂದಿ ನೇತೃತ್ವದಲ್ಲಿ ಅದ್ದೂರಿಯಾಗಿ ನೆರವೇರಿತು.

ಪಟ್ಟಣದ ಜೆಎಸ್‌ಎಸ್ ಕಾಲೇಜು ಆವರಣದಲ್ಲಿ ವಿವಿಧ ಹೂವುಗಳಿಂದ ಅಲಂಕೃತವಾಗಿದ್ದ ಬೆಳ್ಳಿ ರಥದಲ್ಲಿ ಶ್ರೀ ಬಸವೇಶ್ವರ ಪುತ್ಥಳಿಗೆ ಸೋಮಹಳ್ಳಿ ಮಠಾಧ್ಯಕ್ಷ ಸಿದ್ದಮಲ್ಲಪ್ಪ ಸ್ವಾಮೀಜಿ ಪುಷ್ಪಾರ್ಚನೆ ಮಾಡಿ ಮೆರವಣಿಗೆಗೆ ಚಾಲನೆ ನೀಡಿದರು.

ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್, ಮಾಜಿ ಶಾಸಕ ಸಿ.ಎಸ್.ನಿರಂಜನಕುಮಾರ್, ಮಹಾಸಭಾ ತಾಲೂಕು ಅಧ್ಯಕ್ಷ ರವಿಕಮರಹಳ್ಳಿ, ಪ್ರಧಾನ ಕಾರ್ಯದರ್ಶಿ ಮಾಡ್ರಹಳ್ಳಿ ನಾಗೇಂದ್ರ, ಯುವಘಟಕದ ಅಧ್ಯಕ್ಷ ಗುರು, ಮುಖಂಡ ಹಂಗಳ ಪ್ರಣಯ್ ಸೇರಿದಂತೆ ಎಲ್ಲಾ ಘಟಕದ ಪದಾಧಿಕಾರಿಗಳು ಹಾಗೂ ಮುಖಂಡರು ಮತ್ತು ಯುವಕರು ಪಾಲ್ಗೊಂಡಿದ್ದರು.

ಗಮನಸೆಳೆದ ಮೆರವಣಿಗೆ: ಪಟ್ಟಣದ ಪ್ರಮುಖ ರಸ್ತೆಗಳಾದ ಮಡಹಳ್ಳಿ ರಸ್ತೆ, ವಿಶ್ವಗುರು ಬಸವೇಶ್ವರವೃತ್ತ, ಹಳೇ ಬಸ್ ನಿಲ್ದಾಣ, ಕಿತ್ತೂರು ರಾಣಿ ಚೆನ್ನಮ್ಮ ರಸ್ತೆ, ಕೊಡಹಳ್ಳಿ ಸರ್ಕಲ್, ಚಾಮರಾಜನಗರ ಜೋಡಿ ರಸ್ತೆಯ ಮೂಲಕ ಅಲಂಕೃತ ಎತ್ತಿನ ಗಾಡಿಗಳು, ನಂದೀಧ್ವಜ, ಮಹಿಳಾ ಹಾಗೂ ಪುರುಷರ ವೀರಗಾಸೆ, ಕೇರಳದ ಚಂಡೆ ಮದ್ದಳೆ, ಹುಲಿವೇಷಧಾರಿಗಳು, ಕಂಸಾಳೆ, ಗೊರವರ ಕುಣಿತ ಸೇರಿದಂತೆ ಹತ್ತಾರು ಜನಪದ ಕಲಾತಂಡಗಳು ಸಾಗಿ ಜನತೆಯ ಗಮನ ಸೆಳೆಯಿತು. ಬಿಸಿಲ ಬೇಗೆಯನ್ನು ತಣಿಸುವ ಸಲುವಾಗಿ ಯುವಘಟಕದ ವತಿಯಿಂದ ಮಜ್ಜಿಗೆ, ಪಾನಕ ವಿತರಣೆ ಮಾಡಲಾಯಿತು.

ಸೈನಿಕರಿಗೆ ಬೆಂಬಲ : ಆಪರೇಷನ್ ಸಿಂಧೂರ ಬೆಂಬಲಿಸಿ ಯುವಕರು ಕೈಯಲ್ಲಿ ಪೋಸ್ಟರ್ ಹಿಡಿದು ಸೈನಿಕರಿಗೆ ನೈತಿಕ ಬೆಂಬಲ ಸೂಚಿಸುವ ಮೂಲಕ ಜನರ ಗಮನ ಸೆಳೆದರು.

4 ದಿನಗಳಿಂದ ಪಟ್ಟಣದ ಎಲ್ಲಾ ರಸ್ತೆಗಳಲ್ಲಿ ಬಸವೇಶ್ವರ ಭಾವಚಿತ್ರ ಅಳವಡಿಸಿದ್ದರು. ದಸರೆ ಮಾದರಿಯಲ್ಲಿ ವಿದ್ಯುತ್ ದೀಪಾಲಂಕಾರ ಮಾಡಿದ್ದರಿಂದ ಪಟ್ಟಣವು ಝಗಮಗಿಸುತ್ತಿತ್ತು. ಬಸವೇಶ್ವರ ವೃತ್ತದಲ್ಲಿ ಬಸವೇಶ್ವರ ಮತ್ತು ಶಿವಕುಮಾರಸ್ವಾಮಿಗಳಿಗೆ ಲೇಸರ್ ದೀಪ ಅಳವಡಿಸಿದ್ದರಿಂದ ಮೂರು ದಿನಗಳಿಂದ ಪಟ್ಟಣದಲ್ಲಿ ಹಬ್ಬದ ವಾತಾವರಣ ಎದ್ದುಕಾಣುತ್ತಿತ್ತು. ಪಟ್ಟಣ ಪೊಲೀಸರು ಸೂಕ್ತ ಬಂದೋಬಸ್ತ್ ನೀಡಿದ್ದರು.



ಬಸವ ಜಯಂತಿ ಮೆರವಣಿಗೆಯಲ್ಲಿ ಯುವಕರು ಆಪರೇಶನ್ ಸಿಂಧೂರ್ ಪೋಸ್ಟರ್ ಪ್ರದರ್ಶಿಸಿ ಸೈನಿಕರಿಗೆ ಬೆಂಬಲ ವ್ಯಕ್ತಪಡಿಸಿದರು

ಚಾ.ನಗರ ನಗರಸಭಾಧ್ಯಕ್ಷ ಸುರೇಶ್‌ರಿಂದ ಉದ್ಯಾನವನ ನಿರ್ವಹಣೆ ಪರಿಕರ ವಿತರಣೆ


ಉದ್ಯಾನವನ ನಿರ್ವಹಣೆ ಮಾಡುತ್ತಿರುವ ಶ್ರೀ ಲಕ್ಷ್ಮಿ ಮಹಿಳಾ ಸ್ವ–ಸಹಾಯ ಗುಂಪಿನ ಸದಸ್ಯರಿಗೆ ನಗರಸಭಾ ಅಧ್ಯಕ್ಷ ಸುರೇಶ್ ಪರಿಕರಗಳನ್ನು ವಿತರಿಸಿದರು.

ಚಾಮರಾಜನಗರ, ಮೇ 19–ನಗರದಲ್ಲಿ ಉದ್ಯಾನವನ ನಿರ್ವಹಣೆ ಮಾಡುತ್ತಿರುವ ಶ್ರೀ ಲಕ್ಷ್ಮಿ ಮಹಿಳಾ ಸ್ವ–ಸಹಾಯ ಗುಂಪಿನ ಸದಸ್ಯರಿಗೆ ನಗರಸಭಾ ಅಧ್ಯಕ್ಷ ಸುರೇಶ್ ಪರಿಕರಗಳನ್ನು ವಿತರಿಸಿದರು.

ನಗರದ ಪುಟ್ಟಮ್ಮಣಿ ಉದ್ಯಾನವನದಲ್ಲಿ ನಗರಸಭೆ ವತಿಯಿಂದ ಕೇಂದ್ರ ಪುರಸ್ಕೃತ ಅಮೃತ ಮಿತ್ರ ಯೋಜನೆಯಡಿ ನಗರಸಭಾ ವ್ಯಾಪ್ತಿಯ ಪುಟ್ಟಮಣಿ ಉದ್ಯಾನವನ, ಹೌಸಿಂಗ್ ಬೋರ್ಡ್ ಅಂಬೇಡ್ಕರ್ ಉದ್ಯಾನ ವನ ಹಾಗೂ ಚಾಮರಾಜೇಶ್ವರ ಉದ್ಯಾನವನ ನಿರ್ವಹಣೆ ಮಾಡಲು ಅನುಮೋದನೆಯಾಗಿದ್ದು, ಡೆಲ್ಮ್ ಅಭಿಯಾನದಡಿಯಲ್ಲಿ ರಚಿಸಿರುವ ಶ್ರೀ ಲಕ್ಷ್ಮಿ ಮಹಿಳಾ ಸ್ವ–ಸಹಾಯ ಗುಂಪು ಆಯ್ಕೆಯಾಗಿ ಮೂರು ಉದ್ಯಾನವನ ನಿರ್ವಹಣೆ ಮಾಡುತ್ತಿರುವ ಈ ಸಂಘಕ್ಕೆ ನಿರ್ವಹಣೆ ಪರಿಕರಗಳನ್ನು ವಿತರಿಸಲಾಯಿತು.

ಈ ಸಂದರ್ಭ ಪೌರಾಯುಕ್ತ ರಾಮದಾಸ್, ಸಹಾಯಕ ನಿರ್ದೇಶಕ ಮಲ್ಲೇಶ್, ಅಭಿಯಾನ ವ್ಯವಸ್ಥಾಪಕರಾದ ಅಂಜದ್ ಪಾಷ, ಡಾ.ಪುಟ್ಟಸ್ವಾಮಿ, ಅನ್ಸರ್ ಖಾನ್, ಸಮುದಾಯ ಸಂಘಟನಾಧಿಕಾರಿ ವೆಂಕಟನಾಯಕ, ಸಹಾಯಕ ಕಾರ್ಯಪಾಲಕ ಅಭಿಯಂತರಾದ ರೂಪ, ಸಮುದಾಯ ಸಂಪನ್ಮೂಲ ವ್ಯಕ್ತಿಗಳು, ಸಂಘ ಸದಸ್ಯರು ಹಾಜರಿದ್ದರು.

ಕ್ರೀಡಾ ಚಟುವಟಿಕೆಗಳಲ್ಲಿ ಆಸಕ್ತರಾಗಲು ಕುಲಪತಿ ಕರೆ

ಚಾಮರಾಜನಗರ: ವಿದ್ಯಾರ್ಥಿಗಳು ವ್ಯಾಸಂಗದ ಜೊತೆಗೆ ಕ್ರೀಡಾ ಚಟುವಟಿಕೆಗಳಂತಹ ಪಠ್ಯೇತರ ಚಟುವಟಿಕೆಗಳಲ್ಲಿಯೂ ಹೆಚ್ಚು ಆಸಕ್ತರಾಗುವಂತೆ ಕುಲಪತಿ ಪ್ರೊ. ಎಂ.ಆರ್. ಗಂಗಾಧರ್ ತಿಳಿಸಿದ್ದಾರೆ.


ನಗರದ ಅಂಬೇಡ್ಕರ್ ಕ್ರೀಡಾಂಗಣದಲ್ಲಿಂದು ಹಮ್ಮಿಕೊಳ್ಳಲಾಗಿದ್ದ ವಾರ್ಷಿಕ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದ ಅವರು, ವಾರದಿಂದ ಸುವರ್ಣ ಸಂಭ್ರಮ ಅಂಗವಾಗಿ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳ ಜೊತೆಗೆ ಕ್ರೀಡಾಕೂಟವನ್ನು ವಿಶ್ವವಿದ್ಯಾನಿಲಯ ಆಯೋಜಿಸಿದೆ. ವಿದ್ಯಾರ್ಥಿಗಳು ಇಂತಹ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡು ಉತ್ತಮ ಬದುಕು ಕಟ್ಟಿಕೊಳ್ಳಬಹುದಾಗಿದೆ ಎಂದರು.

ಕುಲಸಚಿವ ಲೋಕನಾಥ್.ಆರ್ ಮಾತನಾಡಿ, ಕ್ರೀಡೆಯಲ್ಲಿ ಸೋಲು–ಗೆಲುವು ಸಹಜ ಆದರೆ ಸ್ಪರ್ಧಾ ಮನೋಭಾವ ಮುಖ್ಯ. ಸದೃಢ ಮನಸ್ಸು ರೂಪಿಸಿಕೊಂಡು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಕ್ರೀಡೆಗಳು ಸಹಕಾರಿಯಾಗಲಿವೆ. ಎಂದು ತಿಳಿಸಿದರು.

ಕ್ರೀಡಾ ಸಮಿತಿಯ ಸದಸ್ಯ ಜಿ. ಬಂಗಾರು, ಉಪನ್ಯಾಸಕ ಮಹೇಶ್, ಎನ್.ಎಸ್.ಎಸ್ ಅಧಿಕಾರಿ ಮಹೇಶ್, ಮಹದೇವಮೂರ್ತಿ, ಶಿವರಾಜು, ಬಸವಣ್ಣ ಮೂಕಹಳ್ಳಿ, ನಿಂಗರಾಜು, ಚೇತನ್, ಸಚಿನ್, ಚಾಮರಾಜು, ಜಗದೀಶ್, ಮಹೇಶ್ ಬಾಬು, ಭವ್ಯ, ಸವಿತಾ ಶಶಿಕಲಾ, ನಂದಿನಿ ಗ್ರಂಥಪಾಲಕ ರಾಘವೇಂದ್ರ, ಬೋಧಕೇತರ ವರ್ಗದ ಕುಮಾರ್ ಚಿಕ್ಕಹೊಳೆ, ಪ್ರಮೋದ್ ಮಹದೇವಸ್ವಾಮಿ, ರಾಜೇಗೌಡ ಹಾಜರಿದ್ದರು.


ಕುಲಪತಿ ಪ್ರೊ. ಎಂ.ಆರ್. ಗಂಗಾಧರ್ ಶಾಟ್ ಪುಟ್ ಎಸೆಯುವುದರ ಮೂಲಕ ವಾರ್ಷಿಕ ಕ್ರೀಡಾಕೂಟ ಉದ್ಘಾಟಿಸಿದರು.

ಬ್ರಾಹ್ಮಣ ಮಹಾಸಭೆಯ ರಾಜ್ಯ ಉಪಾಧ್ಯಕ್ಷರಾಗಿ ಋಗ್ವೇದಿ



ಚಾಮರಾಜನಗರ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ರಾಜ್ಯ ಉಪಾಧ್ಯಕ್ಷರಾಗಿ ವಿಪ್ರಶ್ರೀ ಪುರಸ್ಕೃತ ಸುರೇಶ್ ಎನ್.ಋಗ್ವೇದಿ ಸಮಾಜಕ್ಕೆ ನಿರಂತರವಾಗಿ ಸಲ್ಲಿಸುತ್ತಿರುವ ಸೇವೆಯನ್ನು ಪರಿಗಣಿಸಿ ರಾಜ್ಯ ಉಪಾಧ್ಯಕ್ಷರಾಗಿ ನೇಮಕ ಮಾಡಲಾಗಿದೆ.

ಋಗ್ವೇದಿರವರು ಬ್ರಾಹ್ಮಣ ಸಂಘದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. 22 ವರ್ಷಗಳಿಂದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ರಾಜ್ಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಹಲವು ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಸಮಾಜಮುಖಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ನಲ್ಲೂರಲ್ಲಿ ಅಂಬೇಡ್ಕರ್ ಪುತ್ಥಳಿ ನಿರ್ಮಾಣಕ್ಕೆ ಗುದ್ದಲಿ ಪೂಜೆ

ಚಾಮರಾಜನಗರ: ತಾಲೂಕಿನ ನಲ್ಲೂರು ಗ್ರಾಮದಲ್ಲಿ ಅಂಬೇಡ್ಕರ್ ಪುತ್ಥಳಿ ನಿರ್ಮಾಣಕ್ಕೆ ತಿ.ನರಸೀಪುರದ ನಳಂದ ಬುದ್ಧ ವಿಹಾರದ ಭಂತೇ ಭೋದಿ ರತ್ನ ಗುದ್ದಲಿಪೂಜೆ ನೆರವೇರಿಸಿದರು.

ಸಾಮೂಹಿಕ ಬುದ್ಧವಂದನೆ ಸಲ್ಲಿಸಿ ಅಂಬೇಡ್ಕರ್ ಪುತ್ಥಳಿಗೆ ಗುದ್ದಲಿಪೂಜೆ ನೆರವೇರಿಸಿ ಭಂತೇ ಭೋದಿರತ್ನ ಮಾತನಾಡಿ, ಭಾರತಕ್ಕಾಗಿ ವಿಶ್ವವೇ ಮೆಚ್ಚುವಂತಹ ಸಂವಿಧಾನವನ್ನು ಅಂಬೇಡ್ಕರ್ ಬರೆದು ಕೊಟ್ಟರು. ಎಲ್ಲಾ ಸಮುದಾಯಗಳ ಏಳಿಗೆಗಾಗಿ ಶ್ರಮಿಸಿದವರು. ಅವರ ಆದರ್ಶ, ತತ್ವಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದರು.

ಜಿಲ್ಲಾ ವಕೀಲರ ಸಂಘದ ಮಾಜಿ ಅಧ್ಯಕ್ಷ ರಾಮಸಮುದ್ರ ಪುಟ್ಟಸ್ವಾಮಿ, ಗ್ರಾಮದ ಯಜಮಾನರಾದ ದೊರೆಸ್ವಾಮಿ, ಸೋಮು, ಶ್ರೀನಿವಾಸ, ಸೋಮೇಶ್ವರ, ಮಹದೇವಯ್ಯ, ಸುರೇಶ್, ಮಂಜುನಾಥ್, ರಂಗಸ್ವಾಮಿ, ಮಹೇಶ್, ಬಸವರಾಜು, ಮಹಾದೇವಸ್ವಾಮಿ, ಮುಖಂಡರಾದ ಗುತ್ತಿಗೆದಾರ ನಲ್ಲೂರು ಮಹಾದೇವಸ್ವಾಮಿ, ಶ್ರೀನಾಥ್, ಸೋಮೇಶ್ವರ, ಪರಮೇಶ್ವರ್, ಡಿ.ನಾರಾಯಣಸ್ವಾಮಿ, ಗಣಿ ಉದ್ಯಮಿ ರಂಗಸ್ವಾಮಿ, ಶಿವಯ್ಯ, ಟೈಲರ್ ರಂಗಸ್ವಾಮಿ, ಕು.ಚಿನ್ನಸ್ವಾಮಿ, ಬಂಗಾರಸ್ವಾಮಿ, ಚೆನ್ನಮಲ್ಲು, ನವೀನ್, ಚಂದ್ರು, ವಿನೋದ್, ಶೇಷಯ್ಯ, ಪ್ರಕಾಶ್, ಉದಯ್, ಮನು, ಗ್ರಾಪಂ ಸದಸ್ಯರಾದ ರಾಜಮ್ಮ, ಲೋಕೇಶ್, ಡೈರಿ ಅಧ್ಯಕ್ಷ ಸುರೇಶ್, ಎನ್‌ಎಫ್‌ಸಿ ಗ್ರೂಪ್‌ನ ಸದಸ್ಯರು ಮಹಿಳಾ ಸ್ವಸಹಾಯ ಸಂಘದ ಸದಸ್ಯರು, ಸರ್ಕಾರಿ ನೌಕರರು, ಯುವಕರು ಹಾಜರಿದ್ದರು.



ಭಾರೀ ಮಳೆಗೆ ಬೆಂಗಳೂರು ಮುಳುಗಡೆ

ಬಿಬಿಎಂಪಿ ವಾರ್ ರೂಮ್‌ನಲ್ಲಿ ಕೂತು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಜನರ ಅಹವಾಲು ಆಲಿಕೆ!

ಬೆಂಗಳೂರು, ಮೇ 19– ರಾಜಧಾನಿ ಬೆಂಗಳೂರಿನಲ್ಲಿ ಕಳೆದ ಎರಡು ದಿನಗಳಿಂದ ಭಾರೀ ಮಳೆಯಿಂದ ಹಲವು ಕಡೆ ಅವಾಂತರಗಳು ಸಂಭವಿಸಿವೆ. ಇನ್ನೂ 3 ದಿನಗಳ ಕಾಲ ಮಳೆಯಾಗುವ ಮುನ್ಸೂಚನೆ ಇದ್ದು, ಸಿಟಿ ಜನರು ನಿಂತ ನೀರಲ್ಲಿ ನಡುಗುವಂತಾಗಿದೆ.

ಮಳೆ ಅನಾಹುತದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಇಂದು ಸಿಟಿ ರೌಂಡ್ಸ್ ಹೋಗಲು ನಿರ್ಧರಿಸಿದ್ದರು. ಆದರೆ ತಮ್ಮಿಂದ ಟ್ರಾಫಿಕ್ ಉಂಟಾಗಿ ಜನರಿಗೆ ಮತ್ತಷ್ಟು ಸಮಸ್ಯೆಯಾಗುತ್ತದೆ ಎಂಬ ಕಾರಣಕ್ಕೆ ಸಿಟಿ ರೌಂಡ್ಸ್ ಕ್ಯಾನ್ಸಲ್ ಮಾಡಿದ್ದು, ಮೇ 21 ರಂದು ಸಿಟಿ ರೌಂಡ್ಸ್ ಹೋಗುವುದಾಗಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಸಿಟಿ ರೌಂಡ್ಸ್ ರದ್ದು ಮಾಡಿ, ಬಿಎಂಟಿಸಿ ಬಸ್‌ನಲ್ಲಿ ಸಿಎಂ ಗೃಹ ಕಚೇರಿ ಕೃಷ್ಣಾದಿಂದ ಬಿಬಿಎಂಪಿ ವಾರ್ ರೂಂಗೆ ತೆರಳಿದರು. ಸಚಿವ ಕೆ.ಜೆ ಜಾರ್ಜ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಸಾಥ್ ನೀಡಿದರು.

ರಾಜಕಾಲುವೆ ಸೇರಿ 4,292 ಕಡೆ ಒತ್ತುವರಿ: ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಬೆಂಗಳೂರಿನಲ್ಲಿ ರಾಜಕಾಲುವೆ ಸ್ಥಳಗಳೂ ಸೇರಿದಂತೆ 4,292 ಕಡೆ ಒತ್ತುವರಿ ಆಗಿದೆ. ಇನ್ನೂ ಕೆಲ ರಾಜಕಾಲುವೆಗಳು ಆಳವಾಗಿಲ್ಲ. ಅದರ ಕೆಲಸ ಪ್ರಗತಿಯಲ್ಲಿದೆ. ರಾಜಕಾಲುವೆಗಳು ಪೂರ್ಣವಾಗದೇ ಇರುವುದರಿಂದ ನೀರು ಹೊರಗಡೆ ಬರುವುದನ್ನು ತಡೆಯುವುದು ಕಷ್ಟ, ಸದ್ಯ 166 ಸೂಕ್ಷ್ಮ ಹಾಗೂ ಅತಿಸೂಕ್ಷ್ಮ ಎಂದು ಗುರುತಿಸಲಾಗಿದೆ. ಬೆಂಗಳೂರಿಗೆ ಅನಿರೀಕ್ಷಿತವಾಗಿ ಹೆಚ್ಚು ಮಳೆ ಬಿದ್ದಿದೆ. ನಿನ್ನೆ ಮಳೆಯಾಗಿದ್ದರಿಂದ ಕೆರೆಗಳು ತುಂಬಿವೆ. 104 ಮಿ.ಮೀ ಮಳೆ ಆಗಿದೆ. ಡಿಕೆಶಿ ಕೆಲವು ಪ್ರದೇಶಕ್ಕೆ ಹೋಗುತ್ತಾರೆ. ಅವರಿಂದಲೂ ಮಾಹಿತಿ ಪಡೆಯುತ್ತೇನೆ. ಟ್ರಾಫಿಕ್ ಪೊಲೀಸರು 133 ಜಾಗ ಗುರುತಿಸಿದ್ದಾರೆ. ಸಿಲ್ಕ್ ಬೋರ್ಡ್ ಜಂಕ್ಷನ್, ಹೆಬ್ಬಾಳ ಕಡೆಗಳಲ್ಲಿ ರೈಲ್ವೇ ಪಾಯಿಂಟ್ ಇದ್ದು, ಕೆಲಸ ಮಾಡಲಾಗುತ್ತಿದೆ ಎಂದು ವಿವರಿಸಿದರು.




ಬಿಬಿಎಂಪಿ ವಾರ್ ರೂಂನಲ್ಲಿ ಬೆಂಗಳೂರಿನ ಮಳೆ ಹಾನಿ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ್ ಪರಿಶೀಲನೆ ನಡೆಸಿ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಈ ಸಮಸ್ಯೆ ಹೊಸದಲ್ಲ: ಉಪ ಮುಖ್ಯಮಂತ್ರಿ ಹಾಗೂ ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಡಿ.ಕೆ.ಶಿವಕುಮಾರ್ ಮಾತನಾಡಿ, ಬೆಂಗಳೂರಲ್ಲಿ ನಾವು ಎದುರಿಸುತ್ತಿರುವ ಸಮಸ್ಯೆಗಳು ಹೊಸದೇನಲ್ಲ. ಹಲವು ಸರ್ಕಾರಗಳ, ಹಲವು ವರ್ಷಗಳ ನಿರ್ಲಕ್ಷ್ಯತನದಿಂದ ಈ ಸಮಸ್ಯೆ ಎದುರಿಸುತ್ತಿದ್ದೇವೆ. ಈ ಸಮಸ್ಯೆ ಪರಿಹರಿಸಲು ಕೆಲಸ ಮಾಡಲಾಗುತ್ತಿದೆ. ತಾತ್ಕಾಲಿಕ ಪರಿಹಾರ ವಲ್ಲದೆ, ದೀರ್ಘಕಾಲಿಕ ಪರಿಹಾರ ಕೈಗೊಳ್ಳುವ ಕೆಲಸ ಮಾಡುತ್ತಿದ್ದೇವೆಂದು ತಿಳಿಸಿದ್ದಾರೆ.

ಯಲಹಂಕ ವಲಯದಲ್ಲಿ 29 ಕೆರೆ ಇದೆ. ಅಲ್ಲಿಂದ ಓವರ್ ಫ್ಲೋ ಆಗಿ ಸಮಸ್ಯೆ ಆಗುತ್ತಿದೆ. 60 ದಿನಗಳಲ್ಲಿ ಸಮಸ್ಯೆ ಬಗೆಹರಿಸಲಾಗುವುದು ಎಂದರಲ್ಲದೇ ಯಲಹಂಕಾದಲ್ಲಿ ಅಪಾರ್ಟ್‌ಮೆಂಟ್‌ಗಳ ಅಕ್ಕಪಕ್ಕ ಒತ್ತುವರಿಯಾಗಿರುವ ಜಾಗವನ್ನು ತೆರವು ಮಾಡುವಂತೆ ಸ್ಥಳೀಯ ಅಧಿಕಾರಿಗಳಿಗೆ ಸೂಚನೆ ನೀಡಿದರು. ಜೊತೆಗೆ ಗೋಡೆ ತೆರವುಗೊಳಿಸಿದ್ದರೆ ದೊಡ್ಡ ಕಟ್ಟಡವನ್ನೇ ಒಡೆಯಬೇಕಾಗುತ್ತದೆ ಎಂದು ಸಹ ಎಚ್ಚರಿಸಿದರು.

ತಿರುಪತಿ ತಿಮ್ಮಪ್ಪನಿಗೆ ಪ್ರಮೋದಾ ದೇವಿ ಒಡೆಯರ್ 100 ಕೆಜಿ ತೂಕದ ಬೆಳ್ಳಿ ದೀಪ ಅರ್ಪಣೆ



ತಿರುಪತಿ ತಿಮ್ಮಪ್ಪನಿಗೆ ಮೈಸೂರು ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್, ಎರಡು ಬೃಹತ್ ಬೆಳ್ಳಿ ದೀಪಗಳನ್ನು ಭಾನುವಾರ ಕಾಣಿಕೆಯಾಗಿ ಅರ್ಪಿಸಿದರು.

ಮೈಸೂರು, ಮೇ19(ಜಿಎ)–ವಿಶ್ವ ಪ್ರಸಿದ್ಧ ತಿರುಪತಿ ತಿಮ್ಮಪ್ಪನಿಗೆ ಮೈಸೂರು ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್, ಎರಡು ಬೃಹತ್ ಬೆಳ್ಳಿ ದೀಪಗಳನ್ನು ಭಾನುವಾರ ಕಾಣಿಕೆಯಾಗಿ ಸಲ್ಲಿಸಿದ್ದಾರೆ.

ಟಿಟಿಡಿ ಅಧ್ಯಕ್ಷ ಬಿ.ಆರ್. ನಾಯ್ಡು ಮತ್ತು ದೇವಾಲಯದ ಅಧಿಕಾರಿಗಳು ರಂಗನಾಯಕುಲ ಮಂಟಪದಲ್ಲಿ ತಲಾ 50 ಕೆ.ಜಿ.ಯ ಈ ಎರಡು ಬೆಳ್ಳಿ ದೀಪಗಳನ್ನು ಪ್ರಮೋದಾ ದೇವಿ ಒಡೆಯರ್ ಅವರಿಂದ ಸ್ವೀಕರಿಸಿದರು.

ಸ್ವಾಮಿಯ ಗರ್ಭಗುಡಿಯಲ್ಲಿ ಬೆಳ್ಳಿ ದೀಪಗಳನ್ನು ಬೆಳಗಿಸುವುದು ಸಂಪ್ರದಾಯ. ಸುಮಾರು 300 ವರ್ಷದ ಹಿಂದೆ, ಅಂದಿನ ಮೈಸೂರು ಮಹಾರಾಜರು ಬೃಹತ್ ದೀಪಗಳನ್ನು ಕಾಣಿಕೆಯಾಗಿ ನೀಡಿದ್ದರು. ಅವುಗಳನ್ನು ಇದುವರೆಗೂ ಬೆಳಗಿಸಲಾಗುತ್ತಿದೆ. ಮೂರು ಶತಮಾನಗಳ ನಂತರ ಮೈಸೂರಿನ ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್ ಈಗ ಬೆಳ್ಳಿ ದೀಪಗಳನ್ನು ಕಾಣಿಕೆ ನೀಡಿ ಗಮನ ಸೆಳೆದಿದ್ದಾರೆ.

ಇತ್ತೀಚೆಗೆ ಕೊಲ್ಕತ್ತಾ ಮೂಲದ ಭಕ್ತ ಸಂಜೀವ್ ಗೋಯೆಂಕಾ ಅವರು ದೇವರ ದರ್ಶನ ಬಳಿಕ ದೇವಾಲಯದ ರಂಗನಾಯಕುಲ ಮಂಟಪದಲ್ಲಿ 3.63 ಕೋಟಿ ರೂ. ಮೌಲ್ಯದ 5.267 ಕೆ.ಜಿ ಚಿನ್ನಾಭರಣಗಳನ್ನು ದೇವರಿಗೆ ಅರ್ಪಿಸಿದ್ದರು. ಜೊತೆಗೆ, ವಜ್ರ ಖಚಿತ ಗಟ್ಟಿ ಮತ್ತು ಹಸ್ತಗಳನ್ನು ವೆಂಕಟೇಶ್ವರ ಸ್ವಾಮಿಗೆ ಅರ್ಪಿಸಿದ್ದರು.

ಮೈಸೂರಲ್ಲಿ ರಾತ್ರಿಯಿಡೀ ಮಳೆ; ಧರೆಗುರುಳಿದ ಮರಗಳು; ಉಕ್ಕಿ ಹರಿದ ಚರಂಡಿಗಳು

ಮೈಸೂರು, ಮೇ 19– ಮೈಸೂರಿನಲ್ಲಿ ಭಾನುವಾರ ರಾತ್ರಿಯಿಡೀ ಸುರಿದ ಮಳೆಯಿಂದಾಗಿ ಐದಾರು ಮರಗಳು ಧರೆಗುರುಳಿವೆ.

ನಿನ್ನೆ ರಾತ್ರಿ ಸುಮಾರು 10 ಗಂಟೆ ವೇಳೆಗೆ ಆರಂಭವಾದ ಮಳೆ ರಾತ್ರಿಯಿಡೀ ಎಡಬಿಡದೆ ಸುರಿಯಿತು. ನಿರಂತರವಾಗಿ ಮಳೆ ಸುರಿದಿದ್ದರಿಂದ ರಸ್ತೆಗಳೆಲ್ಲಾ ಜಲಾವೃತಗೊಂಡಿದ್ದವು. ಹಳ್ಳ ಹಾಗೂ ತಗ್ಗು ಪ್ರದೇಶಗಳು ಕೆರೆಯಂತಾಗಿದ್ದವು. ಬಸ್ ಹಾಗೂ ರೈಲುಗಳಲ್ಲಿ ಮೈಸೂರಿಗೆ ಬಂದಿದ್ದ ಪ್ರಯಾಣಿಕರು ಹಾಗೂ ರಾತ್ರಿ ಪಾಳಿಯ ನೌಕರರು ಹೈರಾಣಾದರು.

ಬಿರುಗಾಳಿ ಇಲ್ಲದಿದ್ದರೂ ಜೋರು ಮಳೆ ಸುರಿದ ಪರಿಣಾಮ ಕುವೆಂಪುನಗರದಲ್ಲಿ ಮರವೊಂದು ಉರುಳಿ ಬಿದ್ದಿತು. ಮರದ ಕೊಂಬೆಗಳು ತಗುಲಿ ಕಾರೊಂದಕ್ಕೆ ಹಾನಿಯಾಯಿತು. ಶ್ರೀರಾಂಪುರ, ಬನ್ನಿಮಂಟಪ ಹುಡ್ಕೋ ಬಡಾವಣೆ, ಜಯನಗರ, ಗನ್‌ಹೌಸ್ ಸೇರಿದಂತೆ ಹಲವೆಡೆ ಮರ ಬಿದ್ದಿವೆ. ಇನ್ನೂ ಹಲವೆಡೆ ಕೊಂಬೆಗಳು ಮುರಿದು ಬಿದ್ದಿವೆ. ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿದ್ದು, ನಿವಾಸಿಗಳು ತೀವ್ರ ತೊಂದರೆ ಅನುಭವಿಸಿದ್ದಾರೆ. ಮೈಸೂರು ಮಹಾನಗರ ಪಾಲಿಕೆಯ ಕಂಟ್ರೋಲ್ ರೂಂ ಸಿಬ್ಬಂದಿ, ಸಾರ್ವಜನಿಕರಿಂದ ದೂರು ಬಂದ ಕೂಡಲೇ ಅಭಯ ತಂಡಗಳಿಗೆ ಮಾಹಿತಿ ನೀಡಿ, ಪರಿಹಾರ ಕಾರ್ಯ ಕೈಗೊಂಡರು.

ಉಕ್ಕಿ ಹರಿಯುತ್ತಿರುವ ಮ್ಯಾನ್‌ಹೋಲ್: ಚಾಮರಾಜ ಜೋಡಿ ರಸ್ತೆಯಲ್ಲಿ ಮ್ಯಾನ್‌ಹೋಲ್ ಉಕ್ಕಿ ಹರಿಯುತ್ತಿದೆ. ಸುಣ್ಣದಕೇರಿ ಗರಡಿ ರಸ್ತೆ, 2ನೇ ಕ್ರಾಸ್ ಸೇರುವ ಜಾಗದಲ್ಲಿರುವ ಮ್ಯಾನ್‌ಹೋಲ್‌ನಲ್ಲಿ ಉಕ್ಕುತ್ತಿರುವ ಅಪಾರ ಪ್ರಮಾಣದ ಯುಜಿಡಿ ನೀರು, ಚಾಮರಾಜ ಜೋಡಿ ರಸ್ತೆಯ ಬದಿಯಲ್ಲಿ ಹರಿಯುತ್ತಿದೆ. ಮಳಿಗೆಯವರು, ಗ್ರಾಹಕರು, ಪಾದಚಾರಿಗಳು ಯುಜಿಡಿ ನೀರಿನ ದುರ್ವಾಸನೆಯಿಂದ ಕಂಗಾಲಾಗಿದ್ದಾರೆ.



ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿ ಮ್ಯಾನ್‌ಹೋಲ್ ಉಕ್ಕಿ ಹರಿಯುತ್ತಿರುವುದು.

ಸುಣ್ಣದಕೇರಿ ಕ್ರಾಸ್‌ನಿಂದ ಬರುವ ವಾಹನ ಸವಾರರಿಗೆ ಕೊಳಚೆ ನೀರು ಸಿಡಿಯುತ್ತಿದೆ. ನಿನ್ನೆ ರಾತ್ರಿಯಿಡೀ ಸುರಿದ ಮಳೆಯ ನೀರು ಯುಜಿಡಿ ಸೇರಿದ್ದರಿಂದ ಒತ್ತಡ ಹೆಚ್ಚಾಗಿ ಈ ಸಮಸ್ಯೆ ಉಂಟಾಗಿದೆ ಎನ್ನಲಾಗಿದೆ. ನಿರಂತರ ವಾಹನ ಸಂಚಾರವಿರುವ ಈ ರಸ್ತೆಯ ಮ್ಯಾನ್‌ಹೋಲ್ ಸಮಸ್ಯೆಯನ್ನು ಕೂಡಲೇ ದುರಸ್ತಿ ಮಾಡದಿದ್ದರೆ ಯುಜಿಡಿ ನೀರು ರಸ್ತೆಗೂ ಹರಿದು ಮತ್ತಷ್ಟು ಸಮಸ್ಯೆಯಾಗಲಿದೆ.

ಮೇ 24, 25ರಂದು ತ್ರಿಮತಸ್ಥ ಬ್ರಾಹ್ಮಣ ವಧು–ವರನ್ವೇಷಣಾ ಸಮಾವೇಶ

ಮೈಸೂರು,ಮೇ 19(ಪಿಎಂ)– ಬ್ರಾಹ್ಮಣ ಸಂಘಟನೆಗಳು, ಮಂಗಳ ಸೂತ್ರ ಫೌಂಡೇಷನ್ ಹಾಗೂ ಸಪ್ತಪದಿ ಫೌಂಡೇಷನ್ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಮೇ 24 ಮತ್ತು 25ರಂದು ಉಚಿತ ಅಂತರ್ ರಾಜ್ಯ ಮಟ್ಟದ ತ್ರಿಮತಸ್ಥ ಬ್ರಾಹ್ಮಣ ವಧು–ವರನ್ವೇಷಣಾ ಸಮಾವೇಶ ಆಯೋಜಿಸಲಾಗಿದೆ.

ಬೆಂಗಳೂರಿನ ರಾಜಾಜಿನಗರ ಗೋಪಾಲಪುರದ ಶ್ರೀ ಶಂಕರ ಸೇವಾ ಸಮಿತಿ ಆವರಣದಲ್ಲಿ ವಧು–ವರನ್ವೇಷಣಾ ಸಮಾವೇಶದ ಜೊತೆಗೆ ಲೋಕ ಕಲ್ಯಾಣಾರ್ಥವಾಗಿ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ ಹಾಗೂ ನೂತನವಾಗಿ ಚುನಾಯಿತರಾದ ಎಕೆಬಿಎಂಎಸ್ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಅಭಿನಂದನಾ ಸಮಾರಂಭವನ್ನೂ ಏರ್ಪಡಿಸಲಾಗಿದೆ. ಆಸಕ್ತ ವಧುವರರು ಫೋಟೋ, ಬಯೋಡೇಟಾ, ಜಾತಕ ಸೇರಿದಂತೆ ಅಗತ್ಯ ಮಾಹಿತಿಗಳೊಂದಿಗೆ ಮೇ 23ರೊಳಗೆ ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 94494 25536, 82178 76335 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್‌ನಲ್ಲಿ ಆಫರ್!



ಮೈಸೂರು, ಮೇ 19– ಮೈಸೂರಿನ ಗ್ರಾಹಕರಿಗೆ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್‌ನಲ್ಲಿ ಅಂತ್ಯ ಋತು ವಿಶೇಷ ಕೊಡುಗೆ ನೀಡಲಾಗಿದೆ. ಸಾಮಾನ್ಯ ಪ್ರವೇಶ ದರ 1297 ರೂ. ಬದಲಾಗಿ ವಿಶೇಷ ಕೊಡುಗೆಯಡಿ ಕೇವಲ 999 ರೂ. ಪ್ರವೇಶ ದರ ಪಡೆಯಲಾಗುವುದು. ಇದು ಮೊದಲ 500 ಆನ್‌ಲೈನ್ ಬುಕ್ಕಿಂಗ್‌ಗಳಿಗೆ ಮಾತ್ರ ಅನ್ವಯವಾಗಲಿದೆ. ಜಲಕ್ರೀಡೆಗಳು, ಸಾಹಸಮಯ ಆಟೋಟಗಳು ಹಾಗೂ ಮನೋರಂಜನೆಯೊಂದಿಗೆ ದಿನವನ್ನು ಸಂಭ್ರಮಿಸುವ ಸುವರ್ಣಾವಕಾಶವನ್ನು ಮೈಸೂರಿನ ಸ್ಥಳೀಯ ಗ್ರಾಹಕರಿಗೆ ಮಾತ್ರ ಕಲ್ಪಿಸಲಾಗಿದೆ. ವೆಬ್‌ಸೈಟ್– www.grsfantasypark.com ಮೂಲಕ ಟಿಕೆಟ್ ಬುಕ್ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಮಹಾರಾಜ ಸಂಸ್ಕೃತ ಪಾಠಶಾಲೆಗೆ ಫಿಲಿಡೆಲ್ಫಿಯಾ ಕಾಲೇಜು ನಿಯೋಗ ಭೇಟಿ



ಮೈಸೂರಿನ ಸರ್ಕಾರಿ ಮಹಾರಾಜ ಸಂಸ್ಕೃತ ಪಾಠಶಾಲೆಗೆ ಫಿಲಿಡೆಲ್ಫಿಯಾದ ಸಮುದಾಯ ಕಾಲೇಜಿನ ನಿಯೋಗವು ಭೇಟಿ ನೀಡಿತ್ತು.

ಮೈಸೂರು, ಮೇ 19– ಯುನೈಟೆಡ್ ಸ್ಟೇಟ್ಸ್‌ನ ಫಿಲಿಡೆಲ್ಫಿಯಾದ ಸಮುದಾಯ ಕಾಲೇಜಿನ ನಿಯೋಗವು ಮೈಸೂರಿನ ಸರ್ಕಾರಿ ಮಹಾರಾಜ ಸಂಸ್ಕೃತ ಪಾಠಶಾಲೆಗೆ ಭೇಟಿ ನೀಡಿತ್ತು

ಬೆಂಗಳೂರಿನ ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಎಸ್.ಅಹಲ್ಯಾ ಮಾರ್ಗದರ್ಶನದಲ್ಲಿ ಫಿಲಿಡೆಲ್ಫಿಯಾದ ಸಮುದಾಯ ಕಾಲೇಜಿನ ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಹಾಗೂ ಅಧ್ಯಾಪಕರನ್ನೊಳಗೊಂಡ ನಿಯೋಗವು ಸಂಸ್ಕೃತ ಕಾಲೇಜು ಕಾರ್ಯ ನಿರ್ವಹಣೆ ಬಗ್ಗೆ ಮಾಹಿತಿ ಪಡೆದುಕೊಂಡಿತು. ಈ ವೇಳೆ ಪ್ರಾಚೀನ ತಾಳೆಗರಿ ಹಸ್ತಪ್ರತಿಗಳು ಮತ್ತು ಪುಸ್ತಕಗಳ ಪ್ರದರ್ಶನ ಆಯೋಜಿಸಲಾಗಿತ್ತು. ಡಾ.ಎಂ.ಎ.ಆಳ್ವಾರ್ ಅವರು ಕಾಲೇಜಿನ ಸಮಗ್ರ ಇತಿಹಾಸದ ಜೊತೆಗೆ ತಾಳೆಗರಿ ಹಸ್ತಪ್ರತಿಗಳು ಹಾಗೂ ಪುಸ್ತಕಗಳ ಐತಿಹಾಸಿಕ ಮಹತ್ವ ಹಾಗೂ ಅನನ್ಯತೆ ಬಗ್ಗೆ ನಿಯೋಗಕ್ಕೆ ತಿಳಿಸಿಕೊಟ್ಟರು. ಆಧುನಿಕ ಯೋಗ ಪಿತಾಮಹರೆನಿಸಿಕೊಂಡಿದ್ದ ಟಿ.ಕೃಷ್ಣಮಾಚಾರ್ಯರು ಸ್ಥಾಪಿಸಿದ ಹಾಗೂ ಅವರ ವಿದ್ಯಾರ್ಥಿ ಹಾಗೂ ಕಾಲೇಜಿನ ಯೋಗ ಪ್ರಾಧ್ಯಾಪಕರಾಗಿದ್ದ ಕೆ.ಪಟ್ಟಾಭಿ ಜೋಯಿಸ್ ಅಭಿವೃದ್ಧಿಪಡಿಸಿದ 'ಯೋಗ ವಿಭಾಗದ ಬಗ್ಗೆ ನಿಯೋಗವು ಮೆಚ್ಚುಗೆ ವ್ಯಕ್ತಪಡಿಸಿತು. ಡಾ.ಅಹಲ್ಯಾ ಅವರು ಮಹಾರಾಜ ಸಂಸ್ಕೃತ ಪಾಠಶಾಲೆಯ ವಿಶಿಷ್ಟತೆ ಮತ್ತು ಭಾರತೀಯ ಜ್ಞಾನ ವ್ಯವಸ್ಥೆಗಳ ಶ್ರೇಷ್ಠತೆಯನ್ನು ನಿಯೋಗಕ್ಕೆ ವಿವರಿಸಿದರು.

ಭೇಟಿಯ ಬಗ್ಗೆ ಸಂತಸ ವ್ಯಕ್ತಪಡಿಸಿದ ನಿಯೋಗದ ಸದಸ್ಯರು, ಭಾರತದಲ್ಲಿ ವೈಶಿಷ್ಟ್ಯ ಕ್ಷೇತ್ರಗಳಲ್ಲಿ ಅಧ್ಯಯನ ಮುಂದುವರೆಸುವ ಆಸಕ್ತಿ ಹೊಂದಿದ್ದೇವೆ. ವಿವಿಧ ಭಾರತೀಯ ಜ್ಞಾನ ವ್ಯವಸ್ಥೆಗಳ ಕುರಿತು ಅಲ್ಪಾವಧಿಯ ಕೋರ್ಸ್‌ಗಳನ್ನು ಪ್ರಾರಂಭಿಸುವ ನಿಟ್ಟಿನಲ್ಲಿ ಸಂಸ್ಕೃತ ವಿಶ್ವವಿದ್ಯಾಲಯದ ಉಪಕುಲಪತಿಗಳು ಹಾಗೂ ಫಿಲಿಡೆಲ್ಫಿಯಾದ ಸಮುದಾಯ ಕಾಲೇಜಿನ ಸಹಯೋಗದೊಂದಿಗೆ ಕೋರ್ಸ್‌ಗಳನ್ನು ಸ್ಥಾಪಿಸುವ ಉದ್ದೇಶ ಹೊಂದಿರುವುದಾಗಿ ತಿಳಿಸಿದರು. ಮಹಾರಾಜ ಸಂಸ್ಕೃತ ಕಾಲೇಜಿನ ಪ್ರಾಂಶುಪಾಲ ಡಾ.ಪಿ. ಸತ್ಯನಾರಾಯಣ ಅವರು ಇದೇ ವೇಳೆ ನಿಯೋಗದ ಸದಸ್ಯರನ್ನು ಅಭಿನಂದಿಸಿದರು.

ಹೆಬ್ಬಾಳ ಕಾಲೋನಿ ಶ್ರೀ ದೇವಿ ಪಟ್ಟಲದಮ್ಮನ ಜಾತ್ರಾ ಮಹೋತ್ಸವ

ಮೈಸೂರು, ಮೇ 19(ಎಂಕೆ)– ಮೈಸೂರಿನ ಹೆಬ್ಬಾಳ ಕಾಲೋನಿ ಶ್ರೀ ದೇವಿ ಪಟ್ಟಲದಮ್ಮನವರ 36ನೇ ವರ್ಷದ ಜಾತ್ರಾ ಮಹೋತ್ಸವ ಶ್ರದ್ಧಾಭಕ್ತಿಯಿಂದ ಯಶಸ್ವಿಯಾಗಿ ನೆರವೇರಿತು.

ಕರ್ನಾಟಕ ರಾಜ್ಯ ಡಾ.ಬಿ.ಆರ್.ಅಂಬೇಡ್ಕರ್ ಆದಿ ದ್ರಾವಿಡ(ಪೌರಕಾರ್ಮಿಕ) ಯುವಕರ ಅಭಿವೃದ್ಧಿ ಮಹಾಸಂಘ 9ನೇ ಶಾಖೆ ಹಾಗೂ ಹೆಬ್ಬಾಳು ಕಾಲೋನಿಯ ಯಜಮಾನರುಗಳ ಸಹಬಾಗ್ವಿತದಲ್ಲಿ ಶ್ರೀ ದೇವಿ ಪಟ್ಟಲದಮ್ಮನವರ ಹಬ್ಬದ ಜಾತ್ರಾ ಮಹೋತ್ಸವ ಅಪಾರ ಭಕ್ತ ಸಮೂಹದ ನಡುವೆ ಜರುಗಿತು.



ಮೈಸೂರಿನ ಹೆಬ್ಬಾಳ ಕಾಲೋನಿ ಶ್ರೀ ದೇವಿ ಪಟ್ಟಲದಮ್ಮನವರ ಜಾತ್ರಾ ಮಹೋತ್ಸವ ನಡೆಯಿತು.

ಸೋಮವಾರ ಸಂಜೆ 7 ಗಂಟೆಗೆ ಕೆ.ಆರ್.ಎಸ್ ಮುಖ್ಯ ರಸ್ತೆಯ ತಿಪ್ಪಾಜಿ ಕೊಳದ ಆವರಣದಿಂದ ಆರಂಭವಾದ ಶ್ರೀ ದೇವಿ ಪಟ್ಟಲದಮ್ಮನವರ ಅಲಂಕೃತ ಉತ್ಸವ ಮೂರ್ತಿಯ ಮೆರವಣಿಗೆ, ಜೋಡಿ ವಾದ್ಯ, ನಾದಸ್ವರ ಹಾಗೂ ಜಾನಪದ ಕಲಾತಂಡಗಳೊಂದಿಗೆ ಹೆಬ್ಬಾಳಿನ ಹೆಬ್ಬಾಗಿಲು ಮೂಲಕ ಸಂಜೀವಿನಿ ಸರ್ಕಲ್(ಲೋಕನಾಯಕನಗರ)ನಿಂದ ಕುಂಬಾರಕೊಪ್ಪಲು ಮಾರ್ಗವಾಗಿ ಕುಂಬಾರಕೊಪ್ಪಲು ಕೊನೆ ಬಸ್ ನಿಲ್ದಾಣದ ಮಾರ್ಗವಾಗಿ ಸೂರ್ಯ ಬೇಕರಿ ಸರ್ಕಲ್, ಕುವೆಂಪು ಸರ್ಕಲ್, ಬಸವನಗುಡಿ ಸರ್ಕಲ್ ಮುಂದೆ ಸಾಗಿ ನಿಂಗಯ್ಯನ ಕೆರೆ ಮಾರ್ಗದಲ್ಲಿ ಹೆಬ್ಬಾಳು ಕಾಲೋನಿ ದ್ವಾರದ ಕಮಾನು ಗೇಟಿನ ಮೂಲಕ ಶ್ರೀ ದೇವಿ ಪಟ್ಟಲದಮ್ಮನವರ ದೇವಸ್ಥಾನ ತಲುಪಿತು.

ಮೆರವಣಿಗೆಯುದ್ದಕ್ಕೂ ಕಳಸ ಹೊತ್ತ ಭಕ್ತರು, ಇಷ್ಟಾರ್ಥ ಸಿದ್ಧಿಗಾಗಿ ಶಕ್ತಿ ದೇವತೆಯಲ್ಲಿ ಪ್ರಾರ್ಥನೆ ಸಲ್ಲಿಸಿದರು. ನಾಳೆ(ಮೇ 20) ಬೆಳಗ್ಗೆಯಿಂದಲೇ ವಿಶೇಷ ಪೂಜೆ ಕೈಂಕರ್ಯಗಳ ಜೊತೆಗೆ ಪೂಜಾ ಕುಣಿತ, ತಂಬಿಟ್ಟಿನ ಮೆರವಣಿಗೆ, ಕಿಳಿವೇಟೆ ಪೂಜಾ ಕುಣಿತ ಇರಲಿದೆ. ಹಾಗೆಯೇ ಮೇ 21ರಂದು ಅರಿಶಿನ ಕುಂಕುಮ ಅಭಿಷೇಕ, ಹೆಬ್ಬಾಳು ಕಾಲೋನಿಯ ಬೀದಿಗಳಲ್ಲಿ ಬಣ್ಣದ ಹೋಳಿ ಆಚರಣೆ ನಡೆಯಲಿದೆ. ಉತ್ಸವ ಮೂರ್ತಿ ಮೆರವಣಿಗೆಯಲ್ಲಿ ಯಜಮಾನರಾದ ಎಂ.ಗಣೇಶ್, ಮುಖಂಡರಾದ ಸಿ.ಎಂ.ರಾಮಯ್ಯ, ಕೃಷ್ಣ, ಆರ್. ಭಂಡಾರಿ, ಆದಿದ್ರಾವಿಡ ಪೌರಕಾರ್ಮಿಕ ಸಂಘದ ಕಾರ್ಯಾಧ್ಯಕ್ಷ ಆರ್.ಮಹದೇವ್, ಕಾರ್ಯದರ್ಶಿ ಬಿ.ಚಲುವ, ಬಿ.ಎಸ್.ಸುಬ್ರಹ್ಮಣ್ಯ, ದಸಂಸ ಮುಖಂಡ ಮೋಹನ್ ಕುಮಾರ್ ಮತ್ತಿತರರಿದ್ದರು.

ಆನ್‌ಲೈನ್‌ನಲ್ಲಿ ಸ್ವಯಂ ಘೋಷಣೆಗೆ ಲಿಂಕ್ ಬಿಡುಗಡೆ

ಮೈಸೂರು,ಮೇ 19(ಪಿಎಂ)– ರಾಜ್ಯದಲ್ಲಿ ನಡೆಯುತ್ತಿರುವ ಪರಿಶಿಷ್ಟ ಜಾತಿ ಕುಟುಂಬಗಳ ಸಮೀಕ್ಷೆ ಸಂಬಂಧ ಆನ್‌ಲೈನ್ ಮೂಲಕ ಸ್ವಯಂ ಘೋಷಣೆಗೆ ಸೋಮವಾರ ಲಿಂಕ್ ಬಿಡುಗಡೆ ಮಾಡಲಾಗಿದೆ. ಮೇ 19ರಿಂದ 28ರವರೆಗೆ ಆನ್‌ಲೈನ್ ಮೂಲಕ ಸ್ವಯಂ ಘೋಷಣೆ ಮಾಡಿಕೊಳ್ಳಬಹುದು. ಈ ವಿಧಾನದಲ್ಲಿ ಮಾಹಿತಿ ನಮೂದಿಸಲು ಜಾತಿ ಪ್ರಮಾಣ ಪತ್ರದಲ್ಲಿರುವ 'ಆರ್‌ಡಿ ಸಂಖ್ಯೆ' ಸಹ ನಮೂದಿಸುವುದು ಕಡ್ಡಾಯ. ಲಿಂಕ್ ಇಂತಿದೆ; https://schedulecastesurvey.karnataka.gov.in/selfdeclaration

ಅಭಿನಂದನೆ...



ಸಿದ್ಧಾರ್ಥ ಸ್ಪೋರ್ಟ್ಸ್ ಕ್ಲಬ್ ಚುನಾವಣೆಯಲ್ಲಿ ಕಾರ್ಯದರ್ಶಿಯಾಗಿ ಆಯ್ಕೆಯಾದ ಚಂದ್ರಶೇಖರ್, ನಿರ್ದೇಶಕರಾದ ಎಂ.ಶಿವಣ್ಣ, ಕೆ.ಸಿ.ಲೇಔಟ್ ವಿಜಿಕುಮಾರ್ ಅವರನ್ನು ಕುರುಬಾರಹಳ್ಳಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಹಿತರಕ್ಷಣಾ ಸಮಿತಿ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಮುಖಂಡರಾದ ಟಿ.ಮಂಜುನಾಥ್, ಕುರುಬಾರಹಳ್ಳಿ ಪ್ರಕಾಶ್, ಧನಂಜಯ್, ಮಹದೇವ್, ಗೋವಿಂದು, ನವೀನ, ಅಪ್ಪು ಗೌಡ, ಚಂದ್ರು ಇನ್ನಿತರರು ಉಪಸ್ಥಿತರಿದ್ದರು.

ವಾಹನವೊಂದು ಉರುಳಿಬಿದ್ದು

ಚಾ.ನಗರ–ಸತ್ಯಮಂಗಲ ಮಾರ್ಗ ಐದು ಘಂಟೆ ಸಂಚಾರ ಬಂದ್

ಅರಣ್ಯ ಪ್ರದೇಶದಲ್ಲಿ ವಾಹನಗಳು ನಿಂತಲ್ಲೇ ನಿಂತಿದ್ದರೆ; ಅವುಗಳಲ್ಲಿದ್ದ ಜನರ ಸ್ಥಿತಿ ಚಿಂತಾಜನಕ

ಚಾಮರಾಜನಗರ, ಮೇ 19– ಚಾಮರಾಜನಗರ–ಸತ್ಯಮಂಗಲ ರಸ್ತೆಯಲ್ಲಿ ವಾಹನವೊಂದು ಪಲ್ಟಿ ಹೊಡೆದ ಪರಿಣಾಮ ಟ್ರಾಫಿಕ್ ಜಾಮ್ ಉಂಟಾಗಿದ್ದು, ಸುಮಾರು 5 ಗಂಟೆಗಳ ಕಾಲ ವಾಹನ ಸಂಚಾರ ಸ್ಥಗಿತಗೊಂಡ ಘಟನೆ ಸೋಮವಾರ ಸಂಜೆ ನಡೆದಿದ್ದು, ಇದರಿಂದಾಗಿ ನೂರಾರು ವಾಹನಗಳು ಕಾಡಿನ ಮಧ್ಯೆಯೇ ನಿಂತಿರುವ ದುಃಸ್ಥಿತಿ ಎದುರಾಗಿದೆ.

ಪುಣಜನೂರು ಚೆಕ್‌ಪೋಸ್ಟ್‌ನಿಂದ ಒಂದೂವರೆ ಕಿಲೋಮೀಟರ್ ದೂರದಲ್ಲಿ ವಾಹನವೊಂದು ಸಂಜೆ 6.30ರ ಸುಮಾರಿನಲ್ಲಿ ರಸ್ತೆಯಲ್ಲಿ ಪಲ್ಟಿ ಹೊಡೆದ ಪರಿಣಾಮ ಈ ರಸ್ತೆಯಲ್ಲಿ ಯಾವುದೇ ವಾಹನಗಳು ಸಂಚರಿಸಲು ಸಾಧ್ಯವಾಗದೆ ಸಂಚಾರ ಸ್ಥಗಿತಗೊಂಡಿದೆ.

ಚಾಮರಾಜನಗರದಿಂದ ಸತ್ಯಮಂಗಲಕ್ಕೆ ತೆರಳುವ ವಾಹನಗಳನ್ನು, ಪುಣಜೂರು ಚೆಕ್‌ಪೋಸ್ಟ್‌ನಲ್ಲೇ ಕರ್ನಾಟಕ ಪೊಲೀಸರು ನಿಲ್ಲಿಸಿದರೆ, ಸತ್ಯಮಂಗಲದಿಂದ ಚಾಮರಾಜನಗರ ಕಡೆಗೆ ಬರುವ ವಾಹನಗಳು ಹಾಸನೂರು ದಾಟಿದ ನಂತರ ಕಾಡಿನ ಮಧ್ಯೆಯೇ ಸಾಲುಗಟ್ಟಿ ನಿಂತಿವೆ. ಕರ್ನಾಟಕ ಪೊಲೀಸರಂತೂ ಪುಣಜನೂರು ಚೆಕ್‌ಪೋಸ್ಟ್‌ನಲ್ಲಿ ವಾಹನಗಳನ್ನು ನಿಲ್ಲಿಸಿದ್ದರಿಂದ ಸುಮಾರು 3 ಕಿಲೋ ಮೀಟರ್‌ವರೆಗೆ ಟ್ರಾಫಿಕ್ ಜಾಮ್ ಉಂಟಾಗಿದ್ದು, ಕೆಲ ವಾಹನ ಸವಾರರು ಕೋಳಿ ಪಾಳ್ಯದಿಂದ ತಾಳವಾಡಿ ಮಾರ್ಗವಾಗಿ ಸುತ್ತಿ ಬಳಸಿ ಸತ್ಯಮಂಗಲದೆಡೆಗೆ ತೆರಳಿದರೆ, ಹಲವಾರು ವಾಹನಗಳು ಕಾಡಿನ ಮಧ್ಯೆಯೇ ನಿಂತಿವೆ.

ಚಾಮರಾಜನಗರದಿಂದ ತೆರಳಿದ ವಾಹನಗಳ ಸ್ಥಿತಿ ಇದಾದರೆ, ತಮಿಳುನಾಡಿನ ಬಣ್ಣಾರಿ ಚೆಕ್‌ಪೋಸ್ಟ್‌ನಲ್ಲಿ ಅಲ್ಲಿನ ಪೊಲೀಸರು ಯಾವುದೇ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯ ವಹಿಸಿದ್ದರಿಂದ ಸುಮಾರು 18 ಕಿ.ಮೀ. ದೂರ ವಾಹನಗಳು ಕಾಡಿನ ಮಧ್ಯೆ ನಿಲ್ಲುವಂತಾಗಿದೆ. ಈ ರಸ್ತೆಯಲ್ಲಿ ಪುಣಜನೂರು ದಾಟಿದ ನಂತರ ಕಾಡಾನೆಗಳ ಸಂಚಾರವಿದೆ. ಅಲ್ಲದೇ, ದಿಂಬಂ ಘಾಟ್‌ನಲ್ಲಿ ಹುಲಿಯ ಸಂಚಾರವಿದ್ದು, ಈ ಪ್ರದೇಶದಲ್ಲಿ ಸಾಮಾನ್ಯವಾಗಿಯೇ ವಾಹನಗಳನ್ನು ನಿಲ್ಲಿಸಿ ಕೆಳಗಿಳಿಯಬಾರದು ಎಂದು ತಮಿಳುನಾಡು ಅರಣ್ಯ ಇಲಾಖೆ ಫಲಕಗಳನ್ನು ಅಳವಡಿಸಿದೆ. ಅರಣ್ಯ ಮಧ್ಯೆ ಸಿಲುಕಿರುವ ಪ್ರಯಾಣಿಕರ ಪಾಡಂತೂ ನರಕವಾಗಿಬಿಟ್ಟಿದೆ.

ರಾತ್ರಿ 10.30 ಆದರೂ ಅರಣ್ಯ ಇಲಾಖೆಯವರು ರಸ್ತೆ ಮಧ್ಯೆ ಬಿದ್ದಿರುವ ವಾಹನವನ್ನು ತೆರವುಗೊಳಿಸದ ಕಾರಣ ಪ್ರಯಾಣಿಕರ ಪಾಡು ಹೇಳತೀರದಾಗಿದೆ. ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಕರೆ ಮಾಡಿದ್ದ ಪ್ರಯಾಣಿಕರೊಬ್ಬರು, ತಾವು ಕೊಯಮತ್ತೂರಿನಿಂದ ಮೈಸೂರಿಗೆ ಪ್ರಯಾಣಿಸುತ್ತಿದ್ದು, ನಮ್ಮ ಬಸ್ ಕಳೆದ 4 ಗಂಟೆಗಳಿಂದ ಕಾಡಿನ ಮಧ್ಯೆಯೆ ಕತ್ತಲಿನಲ್ಲಿ ನಿಂತಿದೆ. ಬಸ್‌ನಿಂದ ಇಳಿಯಲೂ ಆಗದೇ ಕೂರಲೂ ಆಗದೇ ಅವಸ್ಥೆ ಪಡುತ್ತಿದ್ದೇವೆ ಎಂದು ಅಲವತ್ತುಕೊಂಡರು.

ಈ ಸಂಬಂಧ ಚಾಮರಾಜನಗರ ಪೊಲೀಸ್ ಕಂಟ್ರೋಲ್ ರೂಂ ಅನ್ನು ಸಂಪರ್ಕಿಸಲಾಗಿ, ರಸ್ತೆಯಲ್ಲಿ ಪಲ್ಟಿ ಹೊಡೆದಿರುವ ವಾಹನವನ್ನು ತೆರವುಗೊಳಿಸುವ ಕಾರ್ಯವನ್ನು ಅರಣ್ಯ ಇಲಾಖೆಯವರು ಮಾಡುತ್ತಿದ್ದಾರೆ. ಆ ರಸ್ತೆಯಲ್ಲಿ ಬೇರೆ ವಾಹನಗಳು ಸಂಚರಿಸಲು ಸಾಧ್ಯವಾಗದ ಕಾರಣ ಎಲ್ಲಾ ವಾಹನಗಳನ್ನು ಪುಣಜನೂರು ಚೆಕ್‌ಪೋಸ್ಟ್‌ನಲ್ಲಿ ನಿಲ್ಲಿಸಿದ್ದೇವೆ ಎಂದು ತಿಳಿಸಿದರು.

ಸರ್ಕಾರದ ನೀತಿ ನಿರೂಪಣೆ ರೂಪಿಸುವಲ್ಲಿ ಡಾ.ಕೆ.ಕಸ್ತೂರಿ ರಂಗನ್ ಕೊಡುಗೆ ಅಪಾರ

ಡಾ.ಕಸ್ತೂರಿ ರಂಗನ್ ಅವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ರಾಯಚೂರು ವಿವಿ ವಿಶ್ರಾಂತ ಕುಲಪತಿ ಡಾ.ಹರೀಶ್ ರಾಮಸ್ವಾಮಿ ಸ್ಮರಣೆ

ಮೈಸೂರು,ಮೇ 19(ಪಿಎಂ)– ಸರ್ಕಾರದ ನೀತಿ ನಿರೂಪಣೆ ರೂಪಿಸುವಲ್ಲಿ ಇಸ್ರೋ ಮಾಜಿ ಅಧ್ಯಕ್ಷ ಡಾ.ಕೆ.ಕಸ್ತೂರಿ ರಂಗನ್ ಅವರ ಕೊಡುಗೆ ಅಪಾರ. ಜೊತೆಗೆ ಅವರು ರೂಪಿಸುವ ನೀತಿ ನಿರೂಪಣೆಯಲ್ಲಿ ಸಮಾಜದ ಬಗೆಗಿನ ಕಳಕಳಿ ಮುಖ್ಯ ಅಂಶವಾಗಿರುತಿತ್ತು ಎಂದು ರಾಯಚೂರು ವಿವಿ ವಿಶ್ರಾಂತ ಕುಲಪತಿ ಡಾ.ಹರೀಶ್ ರಾಮಸ್ವಾಮಿ ಸ್ಮರಿಸಿದರು.

ಮೈಸೂರಿನ ಎನ್‌ಎಸ್ ರಸ್ತೆಯಲ್ಲಿರುವ ಎಬಿವಿಪಿ ಕಾರ್ಯಾಲಯದ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಮೈಸೂರು ಜಿಲ್ಲಾ ಘಟಕ ಹಾಗೂ ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘದ ಜಂಟಿ ಆಶ್ರಯದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಇಸ್ರೋ ಮಾಜಿ ಅಧ್ಯಕ್ಷ ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿ 2020ರ (ಎನ್‌ಇಪಿ) ಅಧ್ಯಕ್ಷರಾಗಿದ್ದ ಡಾ.ಕೆ.ಕಸ್ತೂರಿ ರಂಗನ್ ಅವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸರ್ಕಾರ ನೀತಿ ನಿರೂಪಣೆ ರೂಪಿಸಲು ಸಮಾಜ ವಿಜ್ಞಾನ ಓದಿರಬೇಕೆಂಬ ಭಾವನೆ ನಮ್ಮಲ್ಲಿದೆ. ಆದರೆ ಕಸ್ತೂರಿ ರಂಗನ್ ಸಮಾಜ ವಿಜ್ಞಾನಿ ಅಲ್ಲವಾದರೂ, ಬಾಹ್ಯಾಕಾಶ ವಿಜ್ಞಾನಿಯಾಗಿ ಸಮಾಜದ ಬಗ್ಗೆ ಕಳಕಳಿಯಿಂದ ನೀತಿಗಳನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಇಸ್ರೋ ಅಧ್ಯಕ್ಷರಾಗಿಯೂ ಅವರ ಕೊಡುಗೆ ಅಪಾರವಾಗಿದೆ. 2008ರಲ್ಲಿ ಚಂದ್ರಯಾನದ ಜವಾಬ್ದಾರಿ ವಹಿಸಿದ್ದರು. ಆತ್ಮ ನಿರ್ಭರ್ ಸೇರಿದಂತೆ ಸರ್ಕಾರದ ಮಹತ್ವದ ಯೋಜನೆಗಳು ರೂಪ ತಾಳುವುದರ ಹಿಂದೆ ಕಸ್ತೂರಿ ರಂಗನ್ ಅವರ ಪಾತ್ರವಿದೆ ಎಂದು ತಿಳಿಸಿದರು.



ಮೈಸೂರಿನ ಎಬಿವಿಪಿ ಕಾರ್ಯಾಲಯದ ಸಭಾಂಗಣದಲ್ಲಿ ಸೋಮವಾರ ಡಾ.ಕೆ.ಕಸ್ತೂರಿ ರಂಗನ್ ಅವರ ಶ್ರದ್ಧಾಂಜಲಿ ಕಾರ್ಯಕ್ರಮ ನಡೆಯಿತು.

ಭಾರತವನ್ನು ಸದೃಢವಾಗಿ ಬೆಳೆಸುವ ನಿಟ್ಟಿನಲ್ಲಿ ಕಸ್ತೂರಿ ರಂಗನ್ ಅವರ ಆಲೋಚನೆ ಹಾಗೂ ಚಿಂತನೆಗಳು ದೂರದೃಷ್ಟಿ ಹೊಂದಿದ್ದವು. ಅವರೊಂದಿಗೆ ಸಂವಹನ ನಡೆಸಲು ನನಗೆ ಅವಕಾಶ ಸಿಕ್ಕಿತು. ಈ ವೇಳೆ ಅವರು ನನಗೆ ಹೆಚ್ಚು ಮಾತನಾಡಲು ಅವಕಾಶ ಕಲ್ಪಿಸಿದರು. ಅವರು ಮತ್ತೊಬ್ಬರ ಆಲೋಚನೆಗಳನ್ನು ಆಲಿಸುವ ಮಹತ್ವದ ಗುಣ ಹೊಂದಿದ್ದರು. ಉನ್ನತ ಸ್ಥಾನಮಾನದಲ್ಲಿರುವ ಬಹಳಷ್ಟು ಮಂದಿ ಯಾವುದೇ ವಿಚಾರವಾದರೂ ತಾವೇ ಮಾತನಾಡಿ ಮುಗಿಸುತ್ತಾರೆ. ಆದರೆ ಕಸ್ತೂರಿ ರಂಗನ್ ಮತ್ತೊಬ್ಬರಿಗೆ ಮಾತನಾಡಲು ಅವಕಾಶ ನೀಡುತ್ತಿದ್ದರು ಎಂದರು.

ಎನ್‌ಇಪಿ 2020 ಒಂದು ವೇಳೆ ವಿಫಲವಾಗಿದ್ದರೆ ಇದಕ್ಕೆ ಭಾಗಶಃ ಶಿಕ್ಷಕರೇ ಕಾರಣ. ಈ ನೀತಿ ಕುರಿತಂತೆ ನಾನು ಸುಮಾರು 30 ಕಾರ್ಯಾಗಾರ ನಡೆಸಿ ಶಿಕ್ಷಕರಿಗೆ ತರಬೇತಿ ನೀಡಿದ್ದೇನೆ. ಶಿಕ್ಷಕರಿಗೆ ಇದ್ದ ಒಂದೇ ಒಂದು ಭಯವೆಂದರೆ ಅದು ಕಾರ್ಯಭಾರದ ಒತ್ತಡ ಎಂಬುದಾಗಿತ್ತು. ಅದರ ವ್ಯಾಪಕತೆ ಅರ್ಥ ಮಾಡಿಕೊಳ್ಳುವಲ್ಲಿ ಬಹುಶಃ ಬಹುತೇಕರಿಗೆ ಸಾಧ್ಯವಾಗಿಲ್ಲ ಎಂದರು.

ಕಸ್ತೂರಿ ರಂಗನ್ ಅವರಲ್ಲಿ ಸ್ಫೂರ್ತಿದಾಯಕ ನಾಯಕತ್ವ ಗುಣ ಇತ್ತು. ಅವರ ಸುತ್ತಮುತ್ತ ಇದ್ದಂತಹ ಯುವಜನರು, ಮಧ್ಯವಯಸ್ಕರು ಅವರ ಮಾರ್ಗದರ್ಶನದಲ್ಲಿ ಕೆಲಸ ಮಾಡುವ ಮೂಲಕ ಅವರೆಲ್ಲರೂ ಒಳ್ಳೆಯ ಸ್ಥಾನಮಾನದಲ್ಲಿದ್ದಾರೆ. ಕಸ್ತೂರಿ ರಂಗನ್ ಎಲ್ಲರನ್ನು ಸಮಾನ ಹಾಗೂ ಗೌರವವಾಗಿ ಕಾಣುತ್ತಿದ್ದರು. ಯಾವುದೇ ವಿಚಾರವಾದರೂ ಮಗುವಿನಂತೆ ಕಲಿಯುತ್ತಿದ್ದರೆ ಹೊರತು ನನಗೇ ಎಲ್ಲಾ ಗೊತ್ತು ಎನ್ನುವ ಭಾವನೆ ಇರಲಿಲ್ಲ. ಮಕ್ಕಳಲ್ಲಿರುವ ಕೌತುಕತೆ ಅವರಲ್ಲಿ ಸದಾ ಜಾಗೃತವಾಗಿತ್ತು. ಯಾವುದೇ ಯಶಸ್ಸಿನ ಶ್ರೇಯಸ್ಸನ್ನು ತಾವು ಮಾತ್ರ ತೆಗೆದುಕೊಳ್ಳುತ್ತಿರಲಿಲ್ಲ. ಬದಲಿಗೆ ತಮ್ಮ ಇಡೀ ತಂಡಕ್ಕೆ ಅರ್ಪಿಸುತ್ತಿದ್ದರು ಎಂದು ಸ್ಮರಿಸಿದರು.

ಇದಕ್ಕೂ ಮುನ್ನ ಕಸ್ತೂರಿ ರಂಗನ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಪ್ರಮುಖ ಡಾ.ಜಿ.ಸಿ.ರಾಜಣ್ಣ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ವೃಷಭೇಂದ್ರಸ್ವಾಮಿ, ರಾಜ್ಯ ಉಪಾಧ್ಯಕ್ಷ ಎ.ಗಂಗಾಧರಚಾರಿ, ವಿಭಾಗ ಪ್ರಮುಖ ಕೆ.ಆರ್.ರಾಜು ಮತ್ತಿತರರು ಹಾಜರಿದ್ದರು.

ಮೈಸೂರು ಮಿತ್ರ

ಪ್ರೊ.ನಂಜುಂಡಸ್ವಾಮಿ ಸಮುದಾಯ ಭವನ ಲೋಕಾರ್ಪಣೆ

ನಂಜನಗೂಡು, ಮೇ 19– ರೈತ ಸಂಘದ ಆಶಯ ದಂತೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಾಂಗಣದಲ್ಲಿ ನಿರ್ಮಿಸಿರುವ ಸಮುದಾಯ ಭವನಕ್ಕೆ ರೈತ ನಾಯಕ ಪ್ರೊ.ಎಂ.ಡಿ.ನಂಜುಂಡಸ್ವಾಮಿ ಹೆಸರನ್ನು ನಾಮಕರಣ ಮಾಡಲಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಾಂಗಣದಲ್ಲಿ ಸೋಮವಾರ 2.60 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಹರಾಜು ಕಟ್ಟೆ ಹಾಗೂ ರೈತ ಸಮುದಾಯ ಭವನ ಉದ್ಘಾಟಿಸಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಶಿವಾನಂದ ಪಾಟೀಲ್ ಅವರು ಕ್ಷೇತ್ರಕ್ಕೆ ಬಿಡುಗಡೆ ಮಾಡಿರುವ 3 ಕೋಟಿ ಅನುದಾನದಲ್ಲಿ ರೈತರಿಗೆ ಬೇಕಾಗಿರುವ ಸೌಲಭ್ಯಗಳನ್ನು ಕಲ್ಪಿಸಲು ರೈತರ ಆಶಯದಂತೆ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿ ಹರಾಜು ಕಟ್ಟೆ, ಕಾಂಕ್ರಿಟ್ ರಸ್ತೆ, ಚರಂಡಿ ನಿರ್ಮಾಣ ಹಾಗೂ 35 ಲಕ್ಷ ವೆಚ್ಚದಲ್ಲಿ ಸಮುದಾಯ ಭವನ ನಿರ್ಮಿಸಲಾಗಿದೆ. ಕೃಷಿ ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಇನ್ನು 5 ಕೋಟಿ ಅನುದಾನ ಕ್ಷೇತ್ರಕ್ಕೆ ಬರಲಿದ್ದು, ಹುಲ್ಲಹಳ್ಳಿ ಗ್ರಾಮದಲ್ಲಿ ಉಪ ಕೃಷಿ ಮಾರುಕಟ್ಟೆ ನಿರ್ಮಿಸಲು ಬೇಡಿಕೆ ಇದೆ. ಶೀಘ್ರ ಜಾಗ ಖರೀದಿಸಿ ಅನುದಾನ ಪಡೆದು ಕಾಮಗಾರಿ ಆರಂಭಿಸಲಾಗುವುದು. ರೈತರಿಗೆ ಎಪಿಎಂಸಿ ಪ್ರಾರಂಭದಲ್ಲಿ ಅವಶ್ಯಕತೆ ಇರುವ ಎಲ್ಲಾ ಸೌಕರ್ಯಗಳನ್ನು ಒದಗಿಸಲು ನಾನು ಬದ್ಧನಾಗಿದ್ದೇನೆ ಎಂದ ಅವರು ನಾನು ಕೃಷಿಯಲ್ಲಿ ಆಸಕ್ತಿ ಹೊಂದಿದ್ದು, ಬಿಡುವಿನ ವೇಳ ನಮ್ಮ ಜಮೀನಿನಲ್ಲಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತೇನೆ ಎಂದು ಹೇಳಿದರು.



ಸಮುದಾಯ ಭವನವನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

ರಾಜ್ಯ ರೈತ ಸಂಘದ ಅಧ್ಯಕ್ಷ ಪಚ್ಚೆ ನಂಜುಂಡಸ್ವಾಮಿ ಮಾತನಾಡಿ, 80ರ ದಶಕದಲ್ಲಿ ರಾಜ್ಯದಲ್ಲಿ ನನ್ನ ತಂದೆ ಪ್ರೊ.ನಂಜುಂಡಸ್ವಾಮಿಯವರು ರೈತ ಚಳವಳಿ ಕಟ್ಟಿದರು. ಅವರ ಹೋರಾಟದ ಫಲವಾಗಿ ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಅವರ ಅಧಿಕಾರವಧಿಯಲ್ಲಿ ರೈತರ 1 ಲಕ್ಷ ಕೋಟಿ ಸಾಲ ಮನ್ನಾ ಮಾಡಲಾಗಿತ್ತು. ಈಗಿನ ಕೇಂದ್ರ ಸರ್ಕಾರದ ಆಡಳಿತದ ಅವಧಿಯಲ್ಲಿ ಪ್ರೊ. ನಂಜುಂಡಸ್ವಾಮಿ ಅವರಿಗೆ ಮರಣೋತ್ತರ ಪದ್ಮಭೂಷಣ ಪ್ರಶಸ್ತಿ ನೀಡುವ ಪ್ರಯತ್ನಗಳು ನಡೆದಿದ್ದವು. ಆದರೆ ಪ್ರೊ.ನಂಜುಂಡಸ್ವಾಮಿಯವರು ಎಡ ಪಂಥೀಯರಾಗಿದ್ದರು ಎಂಬ ಕಾರಣಕ್ಕೆ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ಪ್ರಶಸ್ತಿ ನೀಡುವ ವಿಚಾರವಾಗಿ ಹಿಂದೆ ಸರಿದಿದೆ. ಪ್ರೊ.ನಂಜುಂಡಸ್ವಾಮಿ ಅವರ ಶ್ರಮದಿಂದ ಕಟ್ಟಿದ ರಾಜ್ಯ ರೈತ ಸಂಘವನ್ನು ಉಳಿಸಿ ಬೆಳೆಸುವ ಸಲುವಾಗಿ 21 ಭಾಗಗಳಾಗಿ ಹಂಚಿ ಹೋಗಿದ್ದ ರೈತ ಸಂಘವನ್ನು ಏಕೀಕರಣಗೊಳಿಸಲಾಗಿದೆ. ನಗರದ ಕೃಷಿ ಮಾರುಕಟ್ಟೆ ಪ್ರಾಂಗಣದಲ್ಲಿ ನಿರ್ಮಿಸಲಾಗಿರುವ ಸಮುದಾಯ ಭವನಕ್ಕೆ ಪ್ರೊ.ನಂ ಜುಂಡಸ್ವಾಮಿ ಹೆಸರನ್ನು ನಾಮಕರಣ ಮಾಡಿದ್ದು ಸಂತೋಷ ತಂದಿದೆ ಎಂದರು.

ಸಮಾರಂಭದಲ್ಲಿ ಮಾಜಿ ಶಾಸಕ ಕೇಶವಮೂರ್ತಿ, ಎಪಿಎಂಸಿ ಮಾಜಿ ಅಧ್ಯಕ್ಷರಾದ ಮುದ್ದುಮಾದಶೆಟ್ಟಿ, ಎಂ.ಮಾದಪ್ಪ, ಮಾಜಿ ಎಪಿಎಂಸಿ ಉಪಾಧ್ಯಕ್ಷರಾದ ಮಹದೇವು, ಕೆಂಡಗಣ್ಣಪ್ಪ, ಜಿಲ್ಲಾ ರೈತ ಸಂಘದ ಅಧ್ಯಕ್ಷ ವಿದ್ಯಾಸಾಗರ್, ತಾಲೂಕು ಅಧ್ಯಕ್ಷ ಸತೀಶ್ ರಾವ್, ಹಿಮ್ಮಾವು ರಘು, ನಗರಸಭಾ ಸದಸ್ಯರಾದ ಕೆ.ಎಂ.ಬಸವರಾಜು, ದಸಂಸ ಸಂಚಾಲಕರಾದ ನಾರಾಯಣ, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ಮುಖಂಡರಾದ ಬಸವಣ್ಣ, ಶಿವಣ್ಣ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಾರ್ಯದರ್ಶಿ ಎಂ.ಮಹೇಶ್ ಸೇರಿದಂತೆ ಹಲವರಿದ್ದರು.

ನನಗೆ 75 ವರ್ಷ ಆಯ್ತು, ಮುಂಬರುವ ಚುನಾವಣೆಗೆ ಸ್ಪರ್ಧಿಸಲ್ಲ: ಸಚಿವ ಕೆ.ಎನ್.ರಾಜಣ್ಣ

ಹುಣಸೂರು, ಮೇ 19– ನನಗೆ 75 ವಯಸ್ಸಾಗಿದ್ದು, ಯುವಕರಿಗೆ ಆದ್ಯತೆ ನೀಡುವ ಸಲುವಾಗಿ ಮುಂಬರುವ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಲ್ಲ. ಆದರೆ, ಸಹಕಾರ ಕ್ಷೇತ್ರ ಹಾಗೂ ರಾಜಕಾರಣದಲ್ಲಿ ಸಕ್ರಿಯನಾಗಿರುವೆ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಪ್ರಕಟಿಸಿದರು.

ತಾಲೂಕಿನ ಕಲ್ಲಹಳ್ಳಿಯಲ್ಲಿ ಮಾಜಿ ಮುಖ್ಯಮಂತ್ರಿ ದಿವಂಗತ ದೇವರಾಜ ಅರಸು ಅವರ ಸಮಾಧಿಗೆ ಗೌರವ ಸಲ್ಲಿಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ರಾಜ್ಯಕ್ಕೆ ಸಂಬಂಧಿಸಿದ 1959ರ ಸಹಕಾರ ಕ್ಷೇತ್ರದ ಕಾಯ್ದೆಗೆ ತಿದ್ದುಪಡಿಗಾಗಿ ಕೇಂದ್ರಕ್ಕೆ ಕಳುಹಿಸುವ ಅವಶ್ಯವಿಲ್ಲ. ಈ ಬಗ್ಗೆ ಚರ್ಚಿಸಿ ಕ್ರಮ ವಹಿಸಲಾಗುವುದು ಎಂದರು.

ಸಹಕಾರ ಕ್ಷೇತ್ರವು ಪಟ್ಟಭದ್ರ ಹಿತಾಸಕ್ತಿಗಳ ಹಿಡಿತದಿಂದ ಮುಕ್ತಗೊಳಿಸುವ ಸಲುವಾಗಿ ಜನರ ನಿರೀಕ್ಷೆಗೆ ತಕ್ಕಂತೆ ಎರಡೂ ಸದನಗಳ ಒಪ್ಪಿಗೆ ಪಡೆದು ತಿದ್ದುಪಡಿ ತಂದು ರಾಜ್ಯಪಾಲರ ಅಂಕಿತಕ್ಕೆ ಕಡತ ಕಳುಹಿಸಿದ್ದರೂ, ಕೇಂದ್ರಕ್ಕೆ ಕಳುಹಿಸುವಂತೆ ಸೂಚಿಸಿದ್ದಾರೆ. ಆದರೆ ಈ ತಿದ್ದುಪಡಿ ರಾಜ್ಯ ಸರಕಾರದ ವ್ಯಾಪ್ತಿಗೆ ಬರುವುದರಿಂದ ಕೇಂದ್ರಕ್ಕೆ ಕಳುಹಿಸುವ ಅವಶ್ಯವಿಲ್ಲ. ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಆಡಳಿತ ಮಂಡಳಿಯೇ ಜವಾಬ್ದಾರಿ: ಯಾವುದೇ ಸಹಕಾರಿ ಸಂಸ್ಥೆ, ಸಂಘಗಳಲ್ಲಿ ಹಣ ದುರುಪಯೋಗವಾದಲ್ಲಿ ಅದನ್ನು ಆಡಳಿತ ಮಂಡಳಿಯೇ ಜವಾಬ್ದಾರಿ ಹೊರಬೇಕಿದೆ. ಕಾಯ್ದೆಗೆ ತಿದ್ದುಪಡಿ ಮಾಡಿದ ವೇಳೆ ಕೆಲವರು ಕೋರ್ಟ್‌ನಲ್ಲಿ ರಿಟ್ ಪಿಟಿಷನ್ ಸಲ್ಲಿಸಿದ್ದರು. ಹುಣಸೂರು ತಾಲೂಕಿನ 7 ಸಂಘಗಳಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ದೂರಿದ್ದು, ಸಂಬಂಧಿಸಿದ ಅಧಿಕಾರಿಗಳು ಸೂಕ್ತ ತನಿಖೆ ನಡೆಸಿ ಕ್ರಮ ವಹಿಸಬೇಕು.



ಚುನಾವಣೆ ವೇಳೆ ಅಕ್ರಮ ನಡೆಸುವ, ಗೈರಾಗುವ ಅನೇಕ ಪ್ರಕರಣಗಳು ನಡೆದಿರುವುದು ಗಮನಕ್ಕೆ ಬಂದಿದ್ದು, ಈ ರೀತಿಯ ಪ್ರಕರಣಗಳಲ್ಲಿ 20 ಮಂದಿ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮ ವಹಿಸಿದ್ದು, ತಪ್ಪಿತಸ್ಥರನ್ನು ರಕ್ಷಿಸುವ ಪ್ರಶ್ನೆಯೇ ಇಲ್ಲವೆಂದರು.

ಪ್ರೋತ್ಸಾಹಧನ ಬಾಕಿಗೆ ಕ್ರಮ: ಹಾಲು ಉತ್ಪಾದಕರಿಗೆ 850 ಕೋಟಿ ರೂ. ಪ್ರೋತ್ಸಾಹ ಧನ ನೀಡಬೇಕಿದ್ದು, ಸರಕಾರ ಶೀಘ್ರ ಕ್ರಮ ವಹಿಸಲಿದೆ, ತಮ್ಮ ಸರ್ಕಾರ ಬಂದ ಮೇಲೆ 2 ಬಾರಿ ಪ್ರೋತ್ಸಾಹಧನ ಏರಿಸಲಾಗಿದೆ. ಹಣ ಫಲಾನುಭವಿಗೆ ನೇರವಾಗಿ ಹೋಗಲಿದೆ. ಯಾರು 2 ಬಾರಿ ಏರಿಸಿದ್ದರು ಎಂಬುದು ಹೇಳಲಿ. ಇದು ನಮ್ಮ ಸರ್ಕಾರದ ಸಾಧನೆ ಎಂದರು. ಈ ವೇಳೆ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

ವರ್ಗಾವಣೆಗೊಂಡ ಅರಣ್ಯಾಧಿಕಾರಿಗಳಿಗೆ ಬೀಳ್ಕೊಡುಗೆ

ತಿ.ನರಸೀಪುರ, ಮೇ 19– ಇಲಾಖೆ ಸಿಬ್ಬಂದಿ ವರ್ಗದವರ ಉತ್ತಮ ಸಹಕಾರದಿಂದ ಮುಖ್ಯಮಂತ್ರಿಗಳ ಪದಕ ಪಡೆಯಲು ಸಾಧ್ಯವಾಯಿತು ಎಂದು ಉಪ ವಲಯ ಅರಣ್ಯಾಧಿಕಾರಿ ಎಸ್.ಎಂ. ಮಂಜುನಾಥ್ ಹೇಳಿದರು.

ಪಟ್ಟಣದ ಸಾಮಾಜಿಕ ವಲಯ ಅರಣ್ಯ ಇಲಾಖೆ ಕಚೇರಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ವರ್ಗಾವಣೆಗೊಂಡ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ಬೀಳ್ಕೊಡುಗೆ ಹಾಗೂ ಅಧಿಕಾರ ವಹಿಸಿಕೊಂಡ ಅಧಿಕಾರಿಗಳಿಗೆ ಸ್ವಾಗತ ಕಾರ್ಯಕ್ರಮದಲ್ಲಿ ಇಲಾಖೆ ನೀಡಿದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ತಿ.ನರಸೀಪುರ ಸಾಮಾಜಿಕ ವಲಯ ಅರಣ್ಯ ವಿಭಾಗಕ್ಕೆ ಬಂದು ಅಧಿಕಾರ ವಹಿಸಿಕೊಂಡಾಗ ಹೇಳಿಕೊಳ್ಳುವ ಸೌಲಭ್ಯಗಳಿರಲಿಲ್ಲ. ಸಿಬ್ಬಂದಿ ಕೊರತೆ ಇತ್ತು. ಕಚೇರಿ ಕೆಲಸ, ಫಿಲ್ಡ್‌ವರ್ಕ್‌ನ ಸಂಪೂರ್ಣ ಜವಾಬ್ದಾರಿ ನನ್ನ ಮೇಲಿತ್ತು. ಅದನ್ನು ಟಾಸ್ಕ್ ಎನ್ನುವುದಕ್ಕಿಂತ ಜವಾಬ್ದಾರಿ ಎಂದು ತಿಳಿದು ಎಲ್ಲವನ್ನೂ ನಿಭಾಯಿಸಿಕೊಂಡು ಪ್ರಾಮಾಣಿಕವಾಗಿ ಕೆಲಸ ಮಾಡಿ ಮುಖ್ಯಮಂತ್ರಿಗಳ ಪದಕ ಪಡೆದುಕೊಂಡೆ. ಹಾಗೆಂದ ಮಾತ್ರಕ್ಕೆ ನನ್ನೊಬ್ಬನ ಶ್ರಮಕ್ಕೆ ಪದಕ ದೊರಕಲಿಲ್ಲ. ಬದಲಿಗೆ ಕಚೇರಿ ಸಿಬ್ಬಂದಿ, ಸಹಪಾಠಿ ಸೇರಿದಂತೆ ವಾಚರ್‌ನಿಂದ ಪ್ರತಿಯೊಬ್ಬರೂ ನೀಡಿದ ಸಹಕಾರ ನನಗೆ ಮುಖ್ಯಮಂತ್ರಿಗಳ ಪದಕ ದೊರಕುವಂತೆ ಮಾಡಿತು. ಹಾಗಾಗಿ ಇಲ್ಲಿ ಕರ್ತವ್ಯ ನಿರ್ವಹಿಸಿದ್ದ ವೇಳೆ ಸಹ ಉದ್ಯೋಗಿಗಳು, ಸಾರ್ವಜನಿಕರು, ಮರದ ವ್ಯಾಪಾರಿಗಳು ನೀಡಿದ ಸಹಕಾರವನ್ನು ಎಂದಿಗೂ ಮರೆಯಲಾಗುವುದಿಲ್ಲ ಎಂದರು.



ವರ್ಗಾವಣೆಗೊಂಡ ಉಪ ವಲಯ ಅರಣ್ಯಾಧಿಕಾರಿಗಳನ್ನು ಸಹ ಉದ್ಯೋಗಿಗಳು ಸನ್ಮಾನಿಸಿ ಬೀಳ್ಕೊಟ್ಟರು.

ಇತ್ತೀಚೆಗೆ ಚಿರತೆ ಹಾವಳಿ ಹೆಚ್ಚಾದ ವೇಳೆ ಜನರು, ಸಿಬ್ಬಂದಿ ನೀಡಿದ ಸಹಕಾರ ನಿಜಕ್ಕೂ ಮರೆಯಲಾಗದು. ಅದರಲ್ಲೂ ಅರಣ್ಯಾಧಿಕಾರಿ ಯಮುನಾ ಅವರ ಸೇವೆ ಸ್ಮರಣೀಯ. ಯಮುನಾ ಅವರು ಲೇಡಿ ಸಿಂಗಂರಂತೆ ಕರ್ತವ್ಯ ನಿರ್ವಹಿಸಿದರು. ಕೆಲಸದಿಂದ ತಪ್ಪಿಸಿಕೊಂಡರೆ ಸಾಕೆನ್ನುವ ಕೆಲವರ ನಡುವೆ ಮೇಡಂ ಕೆಲಸಕ್ಕೆ ಕರೆಯದಿದ್ದರೆ ಬೇಸರ ಮಾಡಿಕೊಳ್ಳುತ್ತಿದ್ದರು. ಮಧ್ಯ ರಾತ್ರಿಯಲ್ಲೂ ಅವರು ಕರ್ತವ್ಯ ನಿರ್ವಹಿಸಲು ಸಿದ್ಧರಿದ್ದರು. ಚಿರತೆ, ಆನೆ ಕಾರ್ಯಾಚರಣೆಯಲ್ಲಿ ಅವರು ನಿರ್ವಹಿಸುತ್ತಿದ್ದ ಕಾರ್ಯ ನಿಜಕ್ಕೂ ಮೆಚ್ಚುವಂತದ್ದು ಎಂದು ಯಮುನಾರವರ ಕರ್ತವ್ಯ ಪ್ರಜ್ಞೆಗೆ ಶಹಬ್ಬಾಶ್ ಗಿರಿ ನೀಡಿದರು.

ವರ್ಗಾವಣೆಗೊಂಡ ಮತ್ತೊಬ್ಬರು ಉಪ ವಲಯ ಅರಣ್ಯಾಧಿಕಾರಿ ಯಮುನಾ ಮಾತನಾಡಿ, ಮೊದಲಿಗೆ ಕರ್ತವ್ಯಕ್ಕೆ ತಿ.ನರಸೀಪುರ ಉಪ ವಲಯಕ್ಕೆ ಬಂದ ವೇಳೆ ಇಲ್ಲಿನ ಜನರ ಬಗ್ಗೆ, ಕೆಲಸದ ಬಗ್ಗೆ ಗೊತ್ತಿರಲಿಲ್ಲ. ಆದರೂ ಇಲ್ಲಿನ ಸಿಬ್ಬಂದಿ ಹಾಗೂ ಜನರು ತೋರಿದ ಪ್ರೀತಿ ವಿಶ್ವಾಸ ಮರೆಯಲಾಗದು. ತಿ.ನರಸೀಪುರದ ಜನರ ಪ್ರೀತಿ ವಿಶ್ವಾಸದಿಂದ 10 ವರ್ಷಗಳ ಕಾಲ ಯಶಸ್ವಿಯಾಗಿ ಸೇವೆ ಸಲ್ಲಿಸಿ ವರ್ಗಾವಣೆಯಾಗಿದ್ದೇನೆ. ನನ್ನನ್ನು ತಮ್ಮ ಮನೆಯ ಸದಸ್ಯೆಯಂತೆ ನೋಡಿಕೊಂಡ ಇಲ್ಲಿನ ಜನತೆಯನ್ನು ಬಿಟ್ಟು ಹೋಗುತ್ತಿರುವುದು ಬೇಸರ ತರಿಸಿದೆ. ಆದರೆ ವರ್ಗಾವಣೆ ಅನಿವಾರ್ಯ. ಹಾಗಾಗಿ ನಾನೇ ಎಲ್ಲೇ ಕರ್ತವ್ಯ ನಿರ್ವಹಿಸಿದರೂ ತಿ.ನರಸೀಪುರ ಜನತೆ ನೀಡಿದ ಪ್ರೀತಿ ವಿಶ್ವಾಸವನ್ನೂ ಎಂದಿಗೂ ಮರೆ ಯುವುದಿಲ್ಲ ಎಂದರು.

ವರ್ಗಾವಣೆಗೊಂಡ ಉಪ ವಲಯ ಅರಣ್ಯಾಧಿಕಾರಿ ಎಸ್.ಎಂ.ಮಂಜುನಾಥ್ ಹಾಗೂ ಯಮುನಾ, ಅರಣ್ಯ ರಕ್ಷಕರಾದ ಎಂ.ಶಂಕರ್, ಪ್ರತಾಪ್, ಲೋಕೇಶ್‌ರವರಿಗೆ ಕಚೇರಿ ಸಿಬ್ಬಂದಿಗಳು ಸನ್ಮಾನಿಸಿ ಆತ್ಮೀಯವಾಗಿ ಬೀಳ್ಕೊಡುಗೆ ನೀಡಿದರೆ, ಕರ್ತವ್ಯಕ್ಕೆ ಹಾಜರಾದ ಅರಣ್ಯಾಧಿಕಾರಿ ನಿರಂಜನ್, ನಾಗರಾಜು ಖಂಡ್ರೆ, ವಿಠಲ್ ಶಿವ ರಾಥೋಡ್, ಪ್ರಕಾಶ್ ಬಡಿಗೇರ್ ಹಾಗೂ ವೀರೇಶ್ ಕುಮಾರ್ ಪಾಟೀಲ್ ಅವರಿಗೆ ಸ್ವಾಗತ ಕೋರಲಾಯಿತು.

ಸಾಮಿಲ್ ಮಾಲೀಕರ ಸಂಘದ ಕಗ್ಗಲೀಪುರ ಎಂ.ರಾಜಣ್ಣ, ಶಿವಪ್ರಸಾದ್, ಕೃಷ್ಣ, ಕೀರ್ತಿ, ಜೈ ಶಂಕರಮೂರ್ತಿ, ಅಮ್ಜದ್, ಜಯಂತ್, ಸ್ವಾಮಿ, ಮುಜೀಬ್, ಮನ್ಸೂರ್ ಅಹ್ಮದ್, ರಾಜೇಶ್, ಕಾರ್ತಿಕ್, ಸಗೀರ್ ಅಹ್ಮದ್ ನಯಾಜ್, ಕೀರ್ತಿ, ನಿರ್ವಾಹಕ ಬಸವಣ್ಣ, ಡೆಟಾ ಎಂಟ್ರಿ ಪರಮೇಶ್, ಚಾಲಕ ಮಂಜು, ನರ್ಸರಿ ಪಾಪು, ಮಹದೇ ವಸ್ವಾಮಿ, ಸೇರಿದಂತೆ ಅರಣ್ಯ ಇಲಾಖೆ ಸಿಬ್ಬಂದಿ ಹಾಜರಿದ್ದರು.

ಮಾದಿಗಹಳ್ಳಿಯಲ್ಲಿ 4 ಹಸುಗಳು ಸಾವು

ಬನ್ನೂರು, ಮೇ 19– ಪಟ್ಟಣ ಸಮೀಪದ ಮಾದಿಗಹಳ್ಳಿಯಲ್ಲಿ ನಾಲ್ಕು ಹಸುಗಳು ನಿಗೂಢವಾಗಿ ಸಾವನ್ನಪ್ಪಿವೆ. ಗ್ರಾಮದ ನಿವಾಸಿ ಮಲ್ಲಿಕಾರ್ಜುನ ಎಂಬುವರಿಗೆ ಸೇರಿದ 4 ಹಸುಗಳು ಸಾವನ್ನಪ್ಪಿದ್ದು, ಲಕ್ಷಾಂತರ ರೂ. ನಷ್ಟ ಸಂಭವಿಸಿದೆ ಎನ್ನಲಾಗಿದೆ. ಘಟನೆಗೆ ನಿಖರ ಕಾರಣ ತಿಳಿದು ಬಂದಿಲ್ಲ.

ಭಾನುವಾರ ಮಧ್ಯಾಹ್ನ ಮಲ್ಲಿಕಾರ್ಜುನ ಅವರು ಎಂದಿನಂತೆ ಹಸುಗಳಿಗೆ ಮೇವು ನೀಡಿದ್ದಾರೆ. ಈ ವೇಳೆ ಹಸುಗಳ ವರ್ತನೆಯಲ್ಲಿ ಬದಲಾವಣೆಯಾಗಿದ್ದು, ಇದರಿಂದ ಗಾಬರಿಗೊಂಡ ಮಲ್ಲಿಕಾರ್ಜುನ ಅವರು ಪಶು ವೈದ್ಯರನ್ನು ಕರೆಸಿ ಚಿಕಿತ್ಸೆ ಕೊಡಿಸಿದರಾದರೂ ಚಿಕಿತ್ಸೆ ಫಲಕಾರಿಯಾಗದೇ 4 ಹಸುಗಳು ಸಾವನ್ನಪ್ಪಿವೆ.

ಡೈರಿ ಕಾರ್ಯದರ್ಶಿ ರಮೇಶ್ ಮಾತನಾಡಿ, ಮಲ್ಲಿಕಾರ್ಜುನ ಅವರಿಗೆ ಸೇರಿದ 4 ಹಸುಗಳು ಸಾವನ್ನಪ್ಪಿರುವುದು ದುರಾದೃಷ್ಟಕರ. ನಿತ್ಯ ಅವರು ಸಂಘಕ್ಕೆ 60 ಲೀಟರ್ ಹಾಲು ಸರಬರಾಜು ಮಾಡುತ್ತಿದ್ದರು. ಸಾವನ್ನಪ್ಪಿದ ಹಸುಗಳ ಪೈಕಿ ಒಂದಕ್ಕೆ ಮಾತ್ರ ವಿಮೆ ಮಾಡಿಸಿರುವುದರಿಂದ 50 ಸಾವಿರ ರೂ. ಪರಿಹಾರ ದೊರೆಯಲಿದೆ. ಸಹಕಾರ ಸಂಘದ ಸದಸ್ಯರ ಗಮನಕ್ಕೆ ತಂದು ಸಾಧ್ಯವಾದಲ್ಲಿ ಹೆಚ್ಚಿನ ಪರಿಹಾರ ಒದಗಿಸುವ ಭರವಸೆ ನೀಡಿದರು.

ಗ್ರಾಮದ ಮುಖಂಡ ಕುಮಾರ್ ಮಾತನಾಡಿ, ಹಸುಗಳನ್ನು ಆಶ್ರಯಿಸಿ ಬದುಕುತ್ತಿರುವ ಕುಟುಂಬಕ್ಕೆ ಅವುಗಳ ಸಾವು ಅವರ ಬದುಕಿಗೆ ಕೊಡಲಿ ಪೆಟ್ಟು ನೀಡಿದಂತಾಗಿದೆ. ಅಧಿಕಾರಿಗಳು ಇತ್ತ ಗಮನಿಸಿ ಕುಟುಂಬಕ್ಕೆ ಆರ್ಥಿಕ ನೆರವು ಒದಗಿಸುವ ಕಾರ್ಯ ಮಾಡಬೇಕೆಂದು ಕೋರಿದರು.

ಕೊಡಗಹಳ್ಳಿ ಪಶುವೈದ್ಯೆ ಡಾ.ದಿವ್ಯಶ್ರೀ ಮಾತನಾಡಿ, ಹಸುಗಳ ಸಾವಿಗೆ ಸೂಕ್ತ ಕಾರಣ ತಿಳಿದು ಬರಬೇಕಿದೆ. ಸರ್ಕಾರದಿಂದ ಪ್ರತಿ ಹಸುಗಳಿಗೆ 15 ಸಾವಿರ ಪರಿಹಾರ ಒದಗಿಸುವ ಭರವಸೆ ನೀಡಿದರು.

ಪಶುಪಾಲನಾ ಇಲಾಖೆ ಉಪ ನಿರ್ದೇಶಕ ನಾಗರಾಜು ಮಾತನಾಡಿ, ಸರ್ಕಾರ ರೈತರ ನೆರವಿಗೆ ನಿಲ್ಲುವ ಉದ್ದೇಶದಿಂದ ಆಕಸ್ಮಿಕವಾಗಿ ತೊಂದರೆಗೆ ಒಳಗಾಗುವ ಹಸು ಕುರಿಗಳ ರಕ್ಷಣೆಗೆಂದು ಕಾಮಧೇನು ಆಪತ್ತು ನಿಧಿಯನ್ನು ತೆರೆದಿದ್ದು, ಇದರ ಮೂಲಕ ಆಕಸ್ಮಿಕವಾಗಿ ಸಾವನ್ನಪ್ಪುವ ಪ್ರತಿ ಹಸುವಿಗೆ 15 ಸಾವಿರ ರೂ.ಗಳನ್ನು ಆಕಸ್ಮಿಕವಾಗಿ ಮರಣಿಸುವ ಕುರಿಗಳಿಗೆ 7,500 ರೂ. ಪರಿಹಾರ ನೀಡಲು ಅವಕಾಶ ಕಲ್ಪಿಸಿರುವುದರಿಂದ ಇದರ ಮೂಲಕ ತಕ್ಷಣ ಹಸುವಿನ ಮಾಲೀಕ ಮಲ್ಲಿಕಾರ್ಜುನ ಅವರಿಗೆ ಪರಿಹಾರ ಒದಗಿಸಲಾಗುತ್ತದೆ ಎಂದರು.

ಅಂಬೇಡ್ಕರ್ ಜಯಂತಿ, ಸ್ವಾಭಿಮಾನಿ ಸಮಾವೇಶ

ಹುಣಸೂರು, ಮೇ 19– ನಗರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ 134ನೇ ಜಯಂತೋತ್ಸವ ಮತ್ತು ಸ್ವಾಭಿಮಾನ ಸಮಾವೇಶ ಮೇ 25 ರಂದು ನಡೆಯಲಿದೆ ಎಂದು ಸ್ವಾಭಿಮಾನ ಸಮಾವೇಶದ ಕಾರ್ಯದರ್ಶಿ ಶಿವಶೇಖರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಸಚಿವ ಡಾ.ಜಿ.ಪರಮೇಶ್ವರ್ ಉದ್ಘಾಟಿಸಲಿದ್ದಾರೆ. ಸಚಿವರಾದ ಸತೀಶ್ ಜಾರಕಿಹೊಳಿ, ಪ್ರಿಯಾಂಕ್ ಖರ್ಗೆ, ಸಂಸದ ಯದುವೀರ್, ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ.

ಸಮಾವೇಶದ ಸ್ವಾಗತ ಸಮಿತಿ ಅಧ್ಯಕ್ಷ ನಾಗರಾಜ ಮಲ್ಲಾಡಿ ಮಾತನಾಡಿ, ಅಂದು ಯಾವುದೇ ಅಡ್ಡಿ ಆತಂಕವಿಲ್ಲದೇ ನಗರದಲ್ಲಿ ಅಂಬೇಡ್ಕರ್ ಜಯಂತಿ ಅದ್ಧೂರಿಯಾಗಿ ನಡೆಯಲಿದೆ. ಅಂಬೇಡ್ಕರ್ ಪುತ್ಥಳಿ ಮೆರವಣಿಗೆಗೆ ಶಾಸಕ ಜಿ.ಡಿ.ಹರೀಶ್‌ಗೌಡ ಸೇರಿದಂತೆ ಗಣ್ಯರು ಚಾಲನೆ ನೀಡಲಿದ್ದಾರೆ ಎಂದರು.

ಈ ವೇಳೆ ಬಿಳಿಕೆರೆ ಬಸವರಾಜು, ರತ್ನಪುರಿ ಪುಟ್ಟಸ್ವಾಮಿ, ಕೃಷ್ಣ, ಅಪ್ಪಣ್ಣ ಹಾಗೂ ಮಂಟಿಕೊಪ್ಪಲು ಕುಮಾರ ಇದ್ದರು.

ಹಳ್ಳ ಬಿದ್ದಿರುವ ರಸ್ತೆ ದುರಸ್ತಿಗೆ ಆಗ್ರಹ

ಹುಣಸೂರು, ಮೇ 19– ತಾಲೂಕಿನ ಬಿಳಿಕೆರೆ ಬಸ್ ನಿಲ್ದಾಣದಿಂದ ಹೈವೇ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ಕೂಡಲೇ ದುರಸ್ತಿಗೊಳಿಸುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.


ನಿತ್ಯ ಸಾವಿರಾರು ಮಂದಿ ಸಂಚರಿಸುವ ಈ ರಸ್ತೆ ಅವ್ಯವಸ್ಥೆಯಿಂದ ಕೂಡಿದೆ. ಈಗಾಗಲೇ ಮಳೆ ಪ್ರಾರಂಭವಾಗಿದ್ದು, ರಸ್ತೆಯಲ್ಲಿ ನೀರು ನಿಂತು ವಾಹನ ಸವಾರರು ಪರದಾಡುವಂತಾಗಿದೆ. ಬಿಳಿಕೆರೆ ಹೋಬಳಿ ಕೇಂದ್ರವಾಗಿದ್ದು, ತಾಲೂಕು ಕೇಂದ್ರವಾಗುವ ಎಲ್ಲಾ ಅರ್ಹತೆ ಇದೆ. ಆದರೆ ಜನ ಪ್ರತಿನಿಧಿಗಳು ಹಾಗೂ ಸ್ಥಳೀಯ ಗ್ರಾಪಂ ಅಧಿಕಾರಿಗಳ ನಿರ್ಲಕ್ಷ್ಯದಿಂದ ರಸ್ತೆ ಗುಂಡಿ ಬಿದ್ದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಅಲ್ಲದೇ ಜನಪ್ರತಿನಿಧಿಗಳ ಆಡಳಿತಕ್ಕೆ ಹಿಡಿದ ಕೈಗನ್ನಡಿ ಯಾಗಿದೆ. ಹಾಲಿ ಹಾಗೂ ಮಾಜಿ ಶಾಸಕರು ನಿತ್ಯ ಇದೇ ರಸ್ತೆಯಲ್ಲಿ ಓಡಾಡುತ್ತಿದ್ದರೂ ರಸ್ತೆ ದುರಸ್ತಿಗೆ ಮುಂದಾಗದಿರುವುದು ವಿಪರ್ಯಾಸ ಹೀಗಾಗಿ ವಾರದೊಳಗೆ ಗುಂಡಿ ಬಿದ್ದಿರುವ ರಸ್ತೆ ದುರಸ್ತಿಗೊಳಿಸಬೇಕು. ತಪ್ಪಿದ್ದಲ್ಲಿ ಜನಪ್ರತಿನಿಧಿಗಳು, ಪಿಡಬ್ಲ್ಯೂಡಿ ಇಲಾಖೆ, ಗ್ರಾಪಂ ಅಧಿಕಾರಿಗಳ ನಿರ್ಲಕ್ಷ್ಯ ಖಂಡಿಸಿ ರಸ್ತೆ ಮಧ್ಯ ಬಾಳೆ ಗಿಡ ನೆಟ್ಟು ಪ್ರತಿಭಟನೆ ನಡೆಸ ಲಾಗುವುದು ಎಂದು ಸಾರ್ವಜನಿಕರು ಎಚ್ಚರಿಕೆ ನೀಡಿದ್ದಾರೆ.

ನಂ.ಗೂಡಲ್ಲಿ ಬಸವ ಜಯಂತಿ ಪ್ರಚಾರ ರಥಕ್ಕೆ ಚಾಲನೆ

ನಂಜನಗೂಡು, ಮೇ 19– ನಗರದಲ್ಲಿ ಬಸವ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲು ಉದ್ದೇಶಿಸಿರುವ ಹಿನ್ನೆಲೆಯಲ್ಲಿ ಪ್ರಚಾರ ರಥಕ್ಕೆ ಸೋಮವಾರ ಮಲ್ಲನಮೂಲೆ ಗುರುಕಂಬಳೇಶ್ವರ ಮಠದ ಬಳಿ ಮಠಾಧ್ಯಕ್ಷ ಚನ್ನಬಸವ ಸ್ವಾಮೀಜಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಮೇ 25 ರಂದು ನಗರದಲ್ಲಿ ಬಸವ ಜಯಂತಿ ಕಾರ್ಯಕ್ರಮ ಆಯೋಜನೆಗೊಂಡಿರುವ ಹಿನ್ನೆಲೆಯಲ್ಲಿ ತಾಲೂಕಿನ ಪ್ರತಿ ಗ್ರಾಮಗಳಿಗೂ ಪ್ರಚಾರ ರಥ ತೆರಳಿ ಅದ್ದೂರಿ ಬಸವ ಜಯಂತಿ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಲಿದೆ ಎಂದರು.

ತಾಲೂಕು ವೀರಶೈವ ಲಿಂಗಾಯಿತ ಮಹಾಸಭಾ ಅಧ್ಯಕ್ಷ ಕೆಂಪಣ್ಣ ಮಾತನಾಡಿ, ಅಂದು ಬೆಳಗ್ಗೆ 8.30ಕ್ಕೆ ವಾದ್ಯಗೋಷ್ಠಿ, ಭಜನಾ ತಂಡ, ವೀರಗಾಸೆ, ನಂದಿಧ್ವಜ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳನ್ನು ಒಳಗೊಂಡ ಬಸವಣ್ಣನವರ ಪುತ್ಥಳಿ ಮೆರವಣಿಗೆಗೆ ನವಿಲೂರು, ಚುಂಚನಹಳ್ಳಿ ಮಠಗಳ ಅಧ್ಯಕ್ಷ ಚನ್ನಬಸವ ಸ್ವಾಮೀಜಿಗಳ ಸಮ್ಮುಖದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಲಿದ್ದಾರೆ. ನಗರದ ವಿದ್ಯಾವರ್ಧಕ ಶಾಲೆ ಮೈದಾನದಲ್ಲಿ ಬೆಳಗ್ಗೆ 11.30ಕ್ಕೆ ಧಾರ್ಮಿಕ ಸಭೆ ನಡೆಯಲಿದೆ.



ಪ್ರಚಾರ ರಥಕ್ಕೆ ಮಲ್ಲನಮೂಲೆ ಮಠಾಧ್ಯಕ್ಷ ಚನ್ನಬಸವ ಸ್ವಾಮೀಜಿ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಚನ್ನಬಸವ ಸ್ವಾಮೀಜಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಅರಣ್ಯ ಇಲಾಖೆ ಸಚಿವ ಈಶ್ವರ್ ಖಂಡ್ರೆ, ಶಾಸಕ ದರ್ಶನ್, ಗಣೇಶ್ ಪ್ರಸಾದ್, ಡಾ.ಯತೀಂದ್ರ, ಸಂಸದ ಸುನೀಲ್ ಬೋಸ್, ಮಾಜಿ ಶಾಸಕರಾದ ಕೇಶವ ಮೂರ್ತಿ, ಬಿ.ಹರ್ಷವರ್ಧನ್ ಸೇರಿದಂತೆ ಹಲವು ಮುಖಂಡರು ಭಾಗವಹಿಸಲಿದ್ದಾರೆ. ಸಮಾಜದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದರು.

ಈ ವೇಳೆ ಮುಖಂಡರಾದ ದಳಪತಿ ಮಹದೇವಪ್ಪ, ನಂಜಮಣಿ, ಶಿವಪ್ಪ ದೇವರು, ಮಹೇಶ್, ಪರಶಿವಮೂರ್ತಿ, ಶಿವನಾಗಪ್ಪ, ಮಹೇಶ್, ಸುಧಾ ಚಿಕ್ಕಮಾದಪ್ಪ, ನಟರಾಜು, ಗುರುಮಲ್ಲಪ್ಪ, ಮಹದೇವಸ್ವಾಮಿ, ರಾಜೇಂದ್ರ, ಕೋಮಲ, ಗುರು ಉಪಸ್ಥಿತರಿದ್ದರು.

ವಿದ್ಯಾರ್ಥಿ ನಿಲಯ ದಾಖಲಾತಿಗೆ ಅರ್ಜಿ ಆಹ್ವಾನ

ಕೆ.ಆರ್.ನಗರ, ಮೇ 19– ಕಾಗಿನೆಲೆ ಮಹಾಸಂಸ್ಥಾನ ಕನಕಗುರು ಪೀಠದಿಂದ ನಡೆಸುತ್ತಿರುವ ಸಾರ್ವಜನಿಕ ಕಾಳಿದಾಸ ವಿದ್ಯಾರ್ಥಿ ನಿಲಯ ದಾಖಲಾತಿಗೆ ಅರ್ಜಿ ಆಹ್ವಾನಿಸಲಾಗಿದೆ. 5 ರಿಂದ 10ನೇ ತರಗತಿವರೆಗೆ ವ್ಯಾಸಾಂಗ ಮಾಡುತ್ತಿರುವ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಅಗತ್ಯ ದಾಖಲಾತಿಗಳೊಂದಿಗೆ ಪಟ್ಟಣದ ಚೀರ್ನಹಳ್ಳಿ ರಸ್ತೆಯಲ್ಲಿರುವ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ 9448403940 ಅನ್ನು ಸಂಪರ್ಕಿಸಬಹುದಾಗಿದೆ.

ವಿಜೃಂಭಣೆಯ ಮಾಸ್ತಮ್ಮ ಜಾತ್ರಾ ಮಹೋತ್ಸವ

ಹೆಚ್.ಡಿ.ಕೋಟೆ, ಮೇ 19– ತಾಲೂಕಿನ ಕಾಕನಕೋಟೆ ಬಳ್ಳೆ ಗೇಟ್‌ನಲ್ಲಿರುವ ಶಕ್ತಿದೇವತೆ ಮಾಸ್ತಮ್ಮನವರ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಮೊದಲಿಗೆ ಕಬಿನಿ ಹಿನ್ನೀರಿನಲ್ಲಿರುವ ಹಳೇ ಮಾಸ್ತಿ ಗುಡಿಗೆ ಅರ್ಚಕರಾದ ವೀರಭದ್ರಪ್ಪ ಅವರು ವಿಶೇಷ ಪೂಜೆ ಸಲ್ಲಿಸಿದ ನಂತರ ಕಳಸವನ್ನು ಮಹೇಂದ್ರ, ಲಕ್ಷ್ಮಿ ಆನೆಗಳೊಂದಿಗೆ ಮಂಗಳವಾದ್ಯ, ಚಂಡೆ, ಸತ್ತಿಗೆ ಮೆರವಣಿಗೆ ಮೂಲಕ ದೇವಾಲಯಕ್ಕೆ ತಂದು ಮಾಸ್ತಮ್ಮನಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಇದೇ ವೇಳೆ ಸಾವಿರಾರು ಭಕ್ತರಿಗೆ ಅರಣ್ಯ ಇಲಾಖೆಯಿಂದ ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು.

ಜಾತ್ರೆ ಅಂಗವಾಗಿ ಉದ್ಬೂರು ಗೇಟ್ ಬಳಿ ತಿಂಡಿ ತಿನಿಸು, ಇತರೆ ಅಂಗಡಿ ಮುಂಗಟ್ಟುಗಳನ್ನು ತೆರೆಯಲಾಗಿತ್ತು. ಮುಂಜಾಗ್ರತಾ ಕ್ರಮವಾಗಿ ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಅರಣ್ಯ ಹಾಗೂ ಪೊಲೀಸ್ ಇಲಾಖೆ ಭದ್ರತೆ ಕೈಗೊಂಡಿದ್ದರು.

ವಿಶ್ವವಿಖ್ಯಾತ ಕಾಕನಕೋಟೆ ಬಳ್ಳೆಯಲ್ಲಿ ಖೆಡ್ಡ ನಡೆಸುತ್ತಿದ್ದಾಗ ಮೈಸೂರಿನ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್, ಜಯ ಚಾಮರಾಜ ಒಡೆಯರ್, ನಂತರ ಅರಣ್ಯ ಇಲಾಖೆ ಅಧಿಕಾರಿಗಳು ಶಕ್ತಿದೇವತೆ ಮಾಸ್ತಮ್ಮನಿಗೆ ಮೊದಲು ವಿಶೇಷ ಪೂಜೆ ಸಲ್ಲಿಸಿ ನಂತರ ಕಾರ್ಯಾಚರಣೆ ನಡೆಸುತ್ತಿದ್ದರು. ಅಲ್ಲದೇ ವರನಟ ಡಾ.ರಾಜ್ ಕುಮಾರ್, ಡಾ.ವಿಷ್ಣುವರ್ಧನ್, ಎಂ.ಪಿ. ಶಂಕರ್ ಗಂಧದಗುಡಿ ಚಿತ್ರೀಕರಣ ಸಂದರ್ಭ ದೇವಿಗೆ ಪೂಜೆ ಸಲ್ಲಿಸಿ ಚಿತ್ರೀಕರಣ ಆರಂಭಿಸಿದ್ದನ್ನು ಸ್ಮರಿಸಬಹುದು.

ಬಳ್ಳೆ ಆನೆ ಶಿಬಿರದಲ್ಲಿ 30ಕ್ಕೂ ಹೆಚ್ಚು ಆನೆಗಳನ್ನು ಸಾಕಲಾಗಿತ್ತು. ಅಲ್ಲದೇ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಅಂಬಾರಿ ಹೊತ್ತ ಐರಾವತ, ದ್ರೋಣ, ಅರ್ಜುನ ಸೇರಿದಂತೆ ಇನ್ನಿತರ ಆನೆಗಳಿಗೆ ಮಾಸ್ತಮ್ಮನ ಆಶೀರ್ವಾದವಿತ್ತು ಎನ್ನಲಾಗಿದೆ.



ಹಂಪಾಪುರ ಗ್ರಾಪಂಗೆ ರೇವಣ್ಣ ಉಪಾಧ್ಯಕ್ಷ



ನೂತನ ಉಪಾಧ್ಯಕ್ಷ ಬಿ.ಎನ್.ರೇವಣ್ಣರನ್ನು ಕಾಂಗ್ರೆಸ್ ಮುಖಂಡರು ಅಭಿನಂದಿಸಿದರು.

ಕೆ.ಆರ್.ನಗರ, ಮೇ 19– ತಾಲೂಕಿನ ಹಂಪಾಪುರ ಗ್ರಾಪಂ ಉಪಾಧ್ಯಕ್ಷರಾಗಿ ಬಿ.ಎನ್.ರೇವಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಉಪಾಧ್ಯಕ್ಷ ಎಂ.ಬಿ. ಲೋಕೇಶ್ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಸೋಮವಾರ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಬಿ.ಎನ್.ರೇವಣ್ಣ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಿಡಿಪಿಓ ಸಿ.ಎಂ.ಅಣ್ಣಯ್ಯ ಪ್ರಕಟಿಸಿದರು.

ಚುನಾವಣಾ ಸಭೆಯಲ್ಲಿ ಅಧ್ಯಕ್ಷೆ ವಿದ್ಯಾ ನಾರಾಯಣ್, ಸದಸ್ಯರಾದ ಹೆಚ್.ಕೆ.ನಾಗರಾಜು, ಗೌರಮ್ಮ, ಹರಿರಾಜು, ರಾಮೇಗೌಡ, ಕಾರ್ತಿಕ್, ಎಸ್.ವೈ.ಸೌಮ್ಯ, ರಮ್ಯ ಮಂಜುನಾಥ್, ಎಂ.ಎಸ್.ರವಿಕುಮಾರ್, ಮಹದೇವಕುಮಾರ್, ಎಂ.ಎಸ್.ಗಿರೀಶ್, ಪಿಡಿಓ ಅಶ್ವಿನಿ ಹಾಜರಿದ್ದರು.

ಕೆ.ಎನ್.ಚೈತ್ರಾ, ಕಲಾವತಿ, ನಾಗಮಣಿ, ಎಂ.ಮಾನಸ, ಹೆಚ್.ಡಿ.ನಾಗೇಶ್ ಗೈರು ಹಾಜರಾಗಿದ್ದರು. ಉಪಾಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆಯೇ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು. ಈ ವೇಳೆ ಹಂಪಾಪುರ ವಿಎಸ್‌ಎಸ್‌ಎನ್ ಅಧ್ಯಕ್ಷ ಹೆಚ್.ಪಿ. ಪ್ರಶಾಂತ್, ಮಾಜಿ ಪ್ರಧಾನ ರಾಜ್‌ಪಟ್ಟೇಗೌಡ, ಮುಖಂಡರಾದ ಗಂಗಾಧರ್, ಬೋರನಾಯಕ, ಮಹದೇವ್, ದೇವರಾಜು, ಪರಶುರಾಮು, ಡಿ.ಸಿ.ರವಿ ಮತ್ತಿತರರಿದ್ದರು.

ಡಿಎಪಿಗೆ ಪರ್ಯಾಯವಾಗಿ ಸಂಯುಕ್ತ ರಸಗೊಬ್ಬರ ಬಳಕೆಗೆ ಕೃಷಿ ಇಲಾಖೆ ಸೂಚನೆ

ಮೈಸೂರು, ಮೇ 19(ಎಂಕೆ)– ರಾಜ್ಯದೆಲ್ಲೆಡೆ ಕೃಷಿ ಚಟುವಟಿಕೆಗಳು ಬಿರುಸುಗೊಂಡಿದ್ದು, ರೈತರು ಡಿಎಪಿ ರಸಗೊಬ್ಬರ ಬದಲಿಗೆ ಸಂಯುಕ್ತ ರಸಗೊಬ್ಬರ ಬಳಸುವಂತೆ ಕೃಷಿ ಇಲಾಖೆ ಮಾರ್ಗಸೂಚಿ ಹೊರಡಿಸಿದೆ.

ಸಸ್ಯಗಳ ಬೆಳವಣಿಗೆ 17 ಪೋಷಕಾಂಶಗಳ ಅಗತ್ಯವಿರುತ್ತದೆ. ಅವುಗಳಲ್ಲಿ ಗಾಳಿ ಮತ್ತು ನೀರಿನ ಮೂಲಕ ಇಂಗಾಲ, ಜಲಜನಕ ಮತ್ತು ಆಮ್ಲಜನಕವು ಸ್ವಾಭಾವಿಕವಾಗಿ ದೊರೆಯಲಿದ್ದು, ಉಳಿದ 14 ಪೋಷಕಾಂಶಗಳಿಗಾಗಿ ಸಂಯುಕ್ತ ರಸಗೊಬ್ಬರ ಬಳಕೆಗೆ ಸಲಹೆ ನೀಡಲಾಗಿದೆ.

ಸಾರಜನಕ, ರಂಜಕ, ಪೊಟ್ಯಾಷ್, ಕ್ಯಾಲ್ಸಿಯಂ, ಮೆಗ್ನಿಷಿಯಂ, ಗಂಧಕ, ಕಬ್ಬಿಣ, ಜಿಂಕ್, ಬೋರಾನ್, ತಾಮ್ರ, ಮ್ಯಾಂಗನೀಸ್, ಮಾಲಿಬಿನಂ ಕ್ಲೋರಿನ್ ಹಾಗೂ ನಿಕ್ಕಲ್ ಅಗತ್ಯವಿದ್ದು, ಇವುಗಳಲ್ಲಿ ಯಾವುದೇ ಒಂದು ಪೋಷಕಾಂಶದ ಕೊರತೆ ಯಾದರೂ ಸಸ್ಯಗಳ ಬೆಳವಣಿಗೆ ಮತ್ತು



ಅಭಿವೃದ್ಧಿಯ ಮೇಲೆ ಪರಿಣಾಮ ಬೀರಿ ಇಳುವರಿ ಕುಂಠಿತವಾಗುತ್ತದೆ. ಆದ್ದರಿಂದ ಕೊಟ್ಟಿಗೆ ಗೊಬ್ಬರ, ಹಸಿರೆಲೆ ಗೊಬ್ಬರ, ಹಿಂಡಿ ಇತ್ಯಾದಿ ಸಾವಯವ ಗೊಬ್ಬರ ಬಳಕೆ ಮಾಡುವಂತೆ ಸೂಚಿಸಿದೆ.

ರೈತರು ಯೂರಿಯ ಹಾಗೂ ಡಿಎಪಿಯನ್ನು ಹೆಚ್ಚಾಗಿ ಬಳಸುತ್ತಿದ್ದು, ಇವುಗಳಲ್ಲಿ ಸಾರಜನಕ ಮತ್ತು ರಂಜಕದ ಅಂಶ ಮಾತ್ರವಿರುತ್ತದೆ. ಆದರೆ ಬೆಳೆಗಳಿಗೆ ರೋಗ ನಿರೋಧಕ ಶಕ್ತಿ ನೀಡಿ ಕಾಳಿನ ತೂಕ ಹೆಚ್ಚಿಸಲು ಅತ್ಯಂತ ಅವಶ್ಯಕವಾಗಿರುವ ಪೊಟ್ಯಾಷ್ ಲಭ್ಯವಿರುವುದಿಲ್ಲ. ಮಾರುಕಟ್ಟೆಯಲ್ಲಿ ವಿವಿಧ ಶ್ರೇಣಿಯ (ಗ್ರೇಡ್) ಸಾರಜನಕ, ರಂಜಕ ಮತ್ತು ಪೊಟ್ಯಾಷ್ ಯುಕ್ತ ಬಹಳಷ್ಟು ರಸಗೊಬ್ಬರಗಳು ಲಭ್ಯವಿದ್ದು, ಶಿಫಾರಸ್ಸಿನಂತೆ ವಿವಿಧ ರಸಗೊಬ್ಬರಗಳ ಸಂಯೋಜನೆಯೊಂದಿಗೆ ಬಳಸಬಹುದಾಗಿದೆ.

ಬೆಳೆಗಳಿಗೆ ಶಿಫಾರಸ್ಸಿನಂತೆ ಸಮತೋಲನಾತ್ಮಕ ರಸಗೊಬ್ಬರಗಳ ಬಳಕೆಯನ್ನು ಉತ್ತೇಜಿಸಿ, ಸಂಯುಕ್ತ ರಸಗೊಬ್ಬರಗಳನ್ನು ಬಳಸುವುದರಿಂದ ಸರಿದೂಗಿಸಬಹುದಾಗಿರುತ್ತದೆ. ಅಲ್ಲದೇ, ರೈತರು ರಸಗೊಬ್ಬರವನ್ನು ಕೇವಲ ಒಂದೇ ಸಂಸ್ಥೆಯ ಅಥವಾ ಒಂದೇ ರಸಗೊಬ್ಬರಕ್ಕೆ ಆದ್ಯತೆ ನೀಡದೆ, ಡಿ.ಎ.ಪಿ. ರಸಗೊಬ್ಬರಕ್ಕೆ ಪರ್ಯಾಯವಾಗಿ ಗಂಧಕ ಒದಗಿಸುವ 20:20:0:13 ಹಾಗೂ ಇತರೆ ಸಂಯುಕ್ತ ರಸಗೊಬ್ಬರಗಳಾದ 15:15:15, 10:26:26, 12:32:16, 22:22:11, 17:17:17, 14:28:14 19:19:19 20:10:10 14:35:14 ರಸಗೊಬ್ಬರಗಳನ್ನೂ ಸಹ ಬಳಸಬಹುದಾಗಿದೆ ಎಂದು ಕೃಷಿ ಇಲಾಖೆಯಿಂದ ಅಧಿಕೃತ ಪ್ರಕಟಣೆಯನ್ನು ಹೊರಡಿಸಲಾಗಿದೆ.

ಸುಹಾಸ್ ಶೆಟ್ಟಿ ಕೊಲೆ ಆರೋಪಿ ಮೇಲೆ ಜೈಲಲ್ಲೇ ಸಹ ಕೈದಿಗಳಿಂದ ಅಟ್ಯಾಕ್

ಮಂಗಳೂರು, ಮೇ 19– ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಹತ್ಯೆಯ ಆರೋಪಿ ಚೊಟ್ಟೆ ನೌಷಾದ್ ಮೇಲೆ ಬಿ ಬ್ಯಾರಕ್‌ನ ಹಲವು ಸಹ ಕೈದಿಗಳಿಂದ ಕಲ್ಲು ಮತ್ತು ಸಿಕ್ಕ ಸಿಕ್ಕ ವಸ್ತುಗಳಿಂದ ಅಟ್ಯಾಕ್ ಮಾಡಿರುವಂತಹ ಘಟನೆ ಮಂಗಳೂರು ಸೆಂಟ್ರಲ್ ಜೈಲಿನಲ್ಲಿ ನಡೆದಿದೆ. ಅದೃಷ್ಟವಶಾತ್ ನೌಷಾದ್ ಪಾರಾಗಿದ್ದಾನೆ.



ಆರೋಪಿ ಚೊಟ್ಟೆ ನೌಷಾದ್ ಪೊಲೀಸ್ ಕಸ್ಟಡಿ ಅವಧಿ ಇಂದು ಅಂತ್ಯವಾಗಿತ್ತು. ಹಾಗಾಗಿ ಪೊಲೀಸರು ಆತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ಬಳಿಕ ಮೈಸೂರು ಕಾರಾಗೃಹಕ್ಕೆ ಶಿಫ್ಟ್ ಮಾಡಲು ಸಿದ್ಧತೆ ನಡೆಸಿದ್ದರು. ಈ ಮಧ್ಯೆ ನೌಷಾದ್, ಮಂಗಳೂರು ಜೈಲಿನಲ್ಲಿ ಯಾರನ್ನೋ ನೋಡಬೇಕು ಎಂದಿದ್ದ. ಹಾಗಾಗಿ ಜೈಲಿನಲ್ಲಿ ಮತ್ತೋರ್ವ ಕೈದಿ ಭೇಟಿಗಾಗಿ ಪೊಲೀಸರು ಕರೆದುಕೊಂಡು ಬಂದಿದ್ದರು. ಈ ವೇಳೆ ಇದ್ದಕಿದ್ದಂತೆ ನೌಷಾದ್ ಮೇಲೆ ಸಹ ಕೈದಿಗಳು ಅಟ್ಯಾಕ್ ಮಾಡಿದ್ದಾರೆ.

ಮಂಗಳೂರಿನ ಸುಹಾಸ್ ಶೆಟ್ಟಿ ಕೊಲೆ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಮೂವರು ಆರೋಪಿಗಳ ಪೈಕಿ ಇವನು ಒಬ್ಬನಾಗಿದ್ದು, ಇತ್ತೀಚೆಗೆ ಪೊಲೀಸರು ಅರೆಸ್ಟ್ ಮಾಡಿದ್ದರು. ಆರೋಪಿ ನೌಷದ್ ಉಳಿದ ಆರೋಪಿಗಳೊಂದಿಗೆ ಸೇರಿ ಸುಹಾಸ್ ಶೆಟ್ಟಿ ಕೊಲೆಗೆ ಸಂಚು ರೂಪಿಸಿದ್ದ ಎಂದು ಪೊಲೀಸರ ತನಿಖೆಯಲ್ಲಿ ತಿಳಿದುಬಂದಿತ್ತು.

ಐಪಿಎಲ್ ಹಂಗಾಮ

ಎಸ್‌ಆರ್‌ಹೆಚ್‌ಗೆ ಜಯ: ಟೂರ್ನಿಯಿಂದ ಹೊರಬಿದ್ದ ಎಲ್‌ಎಸ್‌ಜಿ



ಲಕ್ನೋ, ಮೇ 19– ಅಭಿಷೇಕ್ ಶರ್ಮಾ ಅವರ ಸ್ಫೋಟಕ ಅರ್ಧಶತಕದ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧ 6 ವಿಕೆಟ್‌ಗಳ ಜಯ ಸಾಧಿಸಿದೆ.

ಆ ಮೂಲಕ ಏಕನಾ ಕ್ರೀಡಾಂಗಣದಲ್ಲಿ 200+ ರನ್ ಚೇಸಿಂಗ್ ಮಾಡಿ ಐತಿಹಾಸಿಕ ಗೆಲುವು ದಾಖಲಿಸಿದೆ. ಮತ್ತೊಂದೆಡೆ ಪ್ಲೇಆಫ್‌ಗೇರಲು ಗೆಲ್ಲಲೇಬೇಕಿದ್ದ ಪಂದ್ಯದಲ್ಲಿ ಸೋಲು ಕಂಡ ಲಕ್ನೋ ಪ್ರಸಕ್ತ ಸಾಲಿನ ಐಪಿಎಲ್ ಟೂರ್ನಿಯಿಂದ ನಿರ್ಗಮಿಸಿದೆ.

ಇಲ್ಲಿನ ಭಾರತರತ್ನ ಶ್ರೀಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಎಲ್‌ಎಸ್‌ಜಿ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 205 ರನ್ ಗಳಿಸಿತ್ತು. 206 ರನ್‌ಗಳ ಬೃಹತ್ ಗುರಿ ಬೆನ್ನಟ್ಟಿದ ಸನ್‌ರೈಸರ್ಸ್ ಹೈದರಾಬಾದ್ 18.2 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 206 ರನ್ ಗಳಿಸಿ ಗೆಲುವು ಸಾಧಿಸಿತು.

ಎಸ್‌ಆರ್‌ಹೆಚ್ ಪರ ಇನ್ನಿಂಗ್ಸ್ ಆರಂಭಿಸಿದ ಅಥರ್ವ ಟೈಡೆ 3 ಬೌಂಡರಿ ಒಳಗೊಂಡ 13 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ಅಬ್ಬರದ ಬ್ಯಾಟಿಂಗ್ ನಡೆಸಿದ ಅಭಿಷೇಕ್ ಶರ್ಮಾ 20 ಎಸೆತಗಳಲ್ಲಿ 6 ಸಿಕ್ಸರ್, 4 ಬೌಂಡರಿ ಒಳಗೊಂಡ 59 ರನ್ ಗಳಿಸಿ ಔಟಾಗುವ ಮೂಲಕ ತಂಡದ ಗೆಲುವಿಗೆ ಭದ್ರ ಬುನಾದಿ ಹಾಕಿದರು. ನಂತರ ಬಂದ ಇಶಾನ್ ಕಿಶನ್ 28 ಎಸೆತಗಳಲ್ಲಿ 2 ಸಿಕ್ಸರ್, 3 ಬೌಂಡರಿ ಒಳಗೊಂಡ 35ರನ್ ಗಳಿಸಿ ನಿರ್ಗಮಿಸಿದರೇ, ಹೆನ್ರಿಕ್ ಕ್ಲಾಸೆನ್ 28 ಎಸೆತಗಳಲ್ಲಿ 47 ರನ್ ಗಳಿಸಿ ತಂಡಕ್ಕೆ ಕೊಡುಗೆ ಕೊಟ್ಟರು. ಉಳಿದಂತೆ ಕಮಿಂಡು ಮೆಂಡಿಸ್ 21 ಎಸೆತಗಳಲ್ಲಿ 32 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಅನಿಕೇತ್ ವರ್ಮಾ, ನಿತೀಶ್ ಕುಮಾರ್ ರೆಡ್ಡಿ ತಲಾ 5 ರನ್ ಗಳಿಸಿ ತಂಡಕ್ಕೆ ಗೆಲುವು ತಂದುಕೊಟ್ಟರು. ಲಕ್ನೋ ಪರ ದಿಗ್ವೇಶ್ ರಾಠಿ 2 ವಿಕೆಟ್, ವಿಲ್ ಒ'ರೂರ್ಕ್, ಶಾರ್ದೂಲ್ ಠಾಕೂರ್ ತಲಾ ಒಂದೊಂದು 1 ವಿಕೆಟ್ ಕಬಳಿಸಿದರು.

ಇದಕ್ಕೂ ಮುನ್ನಾ, ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ ಸೂಪರ್ ಜೈಂಟ್ಸ್ ಪರ ಮೊದಲ ವಿಕೆಟ್‌ಗೆ ಮಿಚೆಲ್ ಮಾರ್ಷ್ ಹಾಗೂ ಏಡನ್ ಮಾಕ್ರಂ ಮೊದಲ ವಿಕೆಟ್‌ಗೆ 115 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಈ ವೇಳೆ 4 ಸಿಕ್ಸರ್, 6 ಬೌಂಡರಿ ಒಳಗೊಂಡ 65 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಮತ್ತೊಂದು ಬದಿಯಲ್ಲಿ ಬಿರುಸಿನ ಬ್ಯಾಟಿಂಗ್ ನಡೆಸಿದ ಏಡನ್ ಮಾಕ್ರಂ 38 ಎಸೆತಗಳಲ್ಲಿ ತಲಾ 4 ಸಿಕ್ಸರ್, ಬೌಂಡರಿ ಒಳಗೊಂಡ 61 ರನ್ ಗಳಿಸಿ ಔಟಾದರು. ನಂತರ ಬಂದ ನಿಕೋಲಸ್ ಪೂರಾನ್ 26 ಎಸೆತಗಳಲ್ಲಿ 1 ಸಿಕ್ಸರ್, 6 ಸಿಕ್ಸರ್ ಒಳಗೊಂಡ 45 ರನ್ ಗಳಿಸಿ ರನೌಟಾದರು. ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪೆವಿಲಿಯನ್ ಸೇರಿಕೊಂಡರು. ಹೈದರಾಬಾದ್ ಪರ ಇಶಾನ್ ಮಲಿಂಗಾ 2, ಹರ್ಷಲ್ ಪಟೇಲ್, ಹರ್ಷ್ ದುಬೆ, ನಿತೀಶ್ ಕುಮಾರ್ ರೆಡ್ಡಿ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಅಭಿಷೇಕ್ ಶರ್ಮಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಗುಜರಾತ್	12	9	3	0	18
ಬೆಂಗಳೂರು	12	8	3	1	17
ಪಂಜಾಬ್	12	8	3	1	17
ಮುಂಬೈ	12	7	5	0	14
ಡೆಲ್ಲಿ	12	6	5	1	13
ಕೊಲ್ಕತ್ತಾ	13	5	6	2	12
ಲಕ್ನೋ	12	5	7	0	10
ಹೈದರಾಬಾದ್	12	4	7	1	9
ರಾಜಸ್ಥಾನ್	13	3	10	0	6
ಚೆನ್ನೈ	12	3	9	0	6

ಇಂದಿನ ಪಂದ್ಯ

ಚೆನ್ನೈ ಸೂಪರ್ ಕಿಂಗ್ಸ್
V/S
ರಾಜಸ್ಥಾನ್ ರಾಯಲ್ಸ್

ಸಮಯ: ಸಂಜೆ 7.30

ಸ್ಥಳ : ಅರುಣ್ ಜೆಟ್ಲಿ ಕ್ರೀಡಾಂಗಣ, ದೆಹಲಿ

ಮೈಸೂರು ಚಿತ್ರಮಂದಿರಗಳಲ್ಲಿ

ಚಿತ್ರಮಂದಿರ / ಚಿತ್ರ	
ಪದ್ಮ	(ದೂ: 2521923)
ಮಾಮನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಿಷನ್ ಇಂಪಾಸಿಬಲ್ (ಇಂ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹಿಟ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಡೀ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಟಕೀಲಾ (ಕ)	4 ಪ್ರದರ್ಶನಗಳು
ರಾಜಕಮಲ್	
ಡೆವಿಲ್ಸ್ ಡಬಲ್ ನೆಕ್ಸ್ಟ್ ಲೆವಲ್ (ತ)	4 ಪ್ರದರ್ಶನಗಳು
ಸಂಗಂ	
ರೆಟ್ರೋ (ತ)	4 ಪ್ರದರ್ಶನಗಳು
ಲಿಡೋ	
ಯುದ್ಧಕಾಂಡ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮತ್ತೋರ್ವ ಜೈಲು ಸಿಬ್ಬಂದಿಯಿಂದ ಮುಖ್ಯಮಂತ್ರಿ ಅವಹೇಳನ ಆರೋಪ

ಸರಸ್ವತಿಪುರಂ ಠಾಣೆಯಲ್ಲಿ ಪ್ರಕರಣ ದಾಖಲು; ಜಾಮೀನು ಮಂಜೂರು

ಮೈಸೂರು, ಮೇ 19(ಆರ್‌ಕೆ)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಯ ಬಿಟ್ಟಿದ್ದ ಪ್ರಕರಣದಲ್ಲಿ ಮೈಸೂರು ಕೇಂದ್ರ ಕಾರಾಗೃಹದ ಮಧುಕುಮಾರ್ ಜೈಲು ಪಾಲಾದ ಬೆನ್ನಲ್ಲೇ ಇದೀಗ ಅದೇ ಹಾದಿ ಹಿಡಿದ ಮತ್ತೋರ್ವ ಸಿಬ್ಬಂದಿ ವಿರುದ್ಧವೂ ಸರಸ್ವತಿಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಸೆಂಟ್ರಲ್ ಜೈಲಿನ ವಾರ್ಡನ್ ಎಸ್.ಬಿ. ಪುನೀತ್ ವಿರುದ್ಧ ಟಿ.ಕೆ. ಲೇಔಟ್ ನಿವಾಸಿ ಎಸ್. ಪವನ್ ಲಿಖಿತ ದೂರು ನೀಡಿದ ಹಿನ್ನೆಲೆಯಲ್ಲಿ ಸರಸ್ವತಿಪುರಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಅದರ ಬೆನ್ನಲ್ಲೇ ಪುನೀತ್‌ಗೆ ಮೈಸೂರು ನ್ಯಾಯಾಲಯದಿಂದ ಜಾಮೀನು ಮಂಜೂರಾಗಿದೆ ಎಂದು ಜೈಲಿನ ಮುಖ್ಯ ಅಧೀಕ್ಷಕ ರಮೇಶ್‌ಕುಮಾರ್ ತಿಳಿಸಿದ್ದಾರೆ.

ಕಳೆದ 20 ದಿನಗಳ ಹಿಂದಷ್ಟೇ ಕೇಂದ್ರ ಕಾರಾಗೃಹದ ವಾರ್ಡನ್ ಮಧು ಕುಮಾರ್ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಲಘುವಾಗಿ ಮಾತನಾಡಿದ್ದರು. ಅವರ ವಿರುದ್ಧ ಕೆಲ ಕಾಂಗ್ರೆಸ್ ಕಾರ್ಯಕರ್ತರು ಜೈಲು ಮುಂದೆ ಪ್ರತಿಭಟನೆ ನಡೆಸಿದ್ದರು. ಈ ಸಂಬಂಧ ಕಾಂಗ್ರೆಸ್ ಕಾರ್ಯಕರ್ತ ಪವನ್ ತಮ್ಮ ಮೊಬೈಲ್ ಸ್ಟೇಟಸ್‌ಗೆ ಹಾಕಿಕೊಂಡಿದ್ದರು ಎನ್ನಲಾಗಿದೆ.

ಅದನ್ನು ಗಮನಿಸಿದ ಪುನೀತ್, ತನಗೆ ಚೆನ್ನಾಗಿ ಬಲ್ಲವನಾದ್ದರಿಂದ ಮೊಬೈಲ್‌ನಲ್ಲಿ ಪವನ್ ಸಂಪರ್ಕಿಸಿ, 'ಈಗಾಗಲೇ ಮಧುಕುಮಾರ್ ವಿರುದ್ಧ ಕ್ರಮ ಜರುಗಿಸಲಾಗಿದೆ' ಎಂದು ಸಮರ್ಥನೆ ಮಾಡಿಕೊಳ್ಳುವ ಭರದಲ್ಲಿ ಇಬ್ಬರಿಗೂ ಮಾತಿನ ಚಕಮಕಿ ನಡೆದು ಅಸಭ್ಯ ಪದಗಳ ವಿನಿಮಯವಾಗಿದೆ. ಅದನ್ನು ಆಡಿಯೋ ರೆಕಾರ್ಡ್ ಮಾಡಿಕೊಂಡಿದ್ದ ಪವನ್, ಅದರ ಸಮೇತ ಲಿಖಿತ ದೂರು ನೀಡಿದ ಹಿನ್ನೆಲೆಯಲ್ಲಿ ಪೊಲೀಸರು ಪುನೀತ್ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ನಾಳೆ ಎನ್‌ಐಇ ಕಾಲೇಜಲ್ಲಿ ಎಐ ಆಧರಿತ ಪ್ರಯೋಗಾಲಯ ಉದ್ಘಾಟನೆ

ಮೈಸೂರು,ಮೇ 19(ಎಂಟಿವೈ)– ಮೈಸೂರಿನ ದಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ (ಎನ್‌ಐಇ)ನಲ್ಲಿ ಮೇ 21ರಂದು ಬೆಳಗ್ಗೆ 9.30ಕ್ಕೆ ಕರ್ನಾಟಕದ ಮೊದಲ ಟಿಂಕರರ್ಸ್ ಮಾದರಿ ಎಐ ಆಧರಿತ ಆಲ್ಫಾ ಇನ್ನೋವೇಶನ್ ಅಂಡ್ ಟಿಂಕರರ್ಸ್ ಪ್ರಯೋಗಾಲಯದ ಉದ್ಘಾಟನಾ ಸಮಾರಂಭ ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಡಾ.ರೋಹಿಣಿ ನಾಗಪದ್ಮ ತಿಳಿಸಿದ್ದಾರೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಎನ್‌ಐಇ ಕಾಲೇಜಿನ ಪ್ರಾಂಶುಪಾಲರಾದ ಡಾ.ರೋಹಿಣಿ ನಾಗಪದ್ಮ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವಿಶೇಷ ಪ್ರಯೋಗಾಲಯವು 4300ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಎಐ ಐಒಟಿ ಹೈ–ಪರ್ಫಾರ್ಮೆನ್ಸ್ ಕಂಪ್ಯೂಟಿಂಗ್ (ಹೆಚ್‌ಪಿಸಿ) ಮತ್ತು ಡಿಜಿಟಲ್ ಫ್ಯಾಬ್ರಿಕೇಶನ್ ಕ್ಷೇತ್ರಗಳಲ್ಲಿ ಮುಂದಿನ ತಲೆಮಾರಿನ ನೈಪುಣ್ಯಗಳನ್ನು ಬೆಳೆಸಲು ನೆರವಾಗಲಿದೆ. ಎನ್‌ಐಇ ಮೈಸೂರು, ಮೇಕರ್ ಭವನ ಫೌಂಡೇಶನ್ (ಎಂಬಿಎಫ್), ಲೆನೊವೊ ಮತ್ತು ಮೊಟೊರೋಲಾ ಸಂಸ್ಥೆಗಳ ಸಹಯೋಗದಲ್ಲಿ ಆಲ್ಫಾ (ಎಎಲ್‌ಪಿಎಚ್‌ಎ–ಅಡ್ವಾನ್ಸ್‌ಡ್ ಲ್ಯಾಬೋರೇಟರಿ ಫಾರ್ ಪ್ರೋಗ್ರಾಮಿಂಗ್ ಹಾರ್ಡ್‌ವೇರ್ ಅಂಡ್ ಅನಲಿಟಿಕ್ಸ್) ಇನ್ನೋವೇಶನ್ ಅಂಡ್ ಟಿಂಕರರ್ಸ್ ಸಂಸ್ಥೆಯ ಈ ಲ್ಯಾಬ್ ಅನ್ನು ಆರಂಭಿಸುತ್ತಿದ್ದು, ಇದು ಕರ್ನಾಟಕದಲ್ಲಿ ಟಿಂಕರರ್ಸ್ ಮಾದರಿಯಲ್ಲಿ ನಿರ್ಮಿಸಿರುವ ಮೊದಲ ಸಿಎಸ್‌ಆರ್ ಕೇಂದ್ರಿತ ಪ್ರಯೋಗಾಲಯವಾಗಿದೆ ಎಂದರು.

ಎನ್‌ಐಇ ಉತ್ತರ ಕ್ಯಾಂಪಸ್‌ನಲ್ಲಿ ಈ ಪ್ರಯೋಗಾಲಯವು 24/7 ಪ್ರವೇಶದೊಂದಿಗೆ ಹೈ–ಪರ್ಫಾರ್ಮೆನ್ಸ್ ಕಂಪ್ಯೂಟಿಂಗ್ ವ್ಯವಸ್ಥೆಗಳು, ಸುಧಾರಿತ ಪ್ರೋಟೋಟೈಪಿಂಗ್ ಉಪಕರಣಗಳು, ಮತ್ತು ಎಐ, ಎಂಎಲ್, ಐಒಟಿ ಡಿಜಿಟಲ್ ಫ್ಯಾಬ್ರಿಕೇಶನ್‌ಗಾಗಿ ಅಗತ್ಯ ಸಂಪನ್ಮೂಲಗಳನ್ನು ಒದಗಿಸುತ್ತದೆ. ಲೆನೊವೊ ಗ್ಲೋಬಲ್ ಟೆಕ್ನಾಲಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಮತ್ತು ಮೊಟೊರೋಲಾ ಮೊಬಿಲಿಟಿ ಇಂಡಿಯಾ ಅವರ ಸಿಎಸ್‌ಆರ್ ನೆರವಿನಿಂದ ಈ ಪ್ರಯೋಗಾಲಯವನ್ನು ಸ್ಥಾಪಿಸಲಾಗಿದೆ. ಇದಕ್ಕೆ ಲೆನೊವೊ ಭಾರತ ಆರ್ ಅಂಡ್ ಡಿ ತಂಡಗಳ ಮಾರ್ಗದರ್ಶನ ಮತ್ತು ಸಿಲಬಸ್‌ನ ಬೆಂಬಲವಿದೆ ಎಂದು ತಿಳಿಸಿದರು.

ಎನ್‌ಐಇ ಉತ್ತರ ಕ್ಯಾಂಪಸ್‌ನಲ್ಲಿ ಮೇ 21ರಂದು ಬೆಳಗ್ಗೆ 9.30ಕ್ಕೆ ಆಲ್ಫಾ ಇನ್ನೋವೇಷನ್ ಪ್ರಯೋಗಾಲಯವನ್ನು ಐಐಟಿ ಮಂಡಿ ಸ್ಥಾಪಕ ನಿರ್ದೇಶಕ ಪ್ರೊ. ಟಿಮೋಥಿ ಎ ಗೊನ್ಸಾಲ್‌ವೇಸ್ ಉದ್ಘಾಟಿಸಲಿದ್ದು, ಟಿಂಕರರ್ಸ್ ಲ್ಯಾಬ್ ಅನ್ನು ಲೆನೋವೋ ಇಂಡಿಯಾ ಉಪಾಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಶೈಲೇಂದ್ರ ಕಟ್ಯಾಲ್ ಅವರು ಉದ್ಘಾಟಿಸಲಿದ್ದಾರೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಎನ್‌ಐಇ ಆಲ್ಫಾ ಯೋಜನೆಯ ಮುಖ್ಯಸ್ಥ ವಿ. ಬಾಲಾಜಿ, ಸಾರ್ವಜನಿಕ ಸಂಪರ್ಕ ನಿರ್ವಾಹಕ ಎಸ್.ಆರ್.ಗಾಯಕ್‌ವಾಡ್ ಇದ್ದರು.

ಬಾಗಿಲು ಮೀಟಿ ಲಕ್ಷಾಂತರ ರೂ. ನಗದು, ಚಿನ್ನಾಭರಣ ಕಳವು

ಮೈಸೂರು, ಮೇ 19– ಮನೆಯ ಮುಂಬಾಗಿಲು ಮೀಟಿ, ಲಕ್ಷಾಂತರ ರೂ. ನಗದು ಹಾಗೂ ಚಿನ್ನಾಭರಣ ದೋಚಿಸಿರುವ ಘಟನೆ ಮೈಸೂರಿನ ಆಲನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಮೈಸೂರು ಸಮೀಪದ ಚಿಕ್ಕಹಳ್ಳಿ ಗ್ರಾಮದ ಮಾರಿಗುಡಿ ಬೀದಿ ನಿವಾಸಿ ಮಾದಪ್ಪ ಅವರ ಮನೆಗೆ ನುಗ್ಗಿರುವ ಖದೀಮರು, 4.80 ಲಕ್ಷ ನಗದು ಹಾಗೂ ಸುಮಾರು 3 ಲಕ್ಷ ರೂ. ಮೌಲ್ಯದ ಚಿನ್ನಾಭರಣವನ್ನು ಕಳ್ಳತನ ಮಾಡಿದ್ದಾರೆ. ಮಾದಪ್ಪನವರು ತಮ್ಮ ಪತ್ನಿ ಮಂಗಳಮ್ಮ ಅವರೊಂದಿಗೆ ಮೇ 16ರಂದು ಸಂಜೆ ಮಂತ್ರಾಲಯಕ್ಕೆ ಹೋಗಿದ್ದರು. ನಿನ್ನೆ ಬೆಳಗ್ಗೆ ವಾಪಸ್ಸಾಗಿ ಗೇಟ್ ಬೀಗ ತೆಗೆದು ಒಳ ಹೋದಾಗ ಮುಂಬಾಗಿಲು ಮೀಟಿರುವುದು ಕಾಣಿಸಿತು. ಗಾಬರಿಯಿಂದ ಒಳಹೋದಾಗ ಬೆಡ್ ರೂಂ ವಾರ್ಡ್ರೋಬ್‌ನಲ್ಲಿದ್ದ ಬಟ್ಟೆಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಅದರಲ್ಲಿದ್ದ ನಗದು ಹಾಗೂ ಚಿನ್ನಾಭರಣ ಕಳುವಾಗಿದ್ದವು.

ಹಾಸಿಗೆ ಕೆಳಗೆ ಕೀ: ಸಾಮಾನ್ಯವಾಗಿ ವಾರ್ಡ್ರೋಬ್ ಅಥವಾ ಬೀರುವಿನ ಕೀಯನ್ನು ಮನೆಯವರಿಗೆ ಸಿಗುವಂತೆ ಒಂದು ಜಾಗದಲ್ಲಿ ಇಡಲಾಗುತ್ತದೆ. ಹಾಗೆಯೇ ಮಾದಪ್ಪ ಹಾಗೂ ಮಂಗಳಮ್ಮ ದಂಪತಿ ಮಂತ್ರಾಲಯಕ್ಕೆ ಹೋಗುವಾಗ ವಾರ್ಡ್ರೋಬ್ ಕೀಯನ್ನು ಅದೇ ಕೊಠಡಿಯ ಹಾಸಿಗೆ ಕೆಳಗೆ ಇಟ್ಟಿದ್ದರು. ಮನೆಯನ್ನೆಲ್ಲಾ ಜಾಲಾಡಿರುವ ಖದೀಮರು ಹಾಸಿಗೆ ಕೆಳಗಿದ್ದ ಕೀಯನ್ನೇ ಬಳಸಿ, ಸುಲಭವಾಗಿ ದೋಚಿದ್ದಾರೆ.

ಮಾದಪ್ಪ ದಂಪತಿ ಒಂದೆರಡು ದಿನ ಊರಿನಲ್ಲಿರುವುದಿಲ್ಲ ಎನ್ನುವುದನ್ನು ತಿಳಿದವರೇ ಕಳ್ಳತನ ಮಾಡಿರಬಹುದು ಎಂದು ಪೊಲೀಸರು ಶಂಕಿಸಿದ್ದು, ಖದೀಮರ ಪತ್ತೆಗೆ ಶೋಧ ಮುಂದುವರೆಸಿದ್ದಾರೆ.

ಮಹಿಳೆಯರಿಬ್ಬರು ಸೇರಿ ಮೂವರು ಖದೀಮರ ಸೆರೆ

170 ಗ್ರಾಂನ 4 ಚಿನ್ನದ ಸರ ವಶಕ್ಕೆ

ಕ್ರೈಂ ಬಾಕ್ಸ್

ಮೈಸೂರು, ಮೇ 19(ಆರ್‌ಕೆ)– ಇಬ್ಬರು ಮಹಿಳೆಯರು ಸೇರಿ ಮೂವರು ಸರಗಳ್ಳರನ್ನು ಬಂಧಿಸಿರುವ ಮೈಸೂರಿನ ಲಷ್ಕರ್ ಠಾಣೆ ಪೊಲೀಸರು, 17 ಲಕ್ಷ ರೂ. ಮೌಲ್ಯದ 4 ಚಿನ್ನದ ಸರಗಳನ್ನು ವಶಪಡಿಸಿಕೊಂಡಿದ್ದಾರೆ.

ತಮಿಳುನಾಡಿನ ಕೃಷ್ಣಗಿರಿಯವರಾದ ಸಂಗೀತಾ, ನಾಗರಾಜು ಹಾಗೂ ಕೋಲಾರ ಜಿಲ್ಲೆ ಮಾಲೂರಿನ ಜಯಾ ಬಂಧಿತ ಖದೀಮರು. ಮೇ 17ರಂದು ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಹಿರೇಸಾವೆಯ ಭಾಗ್ಯಮ್ಮ ಎಂಬುವರ ಕೊರಳಿಂದ ಚಿನ್ನದ ಸರ ಎಗರಿಸಲಾಗಿತ್ತು. ಪ್ರಕರಣ ದಾಖಲಿಸಿಕೊಂಡಿದ್ದ ಲಷ್ಕರ್ ಠಾಣೆ ಇನ್‌ಸ್ಪೆಕ್ಟರ್ ಪ್ರಸಾದ್, ಕಾರ್ಯಾಚರಣೆ ನಡೆಸಿ ಕೆಲವೇ ಗಂಟೆಗಳಲ್ಲಿ ಮೂವರು ಖದೀಮರನ್ನು ಸೆರೆ ಹಿಡಿಯುವಲ್ಲಿ ಯಶಸ್ವಿಯಾದರು.

ವಿಚಾರಣೆ ಬಳಿಕ ಆರೋಪಿಗಳು ದೇವರಾಜ ಠಾಣಾ ವ್ಯಾಪ್ತಿಯ ಸಿಟಿ ಬಸ್ ಸ್ಟ್ಯಾಂಡ್‌ನಲ್ಲಿ ಪ್ರಯಾಣಿಕರಿಂದ ಚಿನ್ನದ ಸರ ಎಗರಿಸಿರುವುದು ಸೇರಿದಂತೆ ಒಟ್ಟು 4 ಪ್ರಕರಣಗಳಲ್ಲಿ ಭಾಗಿಯಾಗಿರುವುದು ತಿಳಿಯಿತು. ಬಂಧಿತರಿಂದ 17 ಲಕ್ಷ ರೂ. ಮೌಲ್ಯದ 170 ಗ್ರಾಂನ 4 ಚಿನ್ನದ ಸರ ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಡಿಸಿಪಿ ಕೆ.ಎಸ್.ಸುಂದರರಾಜ್ ಮಾರ್ಗದರ್ಶನದಲ್ಲಿ ದೇವರಾಜ ಉಪವಿಭಾಗದ ಎಸಿಪಿ ರಾಜೇಂದ್ರ ಅವರ ಉಸ್ತುವಾರಿಯಲ್ಲಿ ಲಷ್ಕರ್ ಠಾಣೆ ಇನ್‌ಸ್ಪೆಕ್ಟರ್ ಪ್ರಸಾದ್, ಸಬ್ ಇನ್‌ಸ್ಪೆಕ್ಟರ್ ರಾಧಾ, ಎಎಸ್‌ಐ ಸುರೇಶ್, ಸಿಬ್ಬಂದಿಗಳಾದ ರವಿಕುಮಾರ್, ಮಂಜುನಾಥ, ಅಬ್ದುಲ್ ರೆಹಮಾನ್, ಚೌಡಪ್ಪ, ಕುಮಾರ್ ಹಾಗೂ ಅಶ್ವಿನಿ ಪತ್ತೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಮಳೆ ಬಂದರೆ ಎಲ್ಲಿಯೂ ನೀರು ನಿಲ್ಲಬಾರದು; ಚರಂಡಿ ನೀರು ರಸ್ತೆ, ಮನೆಗಳಿಗೆ ನುಗ್ಗಬಾರದು

ಅಧಿಕಾರಿಗೆ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ತಾಕೀತು



ನಗರಪಾಲಿಕೆ ವಾಣಿ ವಿಲಾಸ ವಾಟರ್ ವರ್ಕ್ಸ್‌ನ ಅಧಿಕಾರಿ–ಸಿಬ್ಬಂದಿ ಹಾಗೂ ಕ್ಷೇತ್ರದ ಕಾಂಗ್ರೆಸ್ ಮುಂಖಂಡರೊಂದಿಗೆ ಶಾಸಕ ಕೆ.ಹರೀಶ್‌ಗೌಡ ಸೋಮವಾರ ಸಭೆ ನಡೆಸಿದರು.

ಮೈಸೂರು, ಮೇ 19(ಎಂಕೆ)– ಕ್ಷೇತ್ರದ ಎಲ್ಲಿಯೂ ಮಳೆ ನೀರು ನಿಲ್ಲಬಾರದು. ಕುಡಿಯುವ ನೀರಿನ ಸಮಸ್ಯೆ ಸಂಪೂರ್ಣ ಬಗೆಹರಿಯಬೇಕು. ಚರಂಡಿ, ಒಳಚರಂಡಿಗಳನ್ನು ಆಗಾಗ ಪರಿಶೀಲನೆ ನಡೆಸುವ ಮೂಲಕ ಸಾಂಕ್ರಾಮಿಕ ರೋಗಗಳು ಹರಡದಂತೆ ಮುನ್ನೆಚ್ಚರಿಕಾ ಕ್ರಮ ವಹಿಸಬೇಕು ಎಂದು ಶಾಸಕ ಕೆ.ಹರೀಶ್‌ಗೌಡ, ನಗರಪಾಲಿಕೆ ವಾಣಿ ವಿಲಾಸ ವಾಟರ್‌ವರ್ಕ್‌ನ ಅಧಿಕಾರಿ–ಸಿಬ್ಬಂದಿಗೆ ಖಡಕ್ ಸೂಚನೆ ನೀಡಿದರು.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿರುವ ತಮ್ಮ ಕಚೇರಿ ಸಭಾಂಗಣದಲ್ಲಿ ಸೋಮವಾರ ನಗರಪಾಲಿಕೆ ವಾಣಿ ವಿಲಾಸ ವಾಟರ್ ವರ್ಕ್ಸ್‌ನ ಅಧಿಕಾರಿ–ಸಿಬ್ಬಂದಿ ಹಾಗೂ ಕ್ಷೇತ್ರದ ಕಾಂಗ್ರೆಸ್ ಮುಂಖಂಡರೊಂದಿಗೆ ಸುದೀರ್ಘ ಸಭೆ ನಡೆಸಿದ ಅವರು, ಮಳೆ ಆರಂಭವಾಗಿದ್ದು, ಕ್ಷೇತ್ರದಲ್ಲಿರುವ ಚರಂಡಿ, ಒಳಚರಂಡಿ ವ್ಯವಸ್ಥೆ ಬಗ್ಗೆ ಗಮನಹರಿಸಬೇಕು. ಮಳೆ ನೀರಿನಿಂದ ಯಾವುದೇ ತೊಂದರೆಯಾಗದಂತೆ ಕಾರ್ಯನಿರ್ವಹಿಸಬೇಕು. ಮಳೆ ಹೆಚ್ಚಾಗುವ ಮುನ್ನವೇ ಎಚ್ಚೆತ್ತುಕೊಳ್ಳಬೇಕು ಎಂದು ತಿಳಿಸಿದರು.

ಕ್ಷೇತ್ರದ ನಿವಾಸಿಗಳಿಗೆ ಯಾವುದೇ ರೀತಿಯ ತೊಂದರೆಯಾಗಬಾರದು. ಪ್ರತೀ ವಾರ್ಡ್ ವ್ಯಾಪ್ತಿಯಲ್ಲಿಯೂ ಕಂಡು ಬರುವ ಸಮಸ್ಯೆಗಳನ್ನು ಪಟ್ಟಿ ಮಾಡಿಕೊಂಡು ತ್ವರಿತವಾಗಿ ಬಗೆಹರಿಸಬೇಕು. ಅಗತ್ಯವಿರುವ ಕಾಮಗಾರಿಗಳನ್ನು ಕೂಡಲೇ ಕೈಗೊಳ್ಳುವ ಜೊತೆಗೆ ನಿಗದಿತ ಅವಧಿಯಲ್ಲಿ ಮುಕ್ತಾಯಗೊಳಿಸಬೇಕು. ಸಾಂಕ್ರಾಮಿಕ ಕಾಯಿಲೆಗಳು ಹರಡುವ ಸಾಧ್ಯತೆ ಇದ್ದು, ಮಳೆ ನೀರು ಎಲ್ಲಿಯೂ ನಿಲ್ಲದಂತೆ ನೋಡಿಕೊಳ್ಳಿ ಎಂದು ತಿಳಿ ಹೇಳಿದರು.

ಸಮಸ್ಯೆ ಮತ್ತು ಪರಿಹಾರ ಚರ್ಚೆ: ಪಾಲಿಕೆ ಅಧಿಕಾರಿಗಳ ಜೊತೆಗೆ ಕ್ಷೇತ್ರದ ಮುಖಂಡರನ್ನೂ ಒಳಗೊಂಡ ಸಭೆಯಲ್ಲಿ ಸಮಸ್ಯೆಗಳು ವ್ಯಕ್ತವಾದಂತೆ ಪರಿಹಾರ ಕ್ರಮಗಳ ಬಗ್ಗೆಯೂ ಚರ್ಚಿಸಲಾಯಿತು. ಹಲವು ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವ ಭರವಸೆ ನೀಡಲಾಯಿತು. ಹಾಗೆಯೇ ಕ್ಷೇತ್ರದಲ್ಲಿ ನಾಲ್ಕು ಜೆಟಿಂಗ್ ಯಂತ್ರಗಳನ್ನು ಸದ್ಬಳಕೆ ಮಾಡಿಕೊಂಡು ಒಳಚರಂಡಿಗಳು ಬ್ಲಾಕ್ ಆಗದಂತೆ ಕ್ರಮವಹಿಸಲು ತಿಳಿಸಲಾಯಿತು.

ನಗರಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಸಿಂಧು, ವಾಣಿ ವಿಲಾಸ್ ವಾಟರ್ ವರ್ಕ್ಸ್‌ನ ಇಂಜಿನಿಯರ್‌ಗಳಾದ ಅಶ್ವಿನ್, ಮೊಹಮ್ಮದ್ ಮುಸ್ತಫಾ, ಚಾಮರಾಜ ಕ್ಷೇತ್ರದ ಬ್ಲಾಕ್ ಅಧ್ಯಕ್ಷರು, 20 ವಾರ್ಡ್‌ಗಳ ಅಧ್ಯಕ್ಷರು, ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಜೆಎಸ್‌ಎಸ್ ಕಾನೂನು ಕಾಲೇಜಲ್ಲಿ ನವೀಕೃತ ಅಣಕು ನ್ಯಾಯಾಲಯ

ಹೈಕೋರ್ಟ್ ನ್ಯಾಯಮೂರ್ತಿ ಇಂದಿರೇಶ್ ಉದ್ಘಾಟನೆ



ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ನವೀಕೃತ ಅಣಕು ನ್ಯಾಯಾಲಯವನ್ನು ಹೈಕೋರ್ಟ್ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಸೋಮವಾರ ಉದ್ಘಾಟಿಸಿದರು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಕುಲಪತಿ ಪ್ರೊ.ಸಿ.ಬಸವರಾಜು ಮತ್ತಿತರರಿದ್ದರು.

ಸ್ಪರ್ಧಾತ್ಮಕ ಯುಗದಲ್ಲಿ ಅವಶ್ಯವಿದೆ...

ಇದು ಸ್ಪರ್ಧಾತ್ಮಕ ಯುಗ. ಇಲ್ಲಿ ವ್ಯಕ್ತಿಯೋರ್ವ ತಾನು ಕಲಿತದ್ದನ್ನು ಹೇಗೆ ಪ್ರಸ್ತುತ ಪಡಿಸುತ್ತಾನೆ ಎಂಬುದು ಮುಖ್ಯವಾಗುತ್ತದೆ. ಮೊದಲೆಲ್ಲಾ ಹೇಳಿಕೊಡುತ್ತಿದ್ದರು. ಆದರೆ, ನಾವೀಗ ಸ್ವತಃ ಕಲಿಯಬೇಕಾದ ದಿನಮಾನದಲ್ಲಿದ್ದೇವೆ. ವಕೀಲ ವೃತ್ತಿಯಲ್ಲಿ ಎಲ್ಲಿ ಓದಿದ್ದಾರೆ, ಯಾವ ಸಂಸ್ಥೆ ಎಂಬುದಕ್ಕಿಂತ ಸಂವಹನ ಕಲೆ ಹೇಗಿದೆ, ಕೇಸ್ ಗೆಲ್ಲುವ ಬುದ್ಧಿವಂತಿಕೆ ಇದೆಯಾ, ವೃತ್ತಿ ಅನುಭವ ಇದೆಯೇ, ಹೇಗೆ ವಾದ ಮಂಡಿಸುತ್ತಾರೆ ಎಂಬುದು ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ಅಣಕು ನ್ಯಾಯಾಲಯದ ಸಹಕಾರಿಯಾಗಿರಲಿದೆ.

– ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

ಮೈಸೂರು, ಮೇ 19(ಎಂಕೆ)– ಮೈಸೂರಿನ ಕುವೆಂಪುನಗರದಲ್ಲಿರುವ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ನವೀಕೃತ ಅಣಕು ನ್ಯಾಯಾಲಯವನ್ನು ಹೈಕೋರ್ಟ್ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಸೋಮವಾರ ಉದ್ಘಾಟಿಸಿದರು.

ಬಳಿಕ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಣಕು ನ್ಯಾಯಾಲಯ ಕಾನೂನು ಅಧ್ಯಯನದ ಜೊತೆಗೆ ವೃತ್ತಿಯ ಅನುಭವ ನೀಡುತ್ತದೆ. ನ್ಯಾಯಾಂಗ ವ್ಯವಸ್ಥೆಯನ್ನು ಸರಿಯಾಗಿ ಅರ್ಥೈಸಿಕೊಂಡು, ನ್ಯಾಯಾಲಯ ರೀತಿ–ನೀತಿಗಳನ್ನು ಅರ್ಥೈಸಿಕೊಳ್ಳಲು ಅಣಕು ನ್ಯಾಯಾಲಯ ಉತ್ತಮ ಸಹಕಾರಿಯಾಗಿದೆ ಎಂದು ತಿಳಿಸಿದರು.

ಭಾರತೀಯ ನಾಗರಿಕ ಸೇವೆಗಳಲ್ಲಿ ಕಾನೂನು ವ್ಯವಸ್ಥೆಯಲ್ಲಿ ಸಲ್ಲಿಸುವ ಸೇವೆ ಅತ್ಯುನ್ನತವಾದುದಾಗಿದೆ. ಈ ನಿಟ್ಟಿನಲ್ಲಿ ನ್ಯಾಯಾಂಗ ವ್ಯವಸ್ಥೆಯ ಪರಿಣಾಮಕಾರಿ ಕಲಿಕೆ ಅವಶ್ಯವಿದ್ದು, ಅಣಕು ನ್ಯಾಯಾಲಯ ಪಠ್ಯಕ್ರಮದ ಒಂದು ಭಾಗವಾಗಿ ಉತ್ತಮ ನ್ಯಾಯವಾದಿಗಳನ್ನು, ನ್ಯಾಯಾಧೀಶರನ್ನು ರೂಪಿಸುವ ವೇದಿಕೆಯಾಗಿ ಕೆಲಸ ಮಾಡಲಿದೆ. ಸ್ಪರ್ಧಾತ್ಮಕ ಯುಗದಲ್ಲಿ ಅಂಕಗಳಿಗಿಂತ ಕೌಶಲ್ಯತೆಗೆ ಆದ್ಯತೆ ಹೆಚ್ಚಿದ್ದು, ವಾಕ್ಚಾತುರ್ಯವನ್ನು ಉತ್ತಮಪಡಿಸಿಕೊಳ್ಳುವುದಕ್ಕೂ ಮೂಟ್ ಕೋರ್ಟ್ ಸಹಕಾರಿಯಾಗಲಿದೆ ಎಂದರು.

ನಮ್ಮದು ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ಡಾ.ಬಿ.ಆರ್ ಅಂಬೇಡ್ಕರ್ ಅವರು ನೀಡಿರುವ ಸಂವಿಧಾನ ನಮಗೆಲ್ಲಾ ಸುಪ್ರೀಂ ಆಗಿದೆ. ಹಾಗಾಗಿ ನ್ಯಾಯಾಲಯಕ್ಕೆ ಹೋಗುವ ಮುನ್ನ ವಾದ ಮಂಡಿಸಲು ಮಾಡಿಕೊಳ್ಳುವ ಪೂರಕ ಸಿದ್ಧತೆಗಳಲ್ಲಿ ಕೇಸ್ ಬಗ್ಗೆ ಅಧ್ಯಯನ ನಡೆಸುವುದು, ತೀರ್ಪು ಯಾರ ಪರವಾಗಿ ಬರಲಿದೆ ಎಂಬುದನ್ನು ಅವಲೋಕಿಸುವುದು, ತಂತ್ರಜ್ಞಾನದ ಬಳಕೆ, ಸಾಕ್ಷಿಗಳ ಸಂಗ್ರಹ ಮುಖ್ಯವಾಗುತ್ತದೆ. ಇದೆಲ್ಲವನ್ನೂ ವಿದ್ಯಾರ್ಥಿದೆಸೆಯಲ್ಲೇ ಪ್ರಾಯೋಗಿಕವಾಗಿ ಕಲಿತರೆ ವೃತ್ತಿ ಬದುಕು ಇತರರಿಗೆ ಮಾದರಿಯಾಗುವಂತೆ ರೂಪಿಸಿಕೊಳ್ಳಲು ಸಾಧ್ಯವಾಗಲಿದೆ ಎಂದು ಹೇಳಿದರು

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಕುಲಪತಿ ಪ್ರೊ.ಸಿ.ಬಸವರಾಜು, ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ಜೆಎಸ್‌ಎಸ್ ಕಾನೂನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರೊ.ಕೆ.ಎಸ್.ಸುರೇಶ್, ಪ್ರಾಂಶುಪಾಲರಾದ ಡಾ.ಎನ್.ವಾಣಿಶ್ರೀ, ಎಂ.ಪಿ.ನಾಗೇಂದ್ರ ಮೂರ್ತಿ, ಡಾ.ಎಟಿ.ಜಗದೀಶ್ ಮತ್ತಿತರರಿದ್ದರು.

ಮಾಲಿಕ್ಯುಲರ್ ಮೆಡಿಸಿನ್ ಕುರಿತು

ಮೇ 28, 29ರಂದು ಮೈಸೂರಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನ


ಪ್ರೊ.ರಂಗಪ್ಪ

ಮೈಸೂರು,ಮೇ 19(ಪಿಎಂ)– ಕೆಮಿಕಲ್ ಬಯೋಲಜಿ ಸೊಸೈಟಿ ಇಂಡಿಯಾ, ಮೈಸೂರು ವಿವಿಯ ಕೆಮಿಸ್ಟ್ರಿ ವಿಭಾಗ ಹಾಗೂ ಆರ್ಗ್ಯಾನಿಕ್ ಕೆಮಿಸ್ಟ್ರಿ ವಿಭಾಗ, ಪ್ರೊ.ಕೆ.ಎಸ್. ರಂಗಪ್ಪ ಅವರ ಹಿತೈಷಿಗಳ ಸಂಯುಕ್ತಾಶ್ರಯದಲ್ಲಿ ಮೇ 28 ಮತ್ತು 29ರಂದು 'ಮಾಲಿಕ್ಯುಲರ್ ಮೆಡಿಸಿನ್‌ನಲ್ಲಿ ಹೊಸ ಸವಾಲು ಗಳು ಹಾಗೂ ಆವಿಷ್ಕಾರಗಳು' ಕುರಿತಂತೆ ಎರಡು ದಿನಗಳ ಅಂತಾ ರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ.

ಮೈಸೂರು ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಸಮ್ಮೇಳನ ನಡೆಯಲಿದೆ. ರಾಸಾಯನಿಕ ವಿಜ್ಞಾನ, ಮಾಲಿಕ್ಯುಲರ್ ಬಯೋಲಜಿ, ಮೆಡಿಸಿನ್, ನ್ಯಾನೋ ಟೆಕ್ನಾಲಜಿಯನ್ನು ಒಗ್ಗೂಡಿಸುವಲ್ಲಿನ ಅತ್ಯಾಧುನಿಕ ಪ್ರಗತಿಯನ್ನು ಈ ಸಮ್ಮೇಳನ ಅನಾವರಣಗೊಳಿಸಲಿದೆ. ಜೊತೆಗೆ ಖ್ಯಾತ ತಜ್ಞರನ್ನು ಒಂದು ವೇದಿಕೆಯಲ್ಲಿ ಒಟ್ಟುಗೂಡಿಸುವ ಮೂಲಕ ಅವರ ನಡುವೆ ವೈಜ್ಞಾನಿಕ ವಿಚಾರ ಹಾಗೂ ಪರಿಣತಿಯನ್ನು ವಿನಿಮಯಕ್ಕೆ ಅವಕಾಶ ಕಲ್ಪಿಸುವ ಉದ್ದೇಶ ಸಹ ಹೊಂದಲಾಗಿದೆ.

ಅಲ್ಲದೆ, ಪ್ರಪಂಚದಾದ್ಯಂತ ವಿಜ್ಞಾನಿಗಳು, ಸಂಶೋಧಕರು, ವೈದ್ಯರು ಮತ್ತು ಉದ್ಯಮ ಪ್ರತಿನಿಧಿಗಳನ್ನು ಒಟ್ಟುಗೂಡಿಸಿ ಆರೋಗ್ಯ ರಕ್ಷಣೆಯ ಭವಿಷ್ಯವನ್ನು ರೂಪಿಸುವ ಆವಿಷ್ಕಾರ ಗಳನ್ನು ಹಂಚಿಕೊಳ್ಳಲು ಹಾಗೂ ಅತ್ಯಾಧುನಿಕ ವಿಧಾನಗಳನ್ನು ಚರ್ಚಿಸಲು ಅವಕಾಶವಾಗಲಿದೆ. ಸಮ್ಮೇಳನ ದಲ್ಲಿ ಪೋಸ್ಟರ್ ಪ್ರಸ್ತುತಿ ಹಾಗೂ ಪ್ರಾಯೋಜಕತ್ವ ನೀಡಲು ಅವಕಾಶ ಕಲ್ಪಿಸಲಾಗಿದೆ.

ಸಮ್ಮೇಳನದಲ್ಲಿ ಭಾಗವಹಿಸಲು ವಿದ್ಯಾರ್ಥಿ ಗಳು, ಸಂಶೋಧನಾ ವಿದ್ಯಾರ್ಥಿಗಳು, ಅಧ್ಯಾಪಕ ಸದಸ್ಯರು, ಕಾರ್ಪೋರೇಟ್ ಮತ್ತು ಕೈಗಾರಿಕಾ ಪ್ರತಿನಿಧಿಗಳು ಹಾಗೂ ವಿದೇಶಿ ಪ್ರತಿನಿಧಿಗಳಿಗೆ ಪ್ರತ್ಯೇಕ ನೋಂದಣಿ ಶುಲ್ಕ ನಿಗಧಿ ಮಾಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ www.ncimm2025.com ವೆಬ್‌ಸೈಟ್‌ಗೆ ಆಸಕ್ತರು ಭೇಟಿ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

ರಾಜ್ಯದಲ್ಲಿ ಮುಂದಿನ 1 ವಾರ ಭಾರೀ ಮಳೆ: ಬೆಂಗಳೂರಿಗೆ ಯೆಲ್ಲೋ ಅಲರ್ಟ್ ಘೋಷಣೆ

ಬೆಂಗಳೂರು, ಮೇ.19– ಬೆಂಗಳೂರಿನಲ್ಲಿ ಇನ್ನೂ ಎರಡು ದಿನ ಭಾರೀ ಮಳೆಯಾಗುವ ಸಾಧ್ಯತೆಯಿದ್ದು, ಸೋಮವಾರ ಮತ್ತು ಮಂಗಳವಾರ (ಮೇ 20) ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಕರಾವಳಿ ಜಿಲ್ಲೆಗಳಿಗೆ ಇಂದಿನಿಂದ ಮೂರು ದಿನ ರೆಡ್ ಅಲರ್ಟ್, ನಂತರದ ನಾಲ್ಕು ದಿನ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಇನ್ನೂ ಉತ್ತರ, ದಕ್ಷಿಣ ಒಳನಾಡಿಗೆ ರೆಡ್ ಅಲರ್ಟ್ ಘೋಷಿಸಲಾಗಿದೆ.

ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಬಾಗಲಕೋಟೆ, ಬೆಳಗಾವಿ, ಧಾರವಾಡ, ಹಾವೇರಿ, ಬಳ್ಳಾರಿ, ಹಾಸನ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಹಾಗೂ ಗದಗ, ಕೊಪ್ಪಳ, ವಿಜಯಪುರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಮೈಸೂರು, ಮಂಡ್ಯ, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ರಾಜ್ಯಾದ್ಯಂತ ಗುಡುಗು, ಸಿಡಿಲು ಸಹಿತ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.


36ನೇ ವರ್ಷದ ಪುಣ್ಯಸ್ಮರಣೆ
ದಿ॥ ಶ್ರೀಮಾನ್ ಹೆಚ್. ಎಸ್. ರಂಗಪ್ಪರವರು
ಚೀಫ್ ಕ್ಯಾಶಿಯರ್, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಮೈಸೂರು
ಇಂತಿ
ದರ್ಶನ್ ಯದುರಾಜ್ ಮತ್ತು ಕುಟುಂಬವರ್ಗ

ಹಸಿರು ನಮ್ಮ ಉಸಿರು

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು, ಅದರ ಮಾಲೀಕರಾದ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಮಂಡಕಳ್ಳಿ ಗ್ರಾಮದ, ಹರಿಜನ ರಸ್ತೆ, ಮೈಸೂರು–571311 ರ ನಿವಾಸಿಯಾದ, ಶ್ರೀ.ಪುಟ್ಟಯ್ಯ ಬಿನ್ ಲೇಟ್.ಕಾಳಯ್ಯ ಮತ್ತು ಇವರ ಕುಟುಂಬದ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ, ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಭಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಬಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಸಂಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷಿದಾರರು ನಿರ್ಬಂಧಿತರಾಗುವುದಿಲ್ಲ.

ಷೆಡ್ಯೂಲ್ : ಮೈಸೂರು ತಾಲ್ಲೂಕು, ವರುಣ ಹೋಬಳಿ, ಮರಶೆ ಗ್ರಾಮದ ಸರ್ವೆ ನಂಬರ್ 103/1 ರಲ್ಲಿನ ಒಂದು ಎಕರೆ (1.00.00.00) ವಿಸ್ತೀರ್ಣದ ತರಿ ಜಮೀನು. ಸದರಿ ಜಮೀನಿಗೆ ಚಕ್ಕುಬಂಧಿ:– ಪೂರ್ವಕ್ಕೆ : ಸರ್ವೆ ನಂಬರ್: 103/2, ಪಶ್ಚಿಮಕ್ಕೆ : ಸರ್ವೆ ನಂಬರ್: 104 , ಉತ್ತರಕ್ಕೆ : ಸರ್ವೆ ನಂಬರ್: 102 , ದಕ್ಷಿಣಕ್ಕೆ : ನೀರು ಹರಿಯುವ ಹಳ್ಳ

Sd/-Prakash Kalappa, Advocate & Legal Consultant, KAR-1996-2000
2-3, First Floor, PRI Complex, 67/7A, New Sayyajirao Road, Fort Mohalla, Mysore 570004 India , Cell: 93431 12535.
E-mail: mnprakashkalappa@gmail.com
ಮೈಸೂರು : 19.05.2025

ಸಾರ್ವಜನಿಕ ಪ್ರಕಟಣೆ

ಈ ಮುಖಾಂತರ ಸಾರ್ವಜನಿಕರಿಗೆ ತಿಳಿಸುವುದೇನೆಂದರೇ ನಮ್ಮ ಕಕ್ಷಿದಾರರು ಇದೇ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನುಗಳಿಗೆ ಸಂಬಂಧಪಟ್ಟ ಹಾಗೆ ಅದರ ಹಾಲಿ ಮಾಲೀಕರಾದ ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲೂಕು, ಶ್ರೀರಂಗಪಟ್ಟಣ ಟೌನ್, ಪೂರ್ಣಯ್ಯ ಬೀದಿ, ನಿತ್ಯಾನಂದ ನಿಲಯ ಮನೆ ನಂ. 3378ರಲ್ಲಿ ವಾಸವಾಗಿರುವ ಶ್ರೀ ಬಿ.ಎಸ್. ಗೌಡ ರವರ ಮಗನಾದ ಸುಮಾರು 52 ವರ್ಷದ ಶ್ರೀ ಎಸ್. ಚಿದಾನಂದ್ ರವರಿಂದ ಖರೀದಿಸುವ ಉದ್ದೇಶದಿಂದ ಸದರಿಯವರಿಂದ ಕ್ರಯ ಪತ್ರವನ್ನು ನೊಂದಾಯಿಸಿಕೊಳ್ಳಲು ತಯಾರಿರುತ್ತೇವೆ. ಆದುದರಿಂದ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳ ಸಂಬಂಧಪಟ್ಟ ಹಾಗೆ ಬೇರೆ ಯಾರಿಗಾದರು ಯಾವುದೇ ರೀತಿಯಲ್ಲಾದರು ಹಕ್ಕು, ಬಾದ್ಯತೆ, ಅಧಿಕಾರ, ಆಸಕ್ತಿ ಇದ್ದಲ್ಲಿ ಇಂದಿನಿಂದ 7 ದಿನಗಳ ಕಾಲಾವಧಿಯೊಳಗೆ ಸಂಬಂಧಪಟ್ಟ ಅಸಲಿ ದಾಖಲೆಗಳೊಂದಿಗೆ ಈ ಕೆಳಕಂಡ ವಕೀಲರನ್ನು ಅವರ ಕಛೇರಿಯಲ್ಲಿ ಖುದ್ದಾಗಿ ಭೇಟಿ ಮಾಡತಕ್ಕದ್ದು. ಒಂದು ವೇಳೆ ಆ ರೀತಿಯಾಗಿ ಯಾರು ಭೇಟಿ ಮಾಡದಿದ್ದಲ್ಲಿ ಸದರಿ ಸ್ವತ್ತುಗಳ ಮಾರಾಟ ಸಂಬಂದಪಟ್ಟ ಹಾಗೆ ಯಾರಿಗೂ ಯಾವುದೇ ರೀತಿಯಾದ ಅಭ್ಯಂತರವಿಲ್ಲವೆಂದು ಪರಿಗಣಿಸಿ ಕ್ರಯಪತ್ರವನ್ನು ನೊಂದಣಿ ಮಾಡಿಕೊಳ್ಳಲಾಗುವುದು. ಒಂದು ವೇಳೆ ಯಾರಾದರೂ ನಿಗಧಿತ ಕಾಲಾವಧಿ ಕಳೆದ ನಂತರ ಈ ಬಗ್ಗೆ ಪ್ರಶ್ನಿಸಿದ್ದಲ್ಲಿ ಅದಕ್ಕೆ ನಮ್ಮ ಕಕ್ಷಿದಾರರು ಯಾವುದೇ ರೀತಿಯಲ್ಲೂ ಹೊಣೆಯಾಗುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲೂಕು, ಕೆ. ಶೆಟ್ಟಿಹಳ್ಳಿ–2 ಹೋಬಳಿ, ಚಿನ್ನಾಯ್ಯನಹಳ್ಳಿ ಗ್ರಾಮದ ಸರ್ವೆ ನಂ. 161/5 ರಲ್ಲಿ ತರಿ ವಿಸ್ತೀರ್ಣ 0–14 (ಹದಿನಾಲ್ಕು) ಗುಂಟೆ ಖುಷ್ಕಿ ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ: ಬಸವರಾಜು ರವರ ಜಮೀನು ; ಪಶ್ಚಿಮಕ್ಕೆ: ಶೇಷಾದ್ರಿ ಅಯ್ಯಂಗಾರ್ ರವರ ಜಮೀನು ; ಉತ್ತರಕ್ಕೆ: ಕೆಂಪೇಗೌಡ ರವರ ಜಮೀನು ; ದಕ್ಷಿಣಕ್ಕೆ: ರಸ್ತೆ.

ಸಹಿ/– ದಿನೇಶ್ ಸೋಲಂಕಿ, ವಕೀಲರು, ನಂ. 1197, 12/2, ಕೃಷ್ಣರಾಜ ಬುಲೆವಾರ್ಡ್ ರಸ್ತೆ, ಮೈಸೂರು ಟೆನ್ನಿಸ್ ಕೋರ್ಟ್ ಮುಂಭಾಗ, ಚಾಮರಾಜಪುರಂ, ಮೈಸೂರು. ಮೊ: 9343430011
ದಿನಾಂಕ: 16–05–2025
ಸ್ಥಳ: ಶ್ರೀರಂಗಪಟ್ಟಣ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ ಮೈಸೂರು, ಹೆಬ್ಬಾಳ್, 1ನೇ ಹಂತ, 6ನೇ ಮೇನ್, ಮನೆ ನಂ. ಎಂಐಜಿ–2, ರಲ್ಲಿ ವಾಸವಾಗಿರುವ ಎ. ಚಂದ್ರಪ್ಪರವರ ಮಗನಾದ ಎ. ಪೊಂಪಣ್ಣ ರವರಿಗೆ ಸೇರಿದ ಸ್ವತ್ತಿನ ಮಂಜೂರಾತಿ ಪತ್ರ, ದಿನಾಂಕ 24/02/1994 ರ ಸ್ವಾಧೀನ ಪತ್ರ ಮತ್ತು ಕ್ರಯಪತ್ರದ ದಸ್ತಾವೇಜು ನಂ.ಎಂಡಿಎ–1–02426 ದಿನಾಂಕ 26–06–2006 ರ ಮೂಲ ದಾಖಲಾತಿಗಳು ದಿನಾಂಕ 10/02/2025 ರಂದು ಕಳೆದು ಹೋಗಿರುತ್ತದೆ. ಇದರ ಸಂಬಂಧ ದಿನಾಂಕ 16/05/2025 ರಂದು ಮೈಸೂರಿನ ಪೊಲೀಸ್ ಠಾಣೆಗೆ ದೂರಿನ ಸಂಖ್ಯೆ P02177250600145 ರಂತೆ ದೂರನ್ನು ದಾಖಲಿಸಿರುತ್ತಾರೆ. ಸದರಿ ಮೇಲೆ ಹೇಳಿರುವ ಮೂಲ ದಾಖಲಾತಿಗಳು ಯಾರಿಗಾದರೂ ದೊರಕಿದಲ್ಲಿ ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಸಾರ್ವಜನಿಕ ಪ್ರಕಟಣೆ ದಿನಾಂಕದಿಂದ 7 (ಏಳು) ದಿನಗಳ ಒಳಗಾಗಿ ತಲುಪಿಸತಕ್ಕದ್ದು. ಒಂದೊಮ್ಮೆ ಯಾವುದೇ ವ್ಯಕ್ತಿ/ವ್ಯಕ್ತಿಗಳು ಸದರಿ ದಾಖಲಾತಿಗಳು ಹಾಗೂ ಕ್ರಯಪತ್ರವನ್ನು ದುರುಪಯೋಗಪಡಿಸಿಕೊಂಡಲ್ಲಿ ಸದರಿ ವ್ಯಕ್ತಿಗಳೇ ಹೊಣೆಗಾರರಾಗುತ್ತಾರೆ. ಹಾಗೂ ನಮ್ಮ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/– ಲೋಹಿತ್ .ಎನ್, ಬಿ.ಎ.ಎಲ್, ಎಲ್.ಎಲ್.ಬಿ., ವಕೀಲರು, ಶ್ರೀ ಸಾಯಿ ಲಾ–ಅಸೋಸಿಯೇಟ್ಸ್ ನಂ. 2967/2, 14ನೇ ಮೇನ್, 2ನೇ ಕ್ರಾಸ್, ಸರಸ್ವತಿಪುರಂ, ಮೈಸೂರು–570009.
Mob: 9611113323
ದಿನಾಂಕ: 19/05/2025
ಸ್ಥಳ : ಮೈಸೂರು

ಸಾರ್ವಜನಿಕರ ಗಮನಕ್ಕೆ

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ ಆಸ್ಪತ್ರೆ ಉ ॥ ಕಾಳಶೆಟ್ಟಿ ಉ ॥ ಆಸ್ಪತ್ರೆ ಕಾಳಶೆಟ್ಟಿ ಉ ॥ ಆಸ್ಪತ್ರೆಶೆಟ್ಟಿ ಬಿನ್ ಸೋಮಶೆಟ್ಟಿ ಉ ॥ ಸೋಮಾರಶೆಟ್ಟಿ ಉ ॥ ಗಾ. ಕಾಳಶೆಟ್ಟಿ ರವರ ಬಾಬ್ತು 2.02 ಗುಂಟೆ ಜಮೀನಿನ ಪೈಕಿ ಸದರಿ ಆಸ್ಪತ್ರೆಶೆಟ್ಟಿ ರವರ ಮಗ ಶ್ರೀ.ಕುಳ್ಳಯ್ಯ ಶೆಟ್ಟಿ ಉ ॥ ಕುಳ್ಳಶೆಟ್ಟಿ ರವರಿಗೆ ವಿಭಾಗವಾಗಿ ಖಾತೆಯಾಗಿರುವ ಖುಷ್ಕೀ ಜಮೀನಿನ ವಿಸ್ತೀರ್ಣ 0–20.8 ಗುಂಟೆ ವುಳ್ಳ ಜಮೀನನ್ನು ನನ್ನ ಕಕ್ಷಿದಾರರಾದ ಶ್ರೀ. ಡಾ ॥ ಕೆ. ಎಸ್. ಸದಾನಂದರವರಿಗೆ ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಒಪ್ಪಂದ ಮಾಡಿಕೊಂಡಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವ ವಿಧವಾದ ಹಕ್ಕು, ಆಸಕ್ತಿಗಳಿದ್ದಲ್ಲಿ ದಾಖಲಾತಿಗಳ ಸಮೇತ ಈ ಕೆಳಕಂಡ ಕಛೇರಿಯ ವಿಳಾಸಕ್ಕೆ 7 ದಿನಗಳ ಒಳಗಾಗಿ ಸಂಪರ್ಕಿಸಲು ಕೋರಲಾಗಿದೆ, ತಪ್ಪಿದ್ದಲ್ಲಿ ಯಾವುದೇ ಆಕ್ಷೇಪವಿಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಕ್ರಯವನ್ನು ಊರ್ಜಿತಗೊಳಿ––ಸುತ್ತಾರೆ. ನಂತರದಲ್ಲಿ ಬಂದ ಯಾವುದೇ ಹಕ್ಕುಗಳನ್ನು ಪರಿಗಣಿಸುವುದಿಲ್ಲ ಹಾಗೂ ಕಾನೂನಿನ ರೀತಿ ಊರ್ಜಿತವಿಲ್ಲವೆಂದು ತಿಳಿಯುವುದು. ಕಛೇರಿ ಸಂಖ್ಯೆ 2368/2, ಮೊದಲನೆ ಮಹಡಿ, ನ್ಯೂ ಕಾಂತರಾಜ ಅರಸು ರಸ್ತೆ, ಕೆ.ಜಿ.ಕೊಪ್ಪಲು, ಮೈಸೂರು

ಷೆಡೂಲ್ ಸ್ವತ್ತಿನ ವಿವರ

ಮೈಸೂರು ತಾ ಇಲಾವಾಲ ಹೋಬಳಿ, ಕೆ. ಹೆಮ್ಮನಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ.186 ರೀ ಸರ್ವೆ ನಂ. 186/1 ರಲ್ಲಿ ಒಟ್ಟು ವಿಸ್ತೀರ್ಣ 0–20.8 ಗುಂಟೆ ವುಳ್ಳ ಜಮೀನಿಗ ಚಕ್ಕುಬಂದಿ. ಪೂರ್ವ – ಸರ್ವೆ ನಂ. 254 ರ ಜಮೀನು , ಪಶ್ಚಿಮ – ಸರ್ವೆ ನಂ. 179/1 ರ ಜಮೀನು, ಉತ್ತರ – ಸರ್ವೆ ನಂ. 186/5 ರ ಸದಾನಂದ ರವರ ಬಾಬ್ತು ಸ್ವತ್ತು, ದಕ್ಷಿಣ – ಸರ್ವೆ ನಂ. 186/11 ಮತ್ತು 186/12 ರ ಜಮೀನು.
ಮೈಸೂರು

S.Deepak Kumar BA., LLB.,
ADVOCATE
#2368/2, 1st Floor,
New Kantharaja Urs Road,
K.G.Koppal, Mysuru-570 014
Mob: 80739 06193

ಪ್ರಮಾಣ ಪತ್ರ

ನಾನು, ಕಲಾವತಿ. ಬಿ.ಕೆ, W/o ಸುಧಾಕರ್ ಗರಿಕೆಕಟ್ಟೆ ಕಾವಲ್ ಗ್ರಾಮ, ಫಾರ್ಮ್ ಹೌಸ್, ಹಂಪಾಪುರ ಹೋಬಳಿ, ಎಚ್.ಡಿ.ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆಯಲ್ಲಿ ವಾಸಿಸುತ್ತಿದ್ದು, ನನ್ನ ಪಡಿತರ ಚೀಟಿ, ಚುನಾವಣಾ ಗುರುತಿನ ಚೀಟಿ, ಆಧಾರ್ ಕಾರ್ಡ್ ಮತ್ತು ಚಾಲನಾ ಪರವಾನಗಿಯಲ್ಲಿ ನನ್ನ ಹೆಸರನ್ನು ಕಲಾವತಿ.ಬಿ.ಕೆ ಎಂದು ಉಲ್ಲೇಖಿಸಲಾಗಿದೆ ಮತ್ತು ನನ್ನ ಎಲ್‌ಐಸಿ ಪಾಲಿಸಿ ಸಂಖ್ಯೆ 723454442, 723093892 ಮತ್ತು ಪೋಸ್ಟ್ ಆಫೀಸ್ ಪಾಲಿಸಿ ಸಂಖ್ಯೆ.ಆರ್.ಕೆ.ಟಿ/ಎಸ್.ಕೆ/ಇಎ/184964 ರಲ್ಲಿ ನನ್ನ ಹೆಸರನ್ನು ಬಿ.ಕೆ. ಲೀಲಾವತಿ ಎಂದು ಉಲ್ಲೇಖಿಸಲಾಗಿದೆ, ಕಲಾವತಿ ಬಿ.ಕೆ. ಮತ್ತು ಬಿ.ಕೆ. ಲೀಲಾವತಿ ಎರಡೂ ಹೆಸರುಗಳು ಒಂದೇ ಮತ್ತು ಅದು ನನಗೆ ಮಾತ್ರ ಸೇರಿದೆ ಎಂದು ನಾನು ಈ ಮೂಲಕ ದೃಢೀಕರಿಸುತ್ತೇನೆ ಮತ್ತು ಪ್ರಮಾಣ ಮಾಡುತ್ತೇನೆ. ಇನ್ನು ಮುಂದೆ ನಾನು ನನ್ನ ಎಲ್ಲಾ ವಹಿವಾಟುಗಳು, ವ್ಯವಹಾರಗಳು, ನಡಾವಳಿಗಳನ್ನು ಕಲಾವತಿ ಬಿ.ಕೆ. ಹೆಸರಿನಲ್ಲಿ ಮಾಡುತ್ತೇನೆ ಎಂದು ದಿನಾಂಕ 14–5–2025ರಂದು ನೋಟರಿ ಬಿ.ಕೆ. ಶಾಂತಾ ರವರ ಮುಂದೆ ಪ್ರಮಾಣೀಕರಿಸಿರುತ್ತೇನೆ.

ಸಹಿ/– ಕಲಾವತಿ ಬಿ.ಕೆ.



ನಗರಸಭಾ ಕಾರ್ಯಾಲಯ, ಹೂಟಗಳ್ಳಿ

ಎಸ್.ಆರ್.ಎಸ್. ಸ್ಟೇಷನ್ ಎದುರು, ಹೈಟೆನ್ಷನ್ ಜೋಡಿ ರಸ್ತೆ, ಹೂಟಗಳ್ಳಿ, ಮೈಸೂರು ಜಿಲ್ಲೆ – 570018, ಕಛೇರಿ : 0821-2001737
ಇಮೇಲ್: ka.hootagalli.cmc@gmail.com

ಸಂ: ನಸಹೂ:ಫವನಿ:ಐಇಸಿ:ಸಿಆರ್–01/2025–26 ದಿನಾಂಕ: 19.05.2025

ಆಸಕ್ತಿ ಅಭಿವ್ಯಕ್ತಿ (EXPRESSION OF INTEREST)

ಹೂಟಗಳ್ಳಿ ನಗರಸಭಾ ವ್ಯಾಪ್ತಿಯಲ್ಲಿ 03 ವರ್ಷಗಳ ಅವಧಿಗೆ ಪೂರ್ಣ ಸಮಯದ ಪಾತ್ರದ ಅಡಿಯಲ್ಲಿ IEC ಚಟುವಟಿಕೆಗಳನ್ನು ಕೈಗೊಳ್ಳಲು ಡೇ–ನಲ್ಮ್ ಯೋಜನೆಯಡಿ ನೋಂದಾಯಿತ SHG ಸದಸ್ಯರಿಂದ "ಆಸಕ್ತಿ ಅಭಿವ್ಯಕಿ"ಯನ್ನು ಆಹ್ವಾನಿಸಿದ್ದು, Day-NULMನಲ್ಲಿ, ನೋಂದಾಯಿಸಿಕೊಂಡಿರುವ ಆಸಕ್ತ SHG ಸದಸ್ಯರು ತಮ್ಮ ಆಸಕ್ತಿಯ ಅಭಿವ್ಯಕ್ತಿಯನ್ನು http://www.hootagallicity.mrc.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುವ ನಿಗದಿತ ನಮೂನೆಯಲ್ಲಿ **ದಿನಾಂಕ:28.05.2025ರ ಸಂಜೆ 5:00 ಗಂಟೆಯ ಒಳಗಾಗಿ** ಇಮೇಲ್ ವಿಳಾಸ: **ka.hootagalli.cmc@gmail.com** ಗೆ ಕಳುಹಿಸತಕ್ಕದು. ಆಸಕ್ತ SHG ಸದಸ್ಯರು 1. ಗುರುತಿನ ಪುರಾವೆ 2. ವಿಳಾಸ ಪುರಾವೆ 3. ಎಂಪನೇಲ್ಡ್ ದಾಖಲೆಗಳು 4. ಶೈಕ್ಷಣಿಕ ಅರ್ಹತೆ 5. Day-NULM ದೃಢೀಕರಣ ಪತ್ರದ ನಮೂನೆಯನ್ನು ಸಹ ಲಗತ್ತಿಸಬೇಕು. ಆಯ್ಕೆಯಾದ ಅಭ್ಯರ್ಥಿಗಳನ್ನು ಅವರ ಕೌಶಲ್ಯವನ್ನು ನಿರ್ಣಯಿಸಲು ವಿಷಯದ ಬಗ್ಗೆ ತಿಳುವಳಿಕೆಗಾಗಿ ಸಂದರ್ಶನಕ್ಕೆ ಕರೆಯಲಾಗುವುದು.

ಸಹಿ/– ಪೌರಾಯುಕ್ತರು
ನಗರಸಭೆ, ಹೂಟಗಳ್ಳಿ

DIPR/MYS/KAVITA/212/2025-26

ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್

(ಭಾರತ ಸರ್ಕಾರದ ಶಾಸನಬದ್ಧ ಸಂಸ್ಥೆ)
ನೆಲ್ಸನ್ ಮಂಡೇಲಾ ಮಾರ್ಗ, ವಸಂತ್ ಕುಂಜ್, ನವದೆಹಲಿ-110070
ದೂರವಾಣಿ ಸಂಖ್ಯೆ:011–29581000 ವೆಬ್‌ಸೈಟ್: www.aicte-india.org

ಸ್ವಯಂ ಘಟಕ

ಸ್ವಯಂ ವೇದಿಕೆಯ ಶೈಕ್ಷಣೇತರ ಕ್ರೆಡಿಟ್ ಕೋರ್ಸ್‌ಗಳ (ತಾಂತ್ರಿಕ ಶಿಕ್ಷಣ) ಅಭಿವೃದ್ಧಿಗಾಗಿ ಒಟ್ಟಾರೆ NIRFನ ವರ್ಗದ 100 ರ್‍ಯಾಂಕ್ ಒಳಗಿರುವ ಸಂಸ್ಥೆಗಳು / ವಿಶ್ವವಿದ್ಯಾನಿಲಯಗಳಿಂದ ಎಕ್ಸ್‌ಪ್ರೆಶನ್ ಆಫ್ ಇಂಟರೆಸ್ಟ್ (EOI) ಆಹ್ವಾನ.

ರಾಷ್ಟ್ರೀಯ ಡಿಜಿಟಲ್ ಉಪಕ್ರಮಗಳ ಅನ್ವೇಷಣೆಯಲ್ಲಿ ಭಾರತ ಸರ್ಕಾರ ಬೃಹತ್ ಮುಕ್ತ ಆನ್‌ಲೈನ್ ಕೋರ್ಸ್‌ಗಳನ್ನು (MOOCs) ಆಯೋಜಿಸಲು ಸ್ಥಳೀಯ ತಂತ್ರಜ್ಞಾನ ಸಶಕ್ತ ಕಲಿಕಾ ವೇದಿಕೆಯಾಗಿ ಸ್ವಯಂ ಅನ್ನು ಪ್ರಾರಂಭಿಸಿದೆ. ಹೊಸ ಸ್ವಯಂ ಮಾರ್ಗಸೂಚಿಗಳು, 2024ರ ಪ್ರಕಾರ Swayam ವೇದಿಕೆಯ ಶೈಕ್ಷಣೇತರ ಕ್ರೆಡಿಟ್ ಕೋರ್ಸ್‌ಗಳ (ತಾಂತ್ರಿಕ ಶಿಕ್ಷಣ) ಅಭಿವೃದ್ಧಿಯನ್ನು ಮೇಲ್ವಿಚಾರಣೆ ಮಾಡಲು ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ (AICTE) ಅನ್ನು ವರ್ಚುಯಲ್ ಸಂಯೋಜಕ (VC) ಎಂದು ನೇಮಿಸಲಾಗಿದೆ. ಅದರಂತೆ ಕ್ರೆಡಿಟ್ ಆನ್‌ಲೈನ್ ಕೋರ್ಸ್‌ಗಳನ್ನು ಅಭಿವೃದ್ಧಿಪಡಿಸಲು ಒಟ್ಟಾರೆ NIRFನ ವರ್ಗದ ಅಡಿಯಲ್ಲಿ 100 ರ್‍ಯಾಂಕ್ ಒಳಗಿರುವ ಸಂಸ್ಥೆಗಳು/ ವಿಶ್ವವಿದ್ಯಾನಿಯಗಳಿಂದ AICTE ಪ್ರಸ್ತಾವನೆಯನ್ನು ಆಹ್ವಾನಿಸಿದೆ.

ಪ್ರಸ್ತಾವನೆಯನ್ನು ಸ್ವೀಕರಿಸಲು ಜೂನ್ 4, 2025 ಕೊನೆಯ ದಿನವಾಗಿರುತ್ತದೆ. ಪ್ರಸ್ತಾವನೆಗಳ ವಿವರವಾದ ಮಾಹಿತಿಗಾಗಿ www.aicte-india.org ಗೆ ದಯವಿಟ್ಟು ಭೇಟಿ ನೀಡಿ.

Advt No: P&AP Bureau/AICTE/05 (01)/2025
ಸದಸ್ಯ ಕಾರ್ಯದರ್ಶಿ AICTE
CBC 21300/12/0004/2526

ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್

(ಭಾರತ ಸರ್ಕಾರದ ಶಾಸನಬದ್ಧ ಸಂಸ್ಥೆ)
ನೆಲ್ಸನ್ ಮಂಡೇಲಾ ಮಾರ್ಗ, ವಸಂತ್ ಕುಂಜ್, ನವದೆಹಲಿ-110070
ದೂರವಾಣಿ ಸಂಖ್ಯೆ:011–29581000 ವೆಬ್‌ಸೈಟ್: www.aicte-india.org

ಸ್ವಯಂ ಘಟಕ

ಸ್ವಯಂ ವೇದಿಕೆಯ ಸ್ವಯಂ ಚಾಲಿತ ಕೋರ್ಸ್‌ಗಳ ಅಭಿವೃದ್ಧಿಗಾಗಿ ಎಕ್ಸ್‌ಪ್ರೆಶನ್ ಆಫ್ ಇಂಟರೆಸ್ಟ್ (EOI) ಆಹ್ವಾನ.

ರಾಷ್ಟ್ರೀಯ ಡಿಜಿಟಲ್ ಉಪಕ್ರಮಗಳ ಅನ್ವೇಷಣೆಯಲ್ಲಿ ಭಾರತ ಸರ್ಕಾರ ಬೃಹತ್ ಮುಕ್ತ ಆನ್‌ಲೈನ್ ಕೋರ್ಸ್‌ಗಳನ್ನು (MOOCs) ಆಯೋಜಿಸಲು ಸ್ಥಳೀಯ ತಂತ್ರಜ್ಞಾನ ಸಶಕ್ತ ಕಲಿಕಾ ವೇದಿಕೆಯಾಗಿ ಸ್ವಯಂ ಅನ್ನು ಪ್ರಾರಂಭಿಸಿದೆ. ಹೊಸ ಸ್ವಯಂ ಮಾರ್ಗಸೂಚಿಗಳು, 2024ರ ಪ್ರಕಾರ ಸ್ವಯಂ ವೇದಿಕೆಯ ಸ್ವಯಂಚಾಲಿತ ಕೋರ್ಸ್‌ಗಳ ಅಭಿವೃದ್ಧಿಯನ್ನು ಮೇಲ್ವಿಚಾರಣೆ ಮಾಡಲು ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ (AICTE) ಅನ್ನು ವರ್ಚುಯಲ್ ಸಂಯೋಜಕ (VC) ಎಂದು ನೇಮಿಸಲಾಗಿದೆ. ಅದರಂತೆ ಹೊಸದಾಗಿ ಹೊರಹೊಮ್ಮುತ್ತಿರುವ ತಂತ್ರಜ್ಞಾನಗಳ ಕ್ಷೇತ್ರದಲ್ಲಿ ಸ್ವಯಂಚಾಲಿತ ಆನ್‌ಲೈನ್ ಕೋರ್ಸ್‌ಗಳನ್ನು ಅಭಿವೃದ್ಧಿಪಡಿಸಲು ಬೋಧಕರು/ ಸಾರ್ವಜನಿಕರು/ ಸಂಸ್ಥೆಗಳು/ ವಿಶ್ವವಿದ್ಯಾನಿಯಗಳಿಂದ AICTE ಪ್ರಸ್ತಾವನೆಯನ್ನು ಆಹ್ವಾನಿಸಿದೆ.

ಪ್ರಸ್ತಾವನೆಯನ್ನು ಸ್ವೀಕರಿಸಲು ಜೂನ್ 4, 2025 ಕೊನೆಯ ದಿನವಾಗಿರುತ್ತದೆ. ಪ್ರಸ್ತಾವನೆಗಳ ವಿವರವಾದ ಮಾಹಿತಿಗಾಗಿ www.aicte-india.orgಗೆ ದಯವಿಟ್ಟು ಭೇಟಿ ನೀಡಿ.

Advt No: P&AP Bureau/AICTE/05 (02)/2025
ಸದಸ್ಯ ಕಾರ್ಯದರ್ಶಿ AICTE
CBC 21300/12/0005/2526

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಬೋಗಾದಿ

ಮೈಸೂರು ತಾಲ್ಲೂಕು ಮತ್ತು ಜಿಲ್ಲೆ – 570 026
ಕಛೇರಿ : 0821-2331099, ಇಮೇಲ್: itstaff_ulb_bogadi@yahoo.com
ವೆಬ್‌ಸೈಟ್: www.bogaditown.mrc.gov.in

ಸಂ: ಪ.ಪಂ.ಬೋಗಾದಿ/ತಾ.ಶಾ./ಟೆಂಡರ್/ಸಿ.ಆರ್.04/2025–26 ದಿನಾಂಕ: 09.05.2025

ಟೆಂಡರ್ ಪ್ರಕಟಣೆ

2025–26ನೇ ಸಾಲಿನ ಮುನಿಸಿಪಲ್ ನಿಧಿಯಲ್ಲಿ ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಕುಡಿಯುವ ನೀರಿನ ಓವರ್ ಹೆಡ್ ಟ್ಯಾಂಕ್ ಮತ್ತು ಜಿ.ಎಸ್.ಎಲ್.ಆರ್ ಗಳನ್ನು ಸ್ವಚ್ಛಗೊಳಿಸುವುದು ಮತ್ತು ಇತರೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999 ಮತ್ತು ನಿಯಮಗಳು 2000ದಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ (ಕೆ.ಡಬ್ಲ್ಯೂ–1 ಡಾಕ್ಯೂಮೆಂಟ್‌ನಂತೆ) ಟೆಂಡರ್ ಆಹ್ವಾನಿಸಲಾಗಿದೆ. **1)** ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ರಾಮನಹುಂಡಿ, ರೈಲ್ವೆ ಬಡಾವಣೆ ಮತ್ತು ಸಾಲುಂಡಿ ಗ್ರಾಮಗಳ ಕುಡಿಯುವ ನೀರಿನ ಓವರ್ ಹೆಡ್ ಟ್ಯಾಂಕ್ ಮತ್ತು ಜಿ.ಎಲ್.ಎಸ್.ಆರ್ ಗಳನ್ನು ಸ್ವಚ್ಛಗೊಳಿಸುವ ಕಾಮಗಾರಿ. ಅಂದಾಜು ಮೊತ್ತ ರೂ.4.96 ಲಕ್ಷಗಳು, ಮುಂಗಡ ಠೇವಣಿ ರೂ.12,400/–, **2)** ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಬ್ಯಾಂಕ್ ಕಾಲೋನಿಯಲ್ಲಿ ಕುಡಿಯುವ ನೀರಿನ ಓವರ್ ಹೆಡ್ ಟ್ಯಾಂಕ್ ಮತ್ತು ಜಿ.ಎಲ್.ಎಸ್.ಆರ್ ಗಳನ್ನು ಸ್ವಚ್ಛಗೊಳಿಸುವ ಕಾಮಗಾರಿ. ಅಂದಾಜು ಮೊತ್ತ ರೂ.4.96 ಲಕ್ಷಗಳು, ಮುಂಗಡ ಠೇವಣಿ ರೂ.12,400/– **3)** ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಬೈಪಾಸ್ ರಸ್ತೆಯಿಂದ ಇಂದಿರಾ ಕ್ಯಾಂಟೀನ್‌ವರೆಗೆ ರಸ್ತೆ ದುರಸ್ಥಿ ಕಾಮಗಾರಿ ಅಂದಾಜು ಮೊತ್ತ ರೂ.4.95 ಲಕ್ಷಗಳು, ಮುಂಗಡ ಠೇವಣಿ ರೂ.12.375/– ಟೆಂಡರ್ ಫಾರಂ ಬೆಲೆ ರೂ.1000/– ಖಾಲಿ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಖಾಲಿ ಟೆಂಡರ್ ಫಾರಂಗಳನ್ನು ವಿತರಿಸಲು ಕೊನೆಯ **ದಿನಾಂಕ 23.05.2025 ಸಾಯಂಕಾಲ 3.00 ಗಂಟೆಯವರೆಗೆ.** ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ **ದಿನಾಂಕ:23.05.2025 ಸಾಯಂಕಾಲ 4.00 ಗಂಟೆಯೊಳಗೆ.** ಟೆಂಡರ್ ತೆರೆಯುವ **ದಿನಾಂಕ:26.05.2025ರ ಬೆಳಿಗ್ಗೆ 11.00 ಗಂಟೆಗೆ.** (ಸಾಧ್ಯವಾಗದಿದ್ದಲ್ಲಿ ಮುಂದಿನ ದಿನಾಂಕವನ್ನು ತಿಳಿಸಿ ಟೆಂಡರ್ ತೆರೆಯಲಾಗುವುದು).

ಸಹಿ/–
ಮುಖ್ಯಾಧಿಕಾರಿ
ಪಟ್ಟಣ ಪಂಚಾಯಿತಿ, ಬೋಗಾದಿ

DIPR/MYS/KAVITA/192/2025-26